
ಜನಶಕ್ತಿ
ದುಡಿಯುವ ಜನರ ಪ್ರಾಣಮಿತ್ರ
ಕನ್ನಡ ವಾರಪತ್ರಿಕೆ
Blog :janashakthi.wordpress.com e-mail : js_weekly@yahoo.com
ಸಂಪುಟ 8 ಸಂಚಿಕೆ 44
ನವೆಂಬರ್ 2, 2014
ಪುಟ 16 ರೂ. 10/-



# ಮಹಾರಾಷ್ಟ್ರ-ಹರ್ಯಾಣ ಫಲಿತಾಂಶ: ಅಲೆಯಲ್ಲ;

## ಚುನಾವಣಾ ಪದ್ಧತಿಯ ದೋಷದ ಫಲ



## ಬಾಂಬ್ ಸ್ಫೋಟ : 'ತೃಣಮೂಲ' ಸಂಪರ್ಕಗಳ ಅನಾವರಣ



## ಸೋಮಶೇಖರ್ ವರದಿ ತಿರಸ್ಕಾರ ಏಕೆ ಸರಿಯಲ್ಲ ?




## ಅನುದಾನ ರಹಿತ ಶಾಲೆಗಳ ಶುಲ್ಕ ನಿಗದಿ: ಡೊನೇಷನ್ ಲಾಬಿಗೆ ಸರಕಾರದ ಬೆಂಬಲ

# ದೇವರೇ ಇಲ್ಲವೆನ್ನುವ ಪಕ್ಕಾ ವೈದಿಕವಾದ ಮೀಮಾಂಸ ದರ್ಶನ

ದೇವರು ಇದ್ದಾನೆನ್ನುವುದಕ್ಕೆ ಸಾಕ್ಷ್ಯಾಧಾರಗಳಿಲ್ಲ. ಇಂದ್ರಿಯಾನುಭವವು ದೇವರ ಅಸ್ತಿತ್ವವನ್ನು ತೋರಿಸುವುದಿಲ್ಲ. ಜ್ಞಾನ ಮಾರ್ಗಗಳೆಲ್ಲವೂ ಇಂದ್ರಿಯಾನುಭವವನ್ನೇ ಆಧಾರವಾಗಿ ಹೊಂದಿವೆ. ಆದ್ದರಿಂದ ದೇವರು ಇದ್ದಾನೆನ್ನುವುದಕ್ಕೆ ಯಾವ ಸಾಕ್ಷ್ಯಾಧಾರಗಳೂ ಸಿಗುವುದಿಲ್ಲ.

ಮಕ್ಕಳಾಗುವುದಕ್ಕೆ ಮಾತಾ-ಪಿತೃಗಳ ಸಂಯೋಗವೇ ಕಾರಣವೆಂದು ಗೋಚರವಾಗುತ್ತಿದೆಯಲ್ಲದೆ ಭೌತಿಕಾತೀತವಾದ ದೇವರೆಂಬೊಬ್ಬ ಕಾರಣವೆಂದೇನೂ ಕಾಣಿಸುವುದಿಲ್ಲ. ಹೀಗಿರುವಾಗ ಮಕ್ಕಳುಂಟಾಗುವುದಕ್ಕೆ ನಿಜವಾಗಿ ಗೋಚರವಾಗುವುದಕ್ಕಿಂತ ಹೆಚ್ಚಿನದೇನನ್ನೋ ಕಲ್ಪಿಸಿಕೊಳ್ಳುವುದಾದರೂ ಏಕೆ?

ಇದನ್ನು ನಮ್ಮ ಕಾಲದ ವಿಜ್ಞಾನಿಗಳು, ವೈದ್ಯರನೇಕರೂ ಹೇಳುವುದಿಲ್ಲ. ತಾವೇ ದೇವರನ್ನು ಪೂಜೆ ಮಾಡುತ್ತಾರೆ. ಇತ್ತೀಚೆಗೆ ಇಸ್ರೋದಂತಹ ಅನೇಕ ಉಪಗ್ರಹ, ಬಾಹ್ಯಾಕಾಶಯಾನಗಳನ್ನು ಯಶಸ್ವಿಯಾಗಿ ಉಡಾವಣೆ ಮಾಡಿದ ಸಂಸ್ಥೆಯ ಅಧ್ಯಕ್ಷರಾದ 'ಮಹಾ' ವಿಜ್ಞಾನಿಗಳೇ ತಿರುಪತಿಗೆ ಹೋಗಿ ನೂರೆಂಟು ಕಾಯಿ ಒಡೆಯುವ ಚಿತ್ರವನ್ನು ನಾವೆಲ್ಲ ನೋಡಿದ್ದೇವೆ. ಇನ್ನು ವೈದ್ಯರುಗಳಂತೂ ತಮ್ಮ ಖಾಸಗಿ ಆಸ್ಪತ್ರೆಗಳಿಗೆ ಬಂದ ಗರ್ಭಿಣಿಯರಿಗೆ, ರೋಗಿಗಳಿಗೆ ನಮ್ಮ ಕೈಲಾದ್ದೆಲ್ಲವನ್ನೂ ಮಾಡಿದ್ದೇವೆ. ಇನ್ನು ದೇವರ ಕೃಪೆಯೆಂದು ಹೇಳುತ್ತಾ ತಮ್ಮ ದುಬಾರಿ ಬಿಲ್ಲಿನ ಹಣವನ್ನು ವಸೂಲಿ ಮಾಡಿಕೊಳ್ಳುವುದರಲ್ಲಿ ಮತ್ತು ಆ ಹಣದ ಒಂದು ಭಾಗವನ್ನು ಮನೆಯಲ್ಲಿ ಎತ್ತರ, ಎತ್ತರವಾದ ದೇವರ ಮಂಟಪವನ್ನು ದೇವರ ಕೋಣೆಗಳನ್ನು ಕಟ್ಟುವುದಕ್ಕೆ ಹಾಕುತ್ತಾರೆ.




ಅಂತಹ ಪರಿಸ್ಥಿತಿಯಲ್ಲಿ ದೇವರು ಇದ್ದಾನೆನ್ನುವುದಕ್ಕೆ ಸಾಕ್ಷ್ಯಾಧಾರಗಳಿಲ್ಲ ಎಂದು ಹೇಳುವ ಈ ವಿಚಾರ ಯಾರೋ 20-21ನೆಯ ಶತಮಾನದ ನಾಸ್ತಿಕರು ಅಥವಾ ಕಮ್ಯೂನಿಸ್ಟರದಲ್ಲ. ಬದಲಾಗಿ ವೇದಗಳ ಬಗ್ಗೆ ವೇದಾಂತಿಗಳಿಗಿಂತ ದೃಢವಾದ ನಂಬಿಕೆಯನ್ನು ಪ್ರದರ್ಶಿಸುವ ಮೀಮಾಂಸಕರದು. ವೇದಗಳನ್ನು ಸ್ವರೂಪತಃ ದೋಷರಹಿತವಾದ ಪ್ರಮಾಣ ಎಂದು ಒಪ್ಪಿಕೊಂಡು ಅದಕ್ಕೆ ನಿಷ್ಠವಾಗಿರುವುದು ಈ ದರ್ಶನದ ವಿಶಿಷ್ಟ ಲಕ್ಷಣ ಎಂದು ಪ್ರಸಿದ್ಧ ತತ್ವಶಾಸ್ತ್ರಜ್ಞರಾದ ಪ್ರೊ. ಹಿರಿಯಣ್ಣನವರು ಹೇಳುತ್ತಾರೆ. ಮೀಮಾಂಸಕರ ವಿಚಾರಗಳು ಸರಿಸುಮಾರು ಉಪನಿಷತ್ ಕಾಲದಷ್ಟು ಹಳೆಯವು. ಈ ವಿಚಾರಗಳಿಗೆ ಪೂರ್ವ ಮೀಮಾಂಸ ಎನ್ನುತ್ತಾರೆ. ಉಪನಿಷತ್ ಆಧಾರದ ವೇದಾಂತವನ್ನು ಉತ್ತರ ಮೀಮಾಂಸ ಎನ್ನುತ್ತಾರೆ. ಅದರ ಅರ್ಥವೇನೇಂದರೆ ಈ ವಿಚಾರ ಸರಣಿ ಉಪನಿಷತ್ತುಗಳಿಗಿಂತ ಹಿಂದಿನ ವೇದಭಾಗಗಳ ಉಪದೇಶಕ್ಕೆ ಸಂಬಂಧಿಸಿದ್ದು. ಬ್ರಾಹ್ಮಣಗಳಿಂದ ಆರಂಭವಾಗುವ ಈ ವಿಚಾರ ಸರಣಿ ಮುಂದೆ ಬೆಳೆಯುತ್ತಾ ವೇದಾಂತದ 'ಬ್ರಹ್ಮ ಸತ್ಯ-ಜಗನ್ಮಿಥ್ಯ' ಎಂಬ ಮಾಯಾವಾದದ ವಿಚಾರಗಳನ್ನು ನಿರಾಕರಿಸುತ್ತಾ ಬೆಳೆದಿವೆ. ಇದಕ್ಕೆ ಮೂಲ ಗ್ರಂಥವಾಗಿ ಇಂದು ಲಭ್ಯವಾಗಿರುವುದು ಕ್ರಿ. ಪೂ. 200 ರಲ್ಲಿ ಬರೆದಿದ್ದೆನ್ನಲಾದ ಜೈಮಿನಿಯ ಮೀಮಾಂಸ ಸೂಕ್ತ. ನಂತರ ಅದಕ್ಕೆ ಕ್ರಿ. ಶ. 400ರಲ್ಲಿ ಶಬರನೆಂಬವನು ಬರೆದ ಶಾಬರ ಭಾಷ್ಯ. ನಂತರ ಪ್ರಭಾಕರ, ಕುಮಾರಿಲ ಭಟ್ಟ ಮೊದಲಾದ ಭಾಷ್ಯಕಾರರು ನೀಡಿದ ವಿವರಣೆಗಳು ಈ ವಿಚಾರ ಸರಣಿಯನ್ನು ಬೆಳೆಸುತ್ತಾ ಬಂದಿವೆ.


ಈ ಮೀಮಾಂಸಕರು ದೇವರಿಲ್ಲ ಎಂಬುದಕ್ಕೆ ಬಲವಾದ ಆಧಾರಗಳನ್ನು ಮುಂದಿಡುತ್ತಾರೆ. ಮಾತ್ರವಲ್ಲ, ಈ ಜಗತ್ತು ಮಾಯಾಲೋಕ ಅನಿತ್ಯ, ಅಸತ್ಯ, ಕೇವಲ ಭ್ರಮೆಯಷ್ಟೇ. ಚೇತನ ಮಾತ್ರ, ಚಿಂತನೆ ಮಾತ್ರ ಇವುಗಳ ಸಾಂದ್ರ ರೂಪವಾದ ಆತ್ಮ, ಬ್ರಹ್ಮ ಮಾತ್ರ ಸತ್ಯ ಎನ್ನುವ ವಾದವನ್ನೂ ಅಲ್ಲಗಳೆಯುತ್ತಾರೆ. ವೇದಾಂತ ಮತ್ತು ಅದರ ಆತ್ಮ- ಪರಮಾತ್ಮ, ಸರ್ವಂ ಖಲ್ವಿದಂ ಬ್ರಹ್ಮಂ ಮೊದಲಾದ ವಿಚಾರಗಳು ಮಾತ್ರವೇ ಭಾರತೀಯ ತತ್ವಜ್ಞಾನ ಎಂದು ಬಿಂಬಿಸಿ ಅದರ ಆಧಾರದ ಮೇಲೆ ಮೇಲು ಕೀಳುಗಳ ವರ್ಣ ವ್ಯವಸ್ಥೆಯ-ಜಾತಿ ಪದ್ಧತಿಯ ಸಾಮಾಜಿಕ ವ್ಯವಸ್ಥೆಯನ್ನು ಹೇರುವುದಕ್ಕೆ ಸಾಧನವಾಗಿ ಮಾಡಿಕೊಳ್ಳಲಾಗಿದೆ. ವೇದಗಳನ್ನು ಕೇವಲ ಹೆಸರಿಗೆ ಮಾತ್ರ ಬಳಸಿಕೊಳ್ಳುವ ವೇದಾಂತದ ವಿವಿಧ ಆಚಾರ್ಯರುಗಳ ದೈವವಾದಕ್ಕೆ ವಿರುದ್ಧವಾಗಿ ವೇದಗಳನ್ನೇ ನಂಬಿದ ಮತ್ತು ಅವುಗಳನ್ನು ಸಮರ್ಥಿಸುವುದಕ್ಕಾಗಿಯೇ ದೇವರ ಅಸ್ತಿತ್ವವನ್ನೇ ನಿರಾಕರಿಸುವ ಮೀಮಾಂಸೆಯ ವಿಚಾರ ಸರಣಿ ಇಂದಿನ ನಮಗೆ, ಜನ ಸಾಮಾನ್ಯರಿಗೆ ಮುಖ್ಯವಾಗುತ್ತದೆ.

ಜಗತ್ತಿನ ಸೃಷ್ಟಿಗೆ ದೇವರೆಂಬುವನೊಬ್ಬ ಬೇಕು ಎಂಬುದಕ್ಕೆ ದೈವವಾದಿಗಳು ಸರ್ವೇಸಾಮಾನ್ಯವಾಗಿ ಕೊಡುವ ಉದಾಹರಣೆ ಕುಂಬಾರ ಮತ್ತು ಮಡಕೆ. ಹೇಗೆ ಮಡಕೆ ಮೊದಲಾದ ವಸ್ತುಗಳನ್ನು ಮಾಡುವುದಕ್ಕೆ ಬೇಕೋ ಹಾಗೆಯೇ ಈ ಜಗತ್ತಿನ ಸೃಷ್ಟಿಗೆ ದೇವನೊಬ್ಬ ಬೇಕು ಎಂದು. ಈ ವಾದವನ್ನು ಮೀಮಾಂಸಕರು ಅದರ ವಿರುದ್ಧವೇ ತಿರುಗಿಸಿದರು. ಮಡಕೆಯ ತಯಾರಿಕೆಗೆ ನಮಗೆಲ್ಲಾ ಗೋಚರವಾಗುವಂತೆ ಕುಂಬಾರ. ಆಗ ಜಗತ್ತಿನ ಸೃಷ್ಟಿಗೆ ದೇವನೇ ಕಾರಣ ಎಂದಾದರೆ ಮಡಕೆಯ ತಯಾರಿಕೆಗೆ ಕುಂಬಾರ ಕಾರಣನಲ್ಲ ಎಂದಾಗುತ್ತದೆ. ಹೀಗೆ ಕುಂಬಾರ ಹೇಗೆ ಮಡಕೆಯ ಸೃಷ್ಟಿಗೆ ಕಾರಣನೋ ಹಾಗೆ ಎಂಬ ಉದಾಹರಣೆಯೇ ನಿರರ್ಥಕ ಎಂದರು. ಹಾಗೆಯೇ ಮಾನವನ ಅದೃಷ್ಟವನ್ನು ದೇವರು ನಿಯಂತ್ರಿಸುತ್ತಾನೆಂಬ ಬಗ್ಗೆ ಕೂಡ ಅವರು ಯಾವುದೇ ಜ್ಞಾನವಾದರೂ ಶರೀರದೊಂದಿಗೆ ಸಂಬಂಧವಿರುವ ಮನಸ್ಸಿನ ಕ್ರಿಯೆಯಿಂದ ಉದ್ಭವಿಸುವಂತಹದು. ಆದ-ರೆ ದೇವರು ಶರೀರ ರಹಿತನೆಂದು ಹೇಳುತ್ತಾರೆ. ಹಾಗಾದರೆ ಅದೃಷ್ಟದ ತಿಳುವಳಿಕೆಯೂ ಅವನಿಗೆ ಲಭ್ಯವಾಗಲು ಸಾಧ್ಯವಾಗುದಿಲ್ಲ ಎನ್ನುತ್ತಾರೆ.

ಸೃಷ್ಟಿಯ ಬಗ್ಗೆ ಕೂಡ ದೇಹವಿಲ್ಲದ ಆತ್ಮವು ಏನನ್ನೂ ಸೃಷ್ಟಿ ಮಾಡುವುದು ಸಾಧ್ಯವಿಲ್ಲ. ಆದ್ದ-ರಿಂದ ಸೃಷ್ಟಿಕರ್ತನಿಗೆ ಒಂದು ಶರೀರ ಬೇಕೆ ಬೇಕು. ಆದರೆ ಯಾರೂ ತಮ್ಮ ಸ್ವಂತ ಶರೀರವನ್ನು ತಾವೇ ಸೃಷ್ಟಿ ಮಾಡಿಕೊಳ್ಳಲಾಗುವುದಿಲ್ಲ. ಸೃಷ್ಟಿಕರ್ತನ ಶರೀರವನ್ನು ಸೃಷ್ಟಿ ಮಾಡಲು ಮತ್ತೊಬ್ಬ ಸೃಷ್ಟಿಕರ್ತನೇ ಬೇಕಾಗುತ್ತದೆ. ಎಂಬ ಪ್ರಶ್ನೆ ಎತ್ತಿದ್ದಾರೆ.

### ಸೃಷ್ಟಿ ಮತ್ತು ಪ್ರಳಯ

ಮೀಮಾಂಸಕರು ಸೃಷ್ಟಿ ಮತ್ತು ಪ್ರಳಯ ಎಂಬ ಕಲ್ಪನೆಗಳು ಹೆಚ್ಚೆಂದರೆ ಕಟ್ಟು ಕಥೆಗಳೆಂದು ಸಕಾರಣವಾಗಿ ಮತ್ತು ಸುದೀರ್ಘವಾಗಿ ವಿವರಿಸಿದ್ದಾರೆ. ವಿಶ್ವದಲ್ಲಿರುವ ವಿವಿಧ ವಸ್ತುಗಳಿಗೆ ಆದಿ ಮತ್ತು ಅಂತ್ಯ ಇರುತ್ತವೆ. ವಿವಿಧ ವಸ್ತುಗಳು ಅಸ್ತಿತ್ವಕ್ಕೆ ಬರುವುದು ಮತ್ತು ಅಸ್ತಿತ್ವವನ್ನು ಕಳೆದುಕೊಳ್ಳುವುದು ಎಂಬ ಒಂದು ಪ್ರಕ್ರಿಯೆಯು ಮಾತ್ರ ನಿರಂತರವಾಗಿ ನಡೆಯುತ್ತಿರುತ್ತದೆ. ಆದ್ದರಿಂದಲೆ ಇಡೀ ಜಗತ್ತು ಸೃಷ್ಟಿಯಾಗುವುದು ಮತ್ತು ನಾಶವಾಗುವ ಪ್ರಶ್ನೆ ಉದ್ಭವಿಸುವುದಿಲ್ಲ. ಜಗತ್ತು ಕೂಡ ನಿರಂತರವಾಗಿ ಅಸ್ತಿತ್ವದಲ್ಲಿರುತ್ತದೆ ಎಂದು ವಿವರಿಸಿದ್ದಾರೆ.




### ಭ್ರಮಾವಾದ ಮತ್ತು ಸ್ವಪ್ನದ ಉದಾಹರಣೆ

ಜಗತ್ತಿಗೆ ಸ್ವಂತದ ಅಸ್ತಿತ್ವ ಇಲ್ಲದಿರುವಾಗ ಅದು ಕೇವಲ ಬರೇ ಕನಸಿನಲ್ಲಿ ಕಾಣುವ ದೃಶ್ಯದಂತೆ ಮಿಥ್ಯೆ ಅಥವಾ ಹಗ್ಗವನ್ನು ನೋಡಿ ಹಾವೆಂದು ಹಲವೊಮ್ಮೆ ಭ್ರಮಿಸುವಂತೆ ಕೇವಲ ಭ್ರಮೆ ಎಂದು ವೇದಾಂತಿಗಳ ವಾದ. ಬ್ರಹ್ಮ ಮಾತ್ರ ಸತ್ಯ ಎಂದು ಸಾಬೀತುಪಡಿಸಲು ಜಗತ್ತು ಸತ್ಯವಲ್ಲವೆಂದು ಋಜುವಾತು ಮಾಡಲು ಹೆಣಗುತ್ತಾರೆ. ಮೀಮಾಂಸಕರು ಇದನ್ನೆಲ್ಲ ತಮ್ಮ ಸಾಧಾರವಾಗಿ ತೂಗಿ ಎಸೆಯುತ್ತಾರೆ. ಸ್ವಪ್ನದಲ್ಲಿ ಕಾಣುವ ಸಂಗತಿಗಳು ಯಾವುವು. ಜಗತ್ತಿನಲ್ಲಿ ಅಸ್ತಿತ್ವದಲ್ಲಿ ಇರುವ ವಸ್ತುಗಳು ಮತ್ತು ಸ್ವಪ್ನ ಕಾಣುತ್ತಿರುವವನು ಎಂದೋ ಕಂಡ ಸಂಗತಿಗಳೇ ಅಲ್ಲವೇ? ವಾಸ್ತವಿಕ ಪ್ರಪಂಚದಲ್ಲಿ ವಸ್ತುಗಳನ್ನು ಕಾಣುವಂತೆ ಸ್ವಪ್ನದಲ್ಲಿ ವಸ್ತುಗಳನ್ನು ಕಾಣುವುದಿಲ್ಲ. ಬದಲಾಗಿ ಅದು ಕಾಣ್ಕೆಯಾಗಿರದೆ ವಸ್ತುವನ್ನು ಕಂಡದ್ದರ ಸ್ಮರಣೆ-ಯ ಒಂದು ರೂಪವಾಗಿದೆ. ಯಾವುದಾದರೂ ಒಂದು ವಸ್ತುವನ್ನು ಯಾವಾಗಲಾದರೂ ನಿಜವಾಗಿ ಕಂಡದ್ದನ್ನು ನೆನಪಿಗೆ ತಂದುಕೊಳ್ಳುವುದೇ ಸ್ಮರಣ ಕ್ರಿಯೆ. ಸ್ವಪ್ನದಲ್ಲಿ 'ಕಾಣುವುದೂ' ಹಾಗೆ ಸ್ಮರಣೆ-ಯ ಒಂದು ರೂಪ ಎಂದು ವಿವರಿಸಿದರು. ಹೀಗೆ ಸ್ವಪ್ನಗಳ ವೈಜ್ಞಾನಿಕ ವಿವರಣೆಯನ್ನೂ ಈ ಮೂಲಕ ಮಾಡಿದರು.

ಇದು ಅವರು ಎತ್ತಿದ ಒಂದು ಪ್ರಶ್ನೆಯಾದರೆ ಮತ್ತೊಂದು ಸ್ವಪ್ನದಲ್ಲಿ ಕಂಡದ್ದೆಲ್ಲ ನಿಜವಲ್ಲ. ಆದ್ದರಿಂದ ಸ್ವಪ್ನದಲ್ಲಿ ಕಂಡದ್ದಕ್ಕೂ ಎಚ್ಚರವಾದ ಮೇಲೆ ಕಂಡದ್ದಕ್ಕೂ ವ್ಯತ್ಯಾಸವೇ ಇಲ್ಲವೇ? ಸಪ್ನದಲ್ಲಿ ಕಂಡಂತೆ ವಾಸ್ತವದಲ್ಲಿ ಕಾಣುವುದೂ ಕೇವಲ ನಮ್ಮ ಮನಸ್ಸಿನ ಸೃಷ್ಟಿಯೇ? ಆದರೆ ನಮ್ಮ ಮನಸ್ಸಿನ ಭಾವನೆಗಳನ್ನು ಬದಲಾಯಿಸಿದಂತೆ ವಸ್ತುಗಳನ್ನೂ ಮಾರ್ಪಾಟು ಮಾಡಬಹುದೇ? ವಾಸ್ತವದಲ್ಲಿ ಬಟ್ಟೆಯನ್ನು ಗಡಿಗೆಯೆಂದು ಭಾವಿಸಿ ನೋಡಲಾಗುವುದಿಲ್ಲ. ಗಡಿಗೆ ಗಡಿಗೆಯೇ ಬಟ್ಟೆ ಬಟ್ಟೆಯೇ. ಆದ್ದರಿಂದ ನಮಗೆ ಗೋಚರಿಸುವುದು ಹೊರಗಿನ ನಿಶ್ಚಿತ ವಸ್ತುಗಳೇ ಹೊರತು ನಮ್ಮ ಮನಸ್ಸಿನ ಭಾವನೆಗಳಲ್ಲ. ಹಗ್ಗವನ್ನು ಹಾವೆಂದು ಭ್ರಮೆಗೆ ಒಳಗಾಗುವುದೂ ಕೂಡ ಸಾಕಷ್ಟು ಬೆಳಕಿಲ್ಲದುದರಿಂದ ಉಂಟಾಗುವ ದೋಷವೇ ಹೊರತು ಹಗ್ಗವನ್ನೇ ಹಾವೆಂದು ಮನಸ್ಸು ಕಲ್ಪಿಸಿಕೊಂಡದ್ದಲ್ಲ. ನಮಗೆ ಕಾಣುವ ವಸ್ತುಗಳು ಸ್ಪಷ್ಟವಾಗಿರುತ್ತವೆ. ಒಂದೊಂದೂ ವಿಶಿಷ್ಟವಾಗಿರುತ್ತವೆ. ನಿಶ್ಚಿತವಾಗಿರುತ್ತವೆ. ಅವುಗಳಿಗೆ ಅವುಗಳದ್ದೇ ಆದ ಗುಣ ಸ್ವರೂಪಗಳಿರುತ್ತವೆ. ನಮಗೆ ಬೇಕಾದಂತೆ ಕಾಣುವ ಆಯ್ಕೆ ನಮಗಿರುವುದಿಲ್ಲ. ವಸ್ತು ಹೇಗಿದೆಯೋ ಹಾಗೆಯೇ ಕಾಣುತ್ತದೆ. ಆದ್ದರಿಂದ ಮೀಮಾಂಸಕರು ವೇದಾಂತಿಗಳ ವಾದಗಳನ್ನು ಜಗತ್ತು ಸುಳ್ಳು ಎಂಬುದನ್ನು ನಿರಾಕರಿಸಿದರು. ನಮ್ಮ ಇಂದ್ರಿಯಗಳ ಅನುಭವಗಳೇ ಜ್ಞಾನದ ಮೂಲವೆಂಬುದನ್ನು ಪುರಸ್ಕರಿಸಿದರು. ಅವರು ಹೀಗೆ ಹೇಳಿದರು:

**"ಬಾಹ್ಯ ವಸ್ತುಗಳನ್ನು ಕುರಿತ ಎಲ್ಲ ಜ್ಞಾನವೂ ಸತ್ಯ."**

ಮೀಮಾಂಸಕಾರರು ಈ ಮೂಲಕ ಭಾರತೀಯ ತತ್ವಜ್ಞಾನಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ. ವೇದಗಳ ಮೇಲೆ ಆಧರಿಸಿಯೇ ಈ ಪ್ರಪಂಚ ಅಸತ್ಯ ಎಂಬ ವಾದವನ್ನು ಮಂಡಿಸುತ್ತೇವೆಂಬ ವೇದಾಂತಿಗಳ ವಾದಗಳನ್ನು ತಳ್ಳಿಹಾಕಿದ್ದಾರೆ. ಹೊರ ಜಗತ್ತಿನ ವಸ್ತು ಪ್ರಪಂಚದ ಬಗ್ಗೆ ಮತ್ತು ಮನುಷ್ಯನ ಜ್ಞಾನದ ಮೂಲದ ಬಗ್ಗೆ ವಾಸ್ತವವಾದೀ, ಭೌತವಾದೀ ತಿಳುವಳಿಕೆಯನ್ನು ಹೊಂದಿದ್ದಾರೆ ಮತ್ತು ಬೆಳೆಸಿದ್ದಾರೆ.

ವೇದಗಳನ್ನು ದೋಷರಹಿತ ಪ್ರಮಾಣಗಳೆಂದು ಭಾವಿಸಿ ಅದಕ್ಕೆ ನಿಷ್ಠವಾದ ವಿಚಾರ ಸರಣಿಯೊಂದು ಹೀಗೆ ದೇವರೇ ಇಲ್ಲ ಅಥವಾ ಅದರ ಅಗತ್ಯವೇ ಇಲ್ಲವೆಂಬ ತೀರ್ಮಾನಕ್ಕೆ ಬರುವುದು ಹೇಗೆ? ಇದು ಬಹಳ ಚರ್ಚೆಗೆ ಎಡೆ ಮಾಡಿಕೊಡುವಂತಹುದು. ಆದ-ರೆ ನಾವು ಋಗ್ವೇದ ಅಥರ್ವಣ ವೇದಗಳ ಬಗ್ಗೆ ಹಿಂದೆ ವಿವರಿಸಿದುದನ್ನು ನೆನಪಿಸಿಕೊಳ್ಳಿ. ವೇದಗಳಲ್ಲಿರುವ ಋಕ್ಕುಗಳು ಜನರ ಬದುಕಿಗೆ ಬೇಕಾಗುವ ಆಹಾರ ಮತ್ತು ದೈನಂದಿನ ಜೀವನದ ಭಯ, ಸಂತೋಷವನ್ನು ಕುರಿತಾದವು. ಅವರ ಯಜ್ಞ, ಯಾಗಗಳೂ ತಮ್ಮ ಮೂಲ ಸ್ವರೂಪದಲ್ಲಿ ಆಹಾರದ ಹಂಚಿಕೆಯ ವಿಧಾನಗಳು. ಅವರ ದೇವತೆಗಳೆಲ್ಲ ನಿತ್ಯ ಜೀವನದ ಆಧಾರವಾದ ಪ್ರಾಕೃತಿಕ ವಸ್ತುಗಳಾದ ಅಗ್ನಿ, ಸೂರ್ಯ, ವರುಣ ಇತ್ಯಾದಿ. ಇನ್ನು ಪ್ರಾಕೃತಿಕ ವಸ್ತುವಲ್ಲದ ದೇವತೆಯಾದ ಇಂದ್ರನೂ ಅವರಿಗೆ ತಮ್ಮ ಆಹಾರ ಮತ್ತು ಭದ್ರತೆಯನ್ನು ಖಾತರಿಪಡಿಸಲು ನೆರವಾಗುವ ದೇವತೆಯೇ. ಈ ನಿತ್ಯದ ಬದುಕು ಮತ್ತು ಅದರ ವಸ್ತು ಪ್ರಪಂಚ ಮಿಥ್ಯೆಯೆಂದು ವೇದಾಂತ ಸಾರ ಹೊರಟಾಗ ವೇದ ನಿಷ್ಠರಾದ ಮೀಮಾಂಸಕಾರರು ಅದರ ವಿರುದ್ಧ ನಿಲ್ಲಬೇಕಾಯಿತು. ಮತ್ತು ವಾದಕ್ಕೆ ವಾದ ಬೆಳೆಯುತ್ತಾ ಅವರು ವೇದದ ದೇವತೆಗಳ ದೈವತ್ವವನ್ನೂ ನಿರಾಕರಿಸಿದರು. ವೇದದ ದೇವತೆಗಳಿಗೆ ಅನುಗ್ರಹ ಶಕ್ತಿಯೆಂಬುದೇನಿಲ್ಲ. ಅದೆಲ್ಲಾ ಯಜ್ಞ ಮತ್ತು ಯಾಗದ ಕ್ರಿಯೆಯ ಪರಿಣಾಮ ಎಂದರು. ರೈತ ಭೂಮಿಯನ್ನು ಉಳುಮೆ ಮಾಡುವುದರ ಪ್ರತ್ಯಕ್ಷ ಹಾಗೂ ಪರೋಕ್ಷ ಪರಿಣಾಮವಾಗಿ ಬೆಳೆ ಬರುವಂತೆ ಯಜ್ಞ, ಯಾಗಾದಿಗಳನ್ನು ಆಚರಿಸಿದುದರ ಪರಿಣಾಮವಾಗಿ ಫಲ ದೊರುಕುತ್ತದೆ ಎಂದರು.

ಹೀಗೆ ಬದುಕು, ಋಗ್ವೇದ ಮೊದಲಾದ ವೇದಗಳಲ್ಲಿ ವಿವರಿಸಲ್ಪಟ್ಟ ಜನರ ಬದುಕು ಮೀಮಾಂಸಕರ ಮೇಲೆ ತನ್ನ ಪ್ರಭಾವ ಬೀರಿತು. ಜನರ ಬದುಕನ್ನು, ಆ ಮೂಲಕ ಜನರನ್ನೇ ತಿರಸ್ಕಾರದಿಂದ ಕಂಡ ವೇದಾಂತಿಗಳ ವಾದಗಳ ವಿರುದ್ಧ ಜನರ ಬದುಕು ತನ್ನ ವಾದವನ್ನು ಮೀಮಾಂಸಕಾರರ ಮೂಲಕ ಮಂಡಿಸಿತೆನ್ನಬೇಕು. ಉಪನಿಷತ್ತುಗಳಲ್ಲಿನ ಬೌದ್ಧಿಕ ರಚನೆಗಳನ್ನು ಮತ್ತು ಅದರಲ್ಲಿ ಯಾವುದನ್ನು ಆರಿಸಿಕೊಂಡು ಬೆಳೆಸಲಾಯಿತು ಮತ್ತು ಭಾರತದಾದ್ಯಂತ ಹರಡಲಾಯಿತು, ಭಾರತದ ಸಮಾಜದ ಮೇಲೆ ಯಾವ ಪರಿಣಾಮಗಳಾದವು ಎಂಬುದನ್ನು ಅರಿಯುವ ಮೊದಲು ಭಾರತದಲ್ಲಿ ಈ ಚಿಂತನಾ ಸರಣಿಯೂ ಬೆಳೆದಿತ್ತು ಎಂಬುದನ್ನು ತಿಳಿದುಕೊಳ್ಳುವುದು ಅತ್ಯವಶ್ಯವೆಂದು ಈ ಮೀಮಾಂಸಕರ ವಿಚಾರಗಳ ಬಗೆಗೆ ಈ ಲೇಖನದಲ್ಲಿ ವಿವರಿಸಲಾಗಿದೆ. ●

ಜನಶಕ್ತಿ
ಕನ್ನಡ ವಾರಪತ್ರಿಕೆ

## ಸೋಮಶೇಖರ್ ವರದಿ ತಿರಸ್ಕಾರ ಏಕೆ ಸರಿಯಲ್ಲ?



ನಿತ್ಯಾನಂದಸ್ವಾಮಿ

2008–2009 ರ ನಡುವೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ರಾಜ್ಯದ ವಿವಿಧೆಡೆ ಕ್ರೈಸ್ತ ಪ್ರಾರ್ಥನಾ ಮಂದಿರಗಳ ಮೇಲೆ ನಡೆದ ದಾಳಿ ಪ್ರಕರಣಗಳ ಕುರಿತು ತನಿಖೆಗೆ ನೇಮಿಸಲಾಗಿದ್ದ ನ್ಯಾಯಮೂರ್ತಿ ಬಿ.ಕೆ. ಸೋಮಶೇಖರ್ ಆಯೋಗವು ಸಲ್ಲಿಸಿರುವ ವರದಿಯನ್ನು ರಾಜ್ಯ ಸರ್ಕಾರ ತಿರಸ್ಕರಿಸಿರುವುದು ಸರಿಯಲ್ಲ ಎಂದು ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಕೆ.ಎಸ್.ಈಶ್ವರಪ್ಪ ಹೇಳಿದ್ದಾರೆ. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಹ ರಾಜ್ಯ ಸರ್ಕಾರದ ಕ್ರಮವನ್ನು ಪ್ರಶ್ನಿಸಿದ್ದಾರೆ. ವರದಿ ತಿರಸ್ಕಾರದ ಹಿಂದೆ ರಾಜಕೀಯವಿದೆ ಎಂದು ಪೇಜಾವರ ಮಠಾಧೀಶ ವಿಶ್ವೇಶ ತೀರ್ಥರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಸರ್ಕಾರದ ಈ ಕ್ರಮವನ್ನು ಕ್ರೈಸ್ತ ಸಮುದಾಯ ಸ್ವಾಗತಿಸಿದೆ. ಆಯೋಗದ ಮುಂದೆ ಕ್ರೈಸ್ತ ಸಮುದಾಯದ ಪರ ವಾದವನ್ನು ಮಂಡಿಸಿದ್ದ ನ್ಯಾಯವಾದಿ ಎಂ. ಪಿ. ನೊರೊನ್ಹ ಮತ್ತು ನ್ಯಾಯವಾದಿ ಬಿ. ಇಬ್ರಾಹೀಂ ರಾಜ್ಯ ಸರ್ಕಾರದ ನಡೆಯನ್ನು ಸ್ವಾಗತಿಸಿದ್ದಾರೆ.

2008 ರ ಸೆಪ್ಟಂಬರ್ 14 ರಂದು ಪ್ರಥಮವಾಗಿ ಮಂಗಳೂರಿನ ಮಿಲಾಗ್ರಿಸ್ ಚರ್ಚ್ ಸಮೀಪದ ಕ್ರೈಸ್ತ ಭಗಿನಿಯರ ಆಶ್ರಮದ ಮೇಲೆ ದಾಳಿ ನಡೆದಿತ್ತು. ಅದರ ಬಳಿಕ 2009 ರ ವರೆಗೂ, ದ.ಕ. ಜಿಲ್ಲೆಯಲ್ಲಿ ಮತ್ತು ರಾಜ್ಯದ ಅನೇಕ ಕಡೆಗಳಲ್ಲಿ ಚರ್ಚ್‌ಗಳು, ಕ್ರೈಸ್ತ ಸಂಘ ಸಂಸ್ಥೆಗಳ ಮೇಲೆ ದೌರ್ಜನ್ಯ ನಡೆದು ರಾಜ್ಯದ ಕ್ರೈಸ್ತ ಸಮುದಾಯ ತೀವ್ರ ಆಘಾತವನ್ನೂ ಅಪಾರ ಹಾನಿಯನ್ನೂ ಅನುಭವಿಸಿತ್ತು. ರಾಜ್ಯದಲ್ಲೆಡೆ, ವಿವಿಧ ಜನಸಮುದಾಯಗಳು ಜಾತಿ ಮತ ಬೇಧವಿಲ್ಲದೆ ಈ ದಾಳಿಯನ್ನು ಖಂಡಿಸಿದ್ದರು. ಯಾವುದೇ ಸಂದರ್ಭದಲ್ಲೂ ಬೀದಿಗಿಳಿಯಲು ಹಿಂಜರಿಯುವ ಕ್ರೈಸ್ತ ಸಮುದಾಯವೂ ಸಹ ಬಹಿರಂಗವಾಗಿ ಪ್ರತಿಭಟಿಸಿ ಪ್ರಕರಣಗಳ ಸಮಗ್ರ ತನಿಖೆಗೆ ಆಗ್ರಹಿಸಿದ್ದರು. ಇವೆಲ್ಲದರ ಹಿನ್ನೆಲೆಯಲ್ಲಿ ಅಂದಿನ ಸರ್ಕಾರ ಪ್ರಕರಣಗಳ ತನಿಖೆಗಾಗಿ ನ್ಯಾ. ಸೋಮಶೇಖರ್ ಆಯೋಗವನ್ನು ನೇಮಕ ಮಾಡಿತ್ತು.

ಆಯೋಗವು 300 ಕ್ಕೂ ಹೆಚ್ಚು ದಿನಗಳ ಕಾಲ, ಮಂಗಳೂರು, ಬೆಂಗಳೂರು ಮತ್ತು ದಾಳಿ ನಡೆದ ಇತರ ಕಡೆಗಳಲ್ಲಿ ಸಂಚರಿಸಿ 1500 ಅರ್ಜಿದಾರರ ವಿಚಾರಣೆ ನಡೆಸಿ, ಸುಮಾರು 800 ಸಾಕ್ಷಿಗಳ ಹೇಳಿಕೆ ಪಡೆಯಿತು ಎನ್ನಲಾಗಿದೆ. 2010 ಫೆಬ್ರವರಿ 1 ರಂದು ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಆಯೋಗವು ತನ್ನ ಮಧ್ಯಂತರ ವರದಿಯನ್ನು ಸಲ್ಲಿಸಿತ್ತು. ಬಳಿಕ 2011 ರ ಜನವರಿ 28 ರಂದು ಅಯೋಗವು ಸರ್ಕಾರಕ್ಕೆ ತನ್ನ ಅಂತಿಮ ವರದಿಯನ್ನೂ ಸಲ್ಲಿಸಿತ್ತು.

ಚರ್ಚ್‌ಗಳ ಮೇಲಿನ ದಾಳಿಗೆ ಸಂಬಂಧಿಸಿ ನ್ಯಾ. ಸೋಮಶೇಖರ್ ಆಯೋಗವು ಸರ್ಕಾರಕ್ಕೆ ಸಲ್ಲಿಸಿದ್ದ ಮಧ್ಯಂತರ ವರದಿಗೂ ಅಂತಿಮ ವರದಿಗೂ ಯಾವುದೇ ಸಾಮ್ಯತೆ ಇರಲಿಲ್ಲ. ಬಹುತೇಕ ಸಾಕ್ಷ್ಯಾಧಾರಗಳ ತನಿಖೆಯ ನಂತರ ಆಯೋಗವು ನೀಡಿದ ಮಧ್ಯಂತರ ವರದಿಯಲ್ಲಿ ಚರ್ಚ್‌ಗಳ ಮೇಲಿನ ದಾಳಿಗೆ ಬಜರಂಗದಳ ಕಾರಣ ಎಂದು ಸ್ಪಷ್ಟವಾಗಿ ಉಲ್ಲೇಖಿಸಲಾಗಿದ್ದರೂ ಅಂತಿಮ ವರದಿಯಲ್ಲಿ ಆ ವಿಶ್ಲೇಷಣೆಯನ್ನು ಕೈಬಿಟ್ಟು ಮೂಲಭೂತವಾದಿಗಳಿಂದ ದಾಳಿ ನಡೆಯಿತು ಎಂಬ ಅಸ್ಪಷ್ಟ ಹೇಳಿಕೆಯನ್ನು ನೀಡಲಾಯಿತು. ದಾಳಿ ಮಾಡಿದವರು ಯಾರು? ದಾಳಿಗೆ ಪ್ರಚೋದನೆ ನೀಡಿದವರು ಯಾರು? ಎಂಬ ಬಗ್ಗೆ ವರದಿಯಲ್ಲಿ ಸ್ಪಷ್ಟತೆ ಇರಲಿಲ್ಲ ಮಾತ್ರವಲ್ಲ ಬಜರಂಗದಳ ಸೇರಿದಂತೆ ಯಾವುದೇ ಸಂಘ ಪರಿವಾರದ ಸಂಘಟನೆಯ ಪಾತ್ರವಿಲ್ಲ, ಸರಕಾರ ಹಾಗೂ ಬಿಜೆಪಿಯ ಪಾತ್ರವಿಲ್ಲ ಎಂದು ವರದಿಯಲ್ಲಿ ಹೇಳಲಾಗಿತ್ತು.

ಮಧ್ಯಂತರ ವರದಿಗೆ ತದ್ವಿರುದ್ಧವಾಗಿ ಬಂದ ಅಂತಿಮ ವರದಿಯು ರಾಜ್ಯಾದ್ಯಂತ ಕೋಲಾಹಲಕ್ಕೆ ಕಾರಣವಾಯಿತು. ದಾಳಿಯಿಂದ ನೊಂದ ಕ್ರೈಸ್ತ ಸಮುದಾಯವು ಅಂತಿಮ ವರದಿಯಿಂದ ಕಂಗೆಡುವಂತಾಯಿತು. ಪ್ರಗತಿಪರ ಸಂಘಟನೆಗಳು ಹಾಗೂ ಸಿಪಿಐ(ಎಂ) ಮೊದಲಾದ ಕೆಲವು ರಾಜಕೀಯ ಪಕ್ಷಗಳು ತೀವ್ರವಾಗಿ ಪ್ರತಿಕ್ರಿಯಿಸಿ ವರದಿಯನ್ನು ತಿರಸ್ಕರಿಸುವಂತೆ ಸರ್ಕಾರವನ್ನು ಒತ್ತಾಯಿಸಲಾಯಿತು. ಹೀಗಾಗಿ ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ನ್ಯಾ. ಸೋಮಶೇಖರ್ ವರದಿಯನ್ನು ಅಂಗೀಕರಿಸಲು ಸಾಧ್ಯವಾಗಲಿಲ್ಲ. ಇದೇ ಅಕ್ಟೋಬರ್ 16 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟದ ಸಭೆಯು ನ್ಯಾ.ಸೋಮಶೇಖರ್ ವರದಿಯನ್ನು ತಿರಸ್ಕರಿಸಿ ರಾಷ್ಟ್ರೀಯ ಮಾನವ ಹಕ್ಕು ಆಯೋಗದ ಶಿಫಾರಸುಗಳನ್ನು ಅಂಗೀಕರಿಸಲು ನಿರ್ಧರಿಸಿದೆ. ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಟಿ.ಬಿ. ಜಯಚಂದ್ರ "ಆಯೋಗದ ಮಧ್ಯಂತರ ವರದಿಯಲ್ಲಿ ಚರ್ಚ್‌ಗಳ ಮೇಲಿನ ದಾಳಿಯಲ್ಲಿ ಹಿಂದುತ್ವ ಸಂಘಟನೆಗಳ ಪಾತ್ರವಿರುವುದಾಗಿ ಆರೋಪಿಸಲಾಗಿತ್ತು. ಆದರೆ ಅಂತಿಮ ವರದಿಯಲ್ಲಿ ಈ ಬಗ್ಗೆ ಯಾವುದೇ ಉಲ್ಲೇಖ ಇಲ್ಲದಿರುವುದು ಅನುಮಾನ ಮೂಡಿಸಿದೆ. ಆದ್ದರಿಂದ ವರದಿಯನ್ನು ತಿರಸ್ಕರಿಸಿ ನಿಷ್ಪಕ್ಷಪಾತ ತನಿಖೆಗಾಗಿ ಪ್ರಕರಣವನ್ನು ಗೃಹ ಇಲಾಖೆಗೆ ವರ್ಗಾಯಿಸಲು ನಿರ್ಧರಿಸಲಾಗಿದೆ." ಎಂದು ಹೇಳಿದ್ದಾರೆ.

ರಾಜ್ಯ ಸರ್ಕಾರದ ಈ ಕ್ರಮದ ಹಿಂದೆ 'ರಾಜಕೀಯ' ಇದೆ ಎಂದು ಪೇಜಾವರ ಸ್ವಾಮಿಗಳು ಆಕ್ಷೇಪ ಎತ್ತಿದ್ದಾರೆ. ರಾಜಕೀಯ ಪಕ್ಷ ಆಧಾರಿತ ಸರ್ಕಾರಗಳ ತೀರ್ಮಾನಗಳ ಹಿಂದೆ ರಾಜಕೀಯ ಇಲ್ಲದಿರಲು ಸಾಧ್ಯವೆ? ಬಿಜೆಪಿ 'ರಾಜಕೀಯ' ಮಾಡುವುದಿಲ್ಲವೆ? ಮೋದಿ ಪ್ರಧಾನ ಮಂತ್ರಿಯಾದ ತಕ್ಷಣದಲ್ಲಿ ಹಿಂದಿನ ಸರ್ಕಾರ ನೇಮಿಸಿದ್ದ ರಾಜ್ಯಪಾಲರನ್ನು ಬಲವಂತವಾಗಿ ಪದಚ್ಯುತಗೊಳಿಸಿದ್ದು 'ರಾಜಕೀಯ' ಅಲ್ಲವೆ? ರಾಜಕೀಯ ಅಧಿಕಾರ ಗಳಿಸುವುದೊಂದನ್ನೇ ಗುರಿಯಾಗಿಸಿಕೊಂಡಿರುವ ಕಾಂಗ್ರೆಸ್, ಬಿಜೆಪಿಯಂತಹ ಪಕ್ಷಗಳ ಸರ್ಕಾರಗಳ ಕ್ರಮಗಳು ರಾಜಕೀಯ ಪ್ರೇರಿತ ಆಗಿರುತ್ತವೆ ಎನ್ನುವುದರಲ್ಲಿ ಸಂದೇಹವೇ ಇಲ್ಲ. ಇದು ಪೇಜಾವರರಿಗೆ ತಿಳಿಯದೆ?.

ಪ್ರಸಕ್ತ ಚರ್ಚ್ ದಾಳಿ ಪ್ರಕರಣದಲ್ಲಿ ನಿಜವಾದ ಅಪರಾಧಿಗಳನ್ನು ಪತ್ತೆಹಚ್ಚ ಬೇಕು, ಅವರಿಗೆ ಸರಿಯಾದ ಶಿಕ್ಷೆಯಾಗಬೇಕು ಎಂಬ ಕಳಕಳಿಗಿಂತ ಹೆಚ್ಚಾಗಿ ತಪ್ಪಿತಸ್ಥರನ್ನು ರಕ್ಷಣೆ ಮಾಡಬೇಕು, ಸತ್ಯವನ್ನು ಮುಚ್ಚಿಹಾಕಬೇಕು ಎನ್ನುವ ದೋರಣೆ ಇವರದಾದರೆ ಇವರು ಹೇಗೆ ಧರ್ಮ ಪ್ರತಿಪಾದಕರಾಗುತ್ತಾರೆ? ಮಧ್ಯಂತರ ವರದಿಯಲ್ಲಿ ಆರೋಪಕ್ಕೆ ಒಳಗಾದ ಬಜರಂಗದಳ ಅಂತಿಮ ವರದಿಯಲ್ಲಿ ಆರೋಪ ಮುಕ್ತವಾಗಿರುವುದು ಹೇಗೆ? ಆಯೋಗದ ಪ್ರಕಾರ ಹಿಂದೂ ಧರ್ಮದ ಮೇಲೆ ಅವಹೇಳನಕಾರಿ ಸಾಹಿತ್ಯ ವಿತರಣೆ ಮತ್ತು ಮತಾಂತರಗಳೇ ಈ ದಾಳಿಗೆ ಕಾರಣ ಎಂದು ಹೇಳಿರುವಾಗ ದಾಳಿ ಮಾಡಿರುವವರು ಹಿಂದುತ್ವ ಸಂಘಟನೆಗಳಿಗೆ ಸೇರಿದವರೇ ಆಗಿದ್ದಾರೆ ಎಂಬುದನ್ನು ಆಯೋಗವೇ ಒಪ್ಪಿದಂತಾಗಿಲ್ಲವೇ? ಕಾನೂನನ್ನು ಕೈಗೆತ್ತಿಕೊಳ್ಳುವ ಅಂತಹ ಸಂಘಟನೆಗಳಿಗೆ ಶಿಕ್ಷೆಯಾಗಬೇಕೆ ಅಥವ ಕುಮ್ಮಕ್ಕು ಕೊಡಬೇಕೆ?.

## ಸೌಜನ್ಯಳ ಪ್ರಕರಣಕ್ಕೆ ಎರಡು ವರುಷಗಳು ನಮ್ಮೆದುರು ಇರುವುದೀಗ ಪ್ರಶ್ನೆಗಳ ಸರಮಾಲೆ

ಅಕ್ಟೋಬರ್ 9, ಕುಮಾರಿ ಸೌಜನ್ಯಾಳ ಮೇಲಿನ ಅತ್ಯಾಚಾರ ಮತ್ತು ಬರ್ಬರ ಕಗ್ಗೊಲೆಯ ಪ್ರಕರಣ ನಡೆದ ದಿನ. ಇಂದಿಗೆ ಎರಡು ವರುಷಗಳೇ ಗತಿಸಿ ಹೋದವು. ಇದರಲ್ಲಿ ನ್ಯಾಯ ಸಿಕ್ಕಿತೇ? ಅತ್ಯಾಚಾರಿಗಳು, ಕೊಲೆಪಾತಕರನ್ನು ಪತ್ತೆ ಹಚ್ಚಲಾಯಿತೇ? ದಂಡಿಸಲಾಯಿತೇ? ಈ ಪ್ರಕರಣ ಯುವತಿಯರ ಮೇಲೆ, ಮಹಿಳೆಯರ ಮೇಲೆ ನಿತ್ಯ ನಡೆಯುವ ದೌರ್ಜನ್ಯಗಳಿಗೆ, ದೌರ್ಜನ್ಯಕಾರರಿಗೆ ತಕ್ಕ ಪಾಠವನ್ನು ಕಲಿಸುವಂತಾಯಿತೇ? ತಡೆಯುವಂತಾಯಿತೇ? ಈಗ ನಮ್ಮೆದುರು ಪ್ರಶ್ನೆಗಳ ಸರಮಾಲೆಗಳು. . .!

ಕು.ಸೌಜನ್ಯ 17 ವಯಸ್ಸಿನ, ಧರ್ಮಸ್ಥಳ–ಉಜಿರೆಯ ಎಸ್.ಡಿ.ಎಂ. ಕಾಲೇಜಿನಲ್ಲಿ ಪಿ.ಯು.ಸಿ. ವಿದ್ಯಾರ್ಥಿನಿಯಾಗಿದ್ದಳು. 2012ರ ಅಕ್ಟೋಬರ್ 9ರಂದು ಸಂಜೆ ಮನೆಯತ್ತ ಹೊರಟಾಗ ಅಪಹರಿಸಲ್ಪಟ್ಟು ಅತ್ಯಂತ ಹೇಯವಾಗಿ ಅತ್ಯಾಚಾರಕ್ಕೆ ಒಳಗಾಗಿ ಕೊಲೆಯಾಗಿ ಹೋದಳು. ಈ ಪ್ರಕರಣ ಬೆಳ್ತಂಗಡಿ ತಾಲೂಕಿನಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆ ನಂತರ ರಾಜ್ಯದಲ್ಲಿಯೂ ಎಲ್ಲರನ್ನೂ ಬೆಚ್ಚಿ ಬೀಳಿಸಿತು. ಆತಂಕ, ಆಕ್ರೋಶ ಪ್ರತಿಭಟನೆಯಾಗಿ ಎಲ್ಲೆಡೆ ಹಬ್ಬಿತು. ಯಾರೋ ಒಬ್ಬ ಸಿಕ್ಕನೆಂದು 50ರ ವಯಸ್ಸಿನ ಸಂತೋಷ್‌ರಾವ್ ಎನ್ನುವಾತನನ್ನು ಬಂಧಿಸಿ ಆತನೇ ಆರೋಪಿ, ಅಪರಾಧಿ ಎಂದು ಪೋಲೀಸ್ ಇಲಾಖೆ ಕೈ ತೊಳೆದುಕೊಳ್ಳಲು ಮುಂದಾಯಿತು. ಆದರೆ ಈ ಪ್ರಕರಣ ಒಂದು ಸಾಧಾರಣ ಘಟನೆಯಲ್ಲ, ಈ ಧರ್ಮಸ್ಥಳ ಪರಿಸರದಲ್ಲಿ ನಡೆಯುತ್ತಲೇ ಇರುವ ನೂರಾರು (ಹಿಂದೆ 462 ಅನುಮಾನಾಸ್ಪದ ಸಾವುಗಳು ಅಂತಾ) ಪ್ರಕರಣಗಳ ಸರಮಾಲೆಯಲ್ಲಿ ಒಂದು. ಇವುಗಳ ಹಿಂದೆ ಪ್ರಭಾವಿಗಳ ಒಂದು ದೊಡ್ಡ ತಂಡವೇ ಇದೆ, ಅದನ್ನು ಪತ್ತೆ ಹಚ್ಚಬೇಕು ಎಂಬ ಆಗ್ರಹ ಹೆಚ್ಚಾಯಿತು. ಸಾರ್ವಜನಿಕ ಒತ್ತಡ ಹೆಚ್ಚಾದಾಗ ಸಿ.ಐ.ಡಿ ತನಿಖೆ ವಹಿಸಿದ್ದು, ಅದು ತನಿಖೆಯಲ್ಲಿ ಯಾವುದೇ ಮುನ್ನಡೆ ಸಾಧಿಸದೇ, ಪ್ರಭಾವಿಗಳನ್ನು ಪತ್ತೇ ಹಚ್ಚದೇ ಮುಗಿಸಿದ್ದು ಆಯ್ತು. ಅಂದರೆ ಇಡೀ ಪ್ರಕರಣವನ್ನು ಮುಚ್ಚಿ ಹಾಕಲು ಸರಕಾರ, ಆಡಳಿತ ಯಂತ್ರ ಅತ್ಯಂತ ಜಾಗರೂಕತೆಯಿಂದ ಪ್ರಯತ್ನಿಸುವುದು ಕಂಡಿತು. ಆಗ ಅಧಿಕಾರದಲ್ಲಿದ್ದುದು ಬಿ.ಜೆ.ಪಿ.ಸರಕಾರ.




ಎಸ್.ವೈ.ಗುರುಶಾಂತ್

ದೇಶದಲ್ಲಿ, ರಾಜ್ಯದಲ್ಲಿ ನಡೆಯುತ್ತಲಿದ್ದ ಮಹಿಳೆಯರ ಮೇಲಿನ ಅತ್ಯಾಚಾರ, ದೌರ್ಜನ್ಯಗಳ ವಿರುದ್ಧ ಸಾರ್ವಜನಿಕ ಎಚ್ಚರ, ಪ್ರತಿಭಟನೆಗಳು ಬೆಳೆಯುತ್ತಿರುವಾಗ ಸೌಜನ್ಯ ಪ್ರಕರಣದಲ್ಲಿ ನ್ಯಾಯ ಸಿಗಲೇಬೇಕೆಂಬ ಹೋರಾಟಕ್ಕೆ ವಿಶೇಷ ತಿರುವು ಸಿಕ್ಕಿದ್ದು ಬೆಳ್ತಂಗಡಿಯಲ್ಲಿ ಡಿ.ವೈ.ಎಫ್.ಐ, ಜೆ.ಎಂ.ಎಸ್. ಮತ್ತು ಸಿಪಿಐ(ಎಂ) ಮುಂತಾದ ಸಂಘಟನೆಗಳು ಧೃಡವಾಗಿ ನಿಂತದ್ದರಿಂದ, ರಾಜಿ ಇಲ್ಲದೇ ಹೋರಾಟವನ್ನು ಹರಿತವಾಗಿ ನಡೆಸಿದ್ದರಿಂದ. ಇದು ಜಿಲ್ಲೆಯಲ್ಲಿಯೂ, ರಾಜ್ಯದಲ್ಲಿಯೂ ವ್ಯಾಪಕವಾಗಿ ಹರಡಿತು. 2013 ರಲ್ಲಿ ಸಿದ್ದರಾಮಯ್ಯನವರ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದಾಗ ತನಿಖೆಯನ್ನು ಆಳವಾಗಿ ನಡೆಸಲು ಸಿ.ಬಿ.ಐ.ಗೆ ವಹಿಸುವಂತೆ ಪ್ರಬಲ ಹೋರಾಟ ನಡೆದ ಬಳಿಕವೇ ಕೊನೆಗೆ ಮನಸ್ಸಿಲ್ಲದ ಮನಸ್ಸಿನಿಂದ (ಧರ್ಮಸ್ಥಳದ ವೀರೇಂದ್ರ ಹೆಗಡೆಯವರ ದೈವಾನುಮತಿ ಬಳಿಕ!) ಸಿಬಿಐ ತನಿಖೆಗೆ ವಹಿಸಲಾಯಿತು.

ಆದರೆ ಹೋರಾಟ ನಿಂತಿಲ್ಲ, ನಿಲ್ಲುವುದೂ ಇಲ್ಲ. ವರುಷವಾದರೂ ಸಿ.ಬಿ.ಐ. ವಿಶೇಷ ತಂಡ ತನಿಖೆಯಲ್ಲಿ ಒಂದಿಷ್ಟೂ ನಿರ್ಣಾಯಕ ಪ್ರಗತಿಯನ್ನು ಕಂಡಿಲ್ಲ. ಈ ಪ್ರಕರಣದಲ್ಲಿ ನಿಜವಾದ ಆರೋಪಿಗಳನ್ನು, ಪ್ರಭಾವಿಗಳನ್ನು ಪತ್ತೆ ಹಚ್ಚಿಲ್ಲ. ಮೇಲಾಗಿ, ಇದೀಗ ನರೇಂದ್ರ ಮೋದಿಯವರ ಸರಕಾರ! ಅದು ಹಿಂದಿದ್ದ ತನಿಖಾ ಅಧಿಕಾರಿಗಳನ್ನು ಬದಲಾಯಿಸಿದೆ. ಈ ತಂಡ ಬಂದ ನಂತರ ತಣ್ಣಗೆ ಕೂತಿ–ದೆ. ಹಿಂದಿನ ತಂಡಕ್ಕಿದ್ದ ಕನಿಷ್ಠ ಚುರುಕೂ ಇಲ್ಲವಾಗಿದೆ. ಮೇಲಾಗಿ ಈಗಾಗಲೇ ತನಿಖೆಗೆ ನಡೆಸಿದ್ದವರನ್ನೇ ಮರು ವಿಚಾರಣೆ ನಡೆಸುತ್ತಿದೆ. ಅಂದರೆ ನಿಜಕ್ಕೂ ಸಿ.ಬಿ.ಐ.ನ ಈ ತನಿಖಾ ತಂಡ ಪ್ರಭಾವಿ ಆರೋಪಿಗಳನ್ನು, ಪತ್ತೇ ಹಚ್ಚುವುದೇ, ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸುವುದೇ ಅನುಮಾನವಾಗಿದೆ.

ಈ 'ನಮೋ' ತಂಡದ ವೈಖರಿ ಅರ್ಥವಾಗದಿರುವುದೇನಲ್ಲ. ಮುಖ್ಯವಾಗಿ ಈ ಪ್ರಕರಣದಲ್ಲಿ ಕೇಳಿ ಬಂದ ಪ್ರಮುಖ ಹೆಸರು ಧರ್ಮಸ್ಥಳದ ವೀರೇಂದ್ರ ಹೆಗಡೆ ಮತ್ತವರ ಸಹೋದರರು, ನಿಕಟ ಪರಿವಾರದವರು. ಅತ್ಯಾಚಾರ ನಡೆಸಿದವರಲ್ಲಿ ಹೆಗಡೆಯವರ ಸಹೋದರನ ಮಗ ಮತ್ತು ಅವರ ನಿಕಟವರ್ತಿಗಳ ತಂಡ ಎಂಬ ದೂರು ಇದೆ. ಈ ಕಾರಣಗಳಿಂದಲೇ ತನಿಖೆ ತೀವ್ರವಾಗಿ, ನಿಷ್ಠುರವಾಗಿ ನಡೆಯದೇ ಕಾಲಹರಣಕ್ಕಾಗಿ ತೆವಳುತ್ತಿದೆ ಎಂಬುದರಲ್ಲಿ ಉತ್ಪ್ರೇಕ್ಷೆ ಏನಿಲ್ಲ. ಹೆಗಡೆಯವರು ಸಂಘಪರಿವಾರಕ್ಕೆ ಸದಾ ಸೇರಿದವರು, ಈ ವರುಷದಲ್ಲಿ ನಡೆಯಲಿರುವ ವಿಶ್ವ ಹಿಂದೂ ಪರಿಷತ್‌ನ ಸುವರ್ಣ ಮಹೋತ್ಸವದ ಸ್ವಾಗತ ಸಮಿತಿಯ ಗೌರವಾಧ್ಯಕ್ಷರು! ಬಿಜೆಪಿಯ ಸಮರ್ಥಕರು. ಧರ್ಮದ ರಕ್ಷಣೆಯ ಹೊದಿಕೆಯಲ್ಲಿ ರಕ್ಷಿತರು!ಈಗಂತೂ ಮೋದಿ ಸರಕಾರ ಕೇಂದ್ರದಲ್ಲಿ ಆಸೀನ. ಬಿಜೆಪಿಯವರ ಮಾತಿನಲ್ಲೇ ಹೇಳುವುದಾದರೆ ಕೇಂದ್ರದ ಯಜಮಾನನ 'ಸಾಕು ನಾಯಿ'. ಇನ್ನು ಯಜಮಾನನ ಅಣತಿ ಧಿಕ್ಕರಿಸುವುದೆಂದು ಭಾವಿಸಲಾದೀತೇ?

ಪುಟ 10 ಕ್ಕೆ

# 'ಕಮ್ಯುನಿಸ್ಟರು ಜನಪರ ಹೋರಾಟದಲ್ಲಿ ಕಂಡರೆ ಜೈಲು ಇತರ ಪಕ್ಷಗಳವರು ಭ್ರಷ್ಟಗೊಂಡು ಜೈಲುಪಾಲು !!'

## ಸಿಪಿಐ(ಎಂ) ಬೆಂಗಳೂರು-ಜಯನಗರ ವಲಯ 3ನೇ ಸಮ್ಮೇಳನದಲ್ಲಿ ಟಿ. ಸುರೇಂದ್ರ ರಾವ್

ಅಕ್ಟೋಬರ್ 12, 2014 ರಂದು ಭಾನುವಾರದಂದು ಸಿಪಿಐ(ಎಂ) ಬೆಂಗಳೂರಿನ ಜಯನಗರ ವಲಯದ 3ನೇ ಸಮ್ಮೇಳನ ಬಸವನಗುಡಿಯ ಜ್ಯೋತಿಬಸು ಭವನದಲ್ಲಿ ನಡೆಯಿತು. ಹಿರಿಯ ಸಂಗಾತಿ ರತ್ನಮಯ್ಯ ಗುಪ್ತ (ನಿವೃತ್ತ ವಿದ್ಯುತ್ ಇಲಾಖೆ ಇಂಜಿನಿಯರ್) ಅವರಿಂದ ಧ್ವಜಾರೋಹಣದ ಮೂಲಕ ಆರಂಭವಾಯಿತು. ದೇಶದ ಬಡವರ ಬಗ್ಗೆ, ದಲಿತರ ಬಗ್ಗೆ ಜಾತಿ ಅಸಮಾನತೆಗಳ ಕುರಿತು ಚಿಂತಿಸುವ ಸಿಪಿಐ(ಎಂ) ಬೆಳೆಯಬೇಕು. ಲಕ್ಷಾಂತರ ರೈತರ ಆತ್ಮಹತ್ಯೆಗೆ ಜಾಗತೀಕರಣವೆಂಬ ಪಿಡುಗೇ ಕಾರಣ ಎಂದರು. ವಿಚಾರವಾದಿ ಡಾ.ನರೇಂದ್ರ ಧಾಬೋಲಕರ್ ಅವರ ಹತ್ಯೆಯನ್ನು ಖಂಡಿಸಿದ ಅವರು, ಮೂಢನಂಬಿಕೆಗಳನ್ನು ಜೀವಂತವಾಗಿಟ್ಟು ಜನರ ಸಮಸ್ಯೆಗಳನ್ನು ಮರೆಮಾಚಿ ತಮ್ಮ ಸುಲಿಗೆಯನ್ನು ನಿರಂತರವಾಗಿಸುತ್ತಿರುವ ಆಳುವ ವರ್ಗಗಳ ಬಗ್ಗೆ ಕಿಡಿಕಾರಿದರು.

ಸಮ್ಮೇಳನದ ಉದ್ಘಾಟನೆಯನ್ನು ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾಸಮಿತಿಯ ಕಾರ್ಯದರ್ಶಿ ಮಂಡಳಿ ಸದಸ್ಯ ಟಿ.ಸುರೇಂದ್ರರಾವ್ ನೆರವೇರಿಸಿದರು. ಕಮ್ಯುನಿಸ್ಟ್ ಮುಖಂಡರು ದುಡಿಯುವ ಜನರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡಿ ಜೈಲಿಗೆ ಹೋದರೆ, ಬಂಡವಾಳಶಾಹಿ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್ ಮುಂತಾದ ಪಕ್ಷಗಳ ನಾಯಕರು ಭ್ರಷ್ಟಾಚಾರದ ಪ್ರಕರಣಗಳಲ್ಲಿ ಸಿಕ್ಕಿಹಾಕಿಕೊಂಡು ಜೈಲಿಗೆ ಹೋಗುತ್ತಿದ್ದಾರೆ ಎಂದ ಅವರು ಕಮ್ಯೂನಿಸ್ಟ್ ಮತ್ತು ಬೇರೆ ಪಕ್ಷಗಳ ನಡುವಿನ ವ್ಯತ್ಯಾಸವನ್ನು ತೆರೆದಿಟ್ಟರು. ತ್ರಿಪುರಾ ಮುಖ್ಯಮಂತ್ರಿಗಳ ಸರಳ ಜೀವನವನ್ನು ಅವರು ಉದಾಹರಿಸಿದರು. ಹಣ ಚೆಲ್ಲಿ ಚುನಾವಣೆ ಗೆಲ್ಲುವ ಪಕ್ಷಗಳು ಆನಂತರ ಜನರನ್ನು ಸುಲಿಗೆ ಮಾಡುತ್ತಿರುವ ಪರಿಯನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು. ಸುಲಿಗೆಯ ವಿರುದ್ಧ ಜನರನ್ನು ಸಂಘಟಿಸಿ ಹೋರಾಟ ಮಾಡುವುದೊಂದೇ ನಮಗೆ ಉಳಿದಿರುವ ದಾರಿ. ಆ ಮೂಲಕವೇ ಪಕ್ಷವನ್ನು ಸಬಲಗೊಳಿಸಬೇಕು ಎಂದರು. ಅಂತಹ ಸಂದರ್ಭದಲ್ಲಿ ಧರ್ಮ, ಜಾತಿ, ಭಾಷೆ ಮುಂತಾದ ಭಾವನಾತ್ಮಕ ವಿಷಯಗಳನ್ನು ಮುಂದುಮಾಡಿ ಜನರ ಒಗ್ಗಟ್ಟನ್ನು ಮುರಿಯಲು ಯತ್ನಿಸುತ್ತಿರುವ ವ್ಯಕ್ತಿಗಳು ಹಾಗೂ ಶಕ್ತಿಗಳ ಬಗ್ಗೆ ಎಚ್ಚರದಿಂದ ಇರಬೇಕೆಂದು ಸುರೇಂದ್ರ ಹೇಳಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ.ಎನ್.ಉಮೇಶ್ ಮಾತನಾಡುತ್ತಾ, ವಲಯ ಮಟ್ಟದಿಂದ ಹಿಡಿದು ನಗರ, ರಾಜ್ಯ, ದೇಶ ಹಾಗೂ ಅಂತರ್ರಾಷ್ಟ್ರೀಯ ಹಂತದವರೆಗೆ ಕಾರ್ಮಿಕರ ಮತ್ತು ಜನಸಾಮಾನ್ಯರ ಶೋಷಣೆ ಮತ್ತು ಅದರ ವಿರುದ್ಧ ನಡೆಯುತ್ತಿರುವ ಚಳುವಳಿಗಳನ್ನು ವಿವರಿಸಿದರು. ಸ್ವಚ್ಛ ಭಾರತದ ಘೋಷಣೆ ಹಾಕುವ ಮೋದಿ ಸರಕಾರ ಮತ್ತು ಅವರ ಬೆಂಬಲಿಗರು ದಿನವೆಲ್ಲಾ ರಸ್ತೆ, ಚರಂಡಿ, ಇತ್ಯಾದಿ ಸ್ವಚ್ಛ ಮಾಡುವ ಪೌರಕಾರ್ಮಿಕರಿಗೆ ಐದಾರು ತಿಂಗಳಿನಿಂದ ವೇತನ ನೀಡದೆ ಸತಾಯಿಸುತ್ತಿರುವುದನ್ನು ಗಮನಕ್ಕೆ ತಂದರು. ಅವರು ಗುತ್ತಿಗೆಯ ಆಧಾರದ ಮೇಲೆ ಕೆಲಸ ಮಾಡುತ್ತಾ, ಜೀವನವೆಲ್ಲಾ ಕೊಳಚೆಯಲ್ಲೇ ಕಳೆಯುತ್ತಿದ್ದಾರೆ. ಅವರ ಜೀವನ ಸ್ವಚ್ಛ ಮಾಡುವುದು ಹೇಗೆ ಎಂದು ಪ್ರಶ್ನಿಸಿದರು. ಅಸಂಘಟಿತ ಕಾರ್ಮಿಕ-ರೇ ಹೆಚ್ಚಾಗಿರುವ ಬೆಂಗಳೂರಿನಲ್ಲಿ ಸರಕಾರವೇ ಘೋಷಿಸಿರುವ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯನ್ನು ಜಾರಿಮಾಡದೆ ಬಡಕಾರ್ಮಿಕರ ಬದುಕಿನ ಜತೆ ಚೆಲ್ಲಾಟವಾಡುತ್ತಿದೆ. ವಸತಿಹೀನರಿಗೆ ವಸತಿ ನಿವೇಶನ ನೀಡಲು ಸಂಘಟಿತರಾಗಿ ಅರ್ಜಿ ಸಲ್ಲಿಸಿದರೂ ಆ ಬಗ್ಗೆ ಚಿಂತಿಸದೆ ಮಂತ್ರಿಗಳಿಗೆ ಪ್ರತಿಷ್ಠಿತರಿಗೆ ಮಣೆ ಹಾಕುವುದರಲ್ಲೇ ನಿರತವಾಗಿದೆ. ಪಕ್ಷ-ಸಂಘಟನೆಯನ್ನು ಬಲಿಷ್ಠಗೊಳಿಸಿ ಹೋರಾಟ ನಡೆಸಿದಾಗ ಮಾತ್ರ ಬೇಡಿಕೆಗಳನ್ನು



ಈಡೇರಿಸಿಕೊಳ್ಳಲು ಸಾಧ್ಯ ಎಂದು ಹಲವು ಉದಾಹರಣೆಗಳ ಮೂಲಕ ವಿವರಿಸಿದರು.

ಅಧ್ಯಕ್ಷತೆಯನ್ನು ವಹಿಸಿದ ವಲಯ ಕಾರ್ಯದರ್ಶಿ ಡಿ.ಸುರೇಶ್ ಮಾತಾಡುತ್ತಾ ಪಕ್ಷದ 21ನೇ ಮಹಾಧಿವೇಶನಕ್ಕೆ ಪೂರ್ವಭಾವಿಯಾಗಿ ಘಟಕ, ವಲಯ, ಜಿಲ್ಲಾ, ರಾಜ್ಯ ಸಮ್ಮೇಳನಗಳ ಬಗ್ಗೆ ತಿಳಿಸುತ್ತಾ 25 ವರ್ಷಗಳ ನಂತರ ರಾಜ್ಯ ಸಮ್ಮೇಳನ ಬೆಂಗಳೂರಿನಲ್ಲಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ಎಲ್ಲಾ ಸದಸ್ಯರು ಕ್ರಿಯಾಶೀಲರಾಗಿ ಅದರ ಯಶಸ್ಸಿಗೆ ಶ್ರಮಿಸಬೇಕು ಎಂದು ವಿನಂತಿ ಮಾಡಿದರು. ವಂದನಾರ್ಪಣೆಯೊಂದಿಗೆ ಉದ್ಘಾಟನಾ ಸಮಾರಂಭ ಮುಕ್ತಾಯವಾಯಿತು. ಉದ್ಘಾಟನಾ ಸಮಾರಂಭದಲ್ಲಿ ನಾನಾ ವಿಭಾಗಗಳ ದುಡಿಯುವ ಜನರು ಮತ್ತು ಪಕ್ಷದ ಸದಸ್ಯರು, ಹಿತೈಷಿಗಳು ಭಾಗವಹಿಸಿದ್ದರು.

ನಂತರ ನಡೆದ ಸಮ್ಮೇಳನದಲ್ಲಿ ವಲಯ ಕಾರ್ಯದರ್ಶಿ ಡಿ.ಸುರೇಶ್ ಕರಡು ವರದಿಯನ್ನು ಮಂಡಿಸಿದರು. ಸಮ್ಮೇಳನದ ಪ್ರತಿನಿಧಿಗಳು ಕರಡು ವರದಿಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದರು. ಮೂಢನಂಬಿಕೆ, ಕಸ-ವಿಲೇವಾರಿ, ರೇಶನ್ ಮುಂತಾದ ಜನತೆಯನ್ನು ಬಾಧಿಸುವ ಸಮಸ್ಯೆಗಳ ಕುರಿತು, ಹಾಗೂ ಪಕ್ಷದ ಸಂಘಟನೆಯ ಕುರಿತು ವರದಿಯಲ್ಲಿದ್ದ ಅಂಶಗಳ ಬಗ್ಗೆ ಚರ್ಚೆ ನಡೆಯಿತು. ಸಮ್ಮೇಳನ ವರದಿಯನ್ನು ಅಂಗೀಕರಿಸಿತು.

**ನಿರ್ಣಯ**

ಯಾರಬ್ ನಗರದ ಸಮುದಾಯ ಭವನದ ದುರಸ್ತಿಯಾಗಬೇಕು ಮತ್ತು ಅದು ಸಾರ್ವಜನಿಕರಿಗೆ ಲಭ್ಯವಾಗಬೇಕು ಎಂಬುದಲ್ಲದೇ, ಕಸ-ವಿಲೇವಾರಿ ಕುರಿತು ಜನಜಾಗೃತಿ ಮೂಡಿಸುವುದು ಹಾಗೂ ಸಮರ್ಪಕ ಕುಡಿಯುವ ನೀರಿನ ಸರಬರಾಜು, ಗುಂಡಿ ಬಿದ್ದಿರುವ ರಸ್ತೆಗಳ ರಿಪೇರಿ, ಚರಂಡಿಗಳ ಹೂಳೆತ್ತಿ ಸರಿಯಾಗಿ ಮುಚ್ಚುವುದು ಮುಂತಾದ ಮೂಲ ಸೌಲಭ್ಯಗಳ ಬಗ್ಗೆ ಬಿಬಿಎಂಪಿಯ ಗಮನಕ್ಕೆ ಸೆಳೆಯುವುದು ಹಾಗೂ ಮಾಧ್ಯಮಗಳಲ್ಲಿ ಹಾಗೂ ಸಮಾಜದಲ್ಲಿ ಹೆಚ್ಚುತ್ತಿರುವ ಮೂಢನಂಬಿಕೆ ಕಂದಾಚಾರದ ವಿರುದ್ಧ ಜಾಗೃತಿ ಮೂಡಿಸುವುದು ಮುಂತಾಗಿ ಸಮ್ಮೇಳನ ನಿರ್ಣಯಗಳನ್ನು ಅಂಗೀಕರಿಸಿತು.

ಸಮ್ಮೇಳನ 8 ಸದಸ್ಯರಿರುವ ನೂತನ ವಲಯ ಸಮಿತಿಯನ್ನು ಆಯ್ಕೆ ಮಾಡಿತು. ಡಿ.ಸುರೇಶ್ ಕಾರ್ಯದರ್ಶಿಯಾಗಿ ಪುನರಾಯ್ಕೆಯಾದರು. ವಲಯ ಸಮಿತಿಯ ಇತರ ಸದಸ್ಯರು – ಹೆಚ್.ಜಿ.ಶ್ರೀನಿವಾಸಮೂರ್ತಿ, ಕೆ.ಶ್ರೀಮತಿ, ಬಸಮ್ಮ, ಬಿ.ಎನ್.ರಘು, ಜಿ.ಕೆ.ಗಂಗಾಧರ್, ಬಸವರಾಜ್, ಸೆಲ್ವಿ.

**ವರದಿ: ಕೆ. ಶ್ರೀಮತಿ**

# 'ವಿದೇಶದಲ್ಲಿ ಕಪ್ಪು ಹಣ ಇಟ್ಟಿರುವವರ ಹೆಸರು ಏಕೆ ಬಹಿರಂಗಪಡಿಸಲಾಗದು??

## ಸಿಪಿಐ(ಎಂ) ರಾಜಾಜಿನಗರ ವಲಯ ಸಮ್ಮೇಳನದಲ್ಲಿ ಜಿ.ವಿ. ಶ್ರೀರಾಮರೆಡ್ಡಿ ಪ್ರಶ್ನೆ

ಬೆಂಗಳೂರು ನಗರದಲ್ಲಿನ ಸಿಪಿಐ(ಎಂ) ಪಕ್ಷದ ರಾಜಾಜಿನಗರ ವಲಯದ 3ನೇ ಸಮ್ಮೇಳನವು ಇದೇ ಅಕ್ಟೋಬರ್ 19, 2014 ರಂದು ನಡೆಯಿತು. ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳು ಹಾಗೂ ಮಾಜಿ ಶಾಸಕರೂ ಆದ ಜಿ.ವಿ.ಶ್ರೀರಾಮರೆಡ್ಡಿ ಕೇಂದ್ರದಲ್ಲಿ ಬಿಜೆಪಿ ತನ್ನ ಸ್ವಂತ ಬಲದಿಂದ ಅಧಿಕಾರಕ್ಕೆ ಬಂದಿದೆ. 'ಅಚ್ಛಾ ಭಾರತ ತರ್ತಾರೆ ಬದಲಾವಣೆ ಮಾಡ್ತಾರೆ. ಹೊಸ ದಿಕ್ಕನ್ನು ತೋರಿಸ್ತಾರೆ.' ಅಂತ ದೇಶದ ಜನ ಬಿಜೆಪಿಗೆ ಓಟು ಹಾಕಿದರು. ಆದರೆ ಈಗ ಮಾಡುತ್ತಿರುವುದಾದರೂ ಏನು? ಯುಪಿಎ ಸರ್ಕಾರದ ಆರ್ಥಿಕ ನೀತಿಗಳನ್ನೇ ಮೋದಿ ಇನ್ನು ವೇಗವಾಗಿ ತರುತ್ತಿರುವ ನಿಟ್ಟಿನಲ್ಲಿ ಯೋಜನೆಗಳ ಹೆಸರಿನಲ್ಲಿ ಮಾತ್ರ ಬದಲಾವಣೆ ತರಲು ಹೊರಟಿದ್ದಾರೆ. ನವ ಉದಾರೀಕರಣ ನೀತಿಗಳನ್ನು ಜಾರಿಮಾಡುತ್ತಾ ಬಹುರಾಷ್ಟ್ರೀಯ ಕಂಪನಿಗಳ ಮಾಲೀಕರ ಕೈಗೊಂಬೆಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ವಿದೇಶದಲ್ಲಿ ಇಡಲಾಗಿರುವ ದೇಶದ ಕಪ್ಪು ಹಣವನ್ನು ಮರಳಿ ದೇಶಕ್ಕೆ ತರುವ ಭರವಸೆ ನೀಡಿದ್ದ ಮೋದಿಯವರು ಈಗ ಸುಪ್ರೀಂ ಕೋರ್ಟ್‌ಗೆ ಕಪ್ಪುಹಣ ಇಟ್ಟಿರುವವರ ಹೆಸರು ಬಹಿರಂಗ ಪಡಿಸಲು ಆಗುವುದಿಲ್ಲ ಎಂದು ಹೇಳಿದ್ದಾರೆ. ಸಾಮಾನ್ಯರಿಗೆ ಅಗತ್ಯ ಪ್ರಮಾಣದ

ಕಾಂ. ಜಿ.ವಿ.ಶ್ರೀರಾಮರೆಡ್ಡಿ ಮಾತನಾಡುತ್ತಿರುವುದು.



ಆಹಾರ ಸಿಗುತ್ತಿಲ್ಲ. ದುಡಿಯುವ ಜನರಿಗೆ ಯಾವುದೇ ಸೌಲಭ್ಯಗಳಿಲ್ಲ. ಕಾರ್ಮಿಕ ಕಾನೂನುಗಳನ್ನು ಮಾಲೀಕರ ಪರವಾಗಿ ತರುವ ಪ್ರಯತ್ನ ಮಾಡುತ್ತಿದ್ದಾರೆ. ಮೋದಿ ಕೋಮು ಸಂಘರ್ಷಕ್ಕೆ 10 ವರ್ಷಗಳ ಕಾಲ ರೆಸ್ಟ್ ಕೊಡಿ ಎಂದಿದ್ದರೆ, ಮತ್ತೊಂದೆಡೆ ಆರ್‌ಎಸ್‌ಎಸ್ ಮುಖ್ಯಸ್ಥರು ರಾಮಮಂದಿರ ನಿರ್ಮಾಣಕ್ಕೆ ಇನ್ನೂ ನಾಲ್ಕು ವರ್ಷ ಸಮಯವಿದೆ ಎನ್ನುತ್ತಿದ್ದಾರೆ. ರಾಜ್ಯದಲ್ಲಿ ಲಕ್ಷಾಂತರ ಜನರು ಮನೆ ನಿವೇಶನಕ್ಕಾಗಿ ಅರ್ಜಿ ಹಾಕಿ 13-10-2014ರಂದು ಬೃಹತ್ ಹೋರಾಟ ನಡೆಸಿದ್ದಾರೆ. ರಾಜ್ಯ ಕಾಂಗ್ರೆಸ್ ಸರ್ಕಾರ ಅಹಿಂದ ಮುಖ್ಯಸ್ಥರೆನಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಬಡವರಿಗೆ ಭೂಮಿ, ನಿವೇಶನ ನೀಡಲು ಮನಸ್ಸಿಲ್ಲ ಎಂದರು.

ಬಹಿರಂಗ ಸಭೆಯಲ್ಲಿ ಸಿಪಿಐ(ಎಂ) ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಗೌರಮ್ಮ, ಗೋಪಾಲಕೃಷ್ಣ ಅರಳಹಳ್ಳಿ ಮಾತನಾಡಿದರು. ವಲಯ ಕಾರ್ಯದರ್ಶಿ ಕೆ. ವೀರಮಣಿ ಅಧ್ಯಕ್ಷತೆ ವಹಿಸಿದ್ದರು. ಕೆ.ಎಸ್. ಶಾರದ ಸ್ವಾಗತ ಕೋರಿದರು. ವಂದನಾರ್ಪಣೆಯನ್ನು ಡಿ. ಚಂದ್ರಶೇಖರ್ ಮಾಡಿದರು. ಧ್ವಜಾರೋಹಣವನ್ನು ಹಿರಿಯ ಮುಖಂಡರಾದ ಸದಾನಂದ ಭಟ್ ನೆರವೇರಿಸಿದರು. ●

**ಸರಕಾರವು ವಿದ್ಯಾರ್ಥಿ ಸಂಘಟನೆಗಳು, ಪೋಷಕರು, ಶಿಕ್ಷಣ ತಜ್ಞರು, ಚಿಂತಕರು ನಾನಾ ರಾಜಕೀಯ ಪಕ್ಷಗಳನ್ನು ಒಳಗೊಂಡಂತೆ ವಿಶಾಲ ವಿಭಾಗವನ್ನು ಚರ್ಚೆಯಲ್ಲಿ ಒಳಗೊಳಿಸಿ, ವಿವಿಧ ಸಮುದಾಯಗಳ ಸಲಹೆಯನ್ನು ಒಳಗೊಂಡು ಸೂಚನೆ ಮಂಡಿಸಬೇಕಾಗಿತ್ತು. ಕರಡು ರೂಪಿಸುವ ಸಮಿತಿಯಲ್ಲಿ ಈ ವಿಭಾಗಗಳಿಗೆ ಪ್ರಾತಿನಿಧ್ಯ ನೀಡಬೇಕಿತ್ತು. ಸರಕಾರ ಮಾಡದ ಈ ವಿಶಾಲ ಸಮಾಲೋಚನೆಯ ಕೆಲಸವನ್ನು ಪ್ರಜಾಸತ್ತಾತ್ಮಕ ಚರ್ಚೆಯ ಹೊಣೆಯನ್ನು ವಿದ್ಯಾರ್ಥಿ ಚಳುವಳಿ ಕೈಗೆತ್ತಿಕೊಂಡಿದೆ.**



# ‘ಅನುದಾನ ರಹಿತ ಖಾಸಗಿ ಶಾಲೆಗಳಿಗೆ ಶುಲ್ಕಗಳ ನಿಗದಿ ಸೂಚನೆ ಡೊನೇಷನ್ ಲಾಬಿಗೆ ಪೂರಕವಾಗಿ ನಿಲ್ಲುತ್ತಿರುವ ಕಾಂಗ್ರೆಸ್ ಸರಕಾರ’

## ಬೆಂಗಳೂರಿನ ದುಂಡುಮೇಜಿನ ಸಭೆಯಲ್ಲಿ ಕಟು ಟೀಕೆ

ಕರ್ನಾಟಕ ರಾಜ್ಯ ಸರಕಾರವು ಅನುದಾನರಹಿತ ಶಾಲೆಗಳ ಶಿಕ್ಷಣ ಶುಲ್ಕ ವಸೂಲಿ ಪ್ರವೃತ್ತಿಯನ್ನು ನಿಯಂತ್ರಿಸುವ ಹೆಸರಿನಲ್ಲಿ ಅನುದಾನ ರಹಿತ ಖಾಸಗಿ ಶಾಲೆಗಳ ಶಿಕ್ಷಣ ಶುಲ್ಕ ಹಾಗೂ ಅಭಿವೃದ್ಧಿ ಶುಲ್ಕಗಳನ್ನು ನಿಗದಿಗೊಳಿಸಿ ಒಂದು ಕರಡು ಸೂಚನೆಯನ್ನು ಮಂಡಿಸಿದೆ. ತಾವು ಸರಕಾರದಿಂದ ಅನುದಾನ ಪಡೆದುಕೊಳ್ಳದಿರುವುದರಿಂದ ನಮ್ಮ ಶುಲ್ಕ ವಸೂಲಿಯ ಮೇಲೆ ಸರಕಾರಕ್ಕೆ ಯಾವ ನಿಯಂತ್ರಣವೂ ಇಲ್ಲ ಎಂಬುದು ಖಾಸಗಿ ಆಡಳಿತ ಮಂಡಳಿಗಳ ವಾದವಾಗಿದೆ. ಹಾಗಾಗಿಯೇ ಈ ಸಂಸ್ಥೆಗಳ ಶುಲ್ಕ ವಸೂಲಾತಿಗೆ ಒಂದು ಅಳತೆಗೋಲು ಎಂಬುದು ಮತ್ತು ನಿಯಂತ್ರಣ ಎಂಬುದೇ ಇಲ್ಲಿಯವರೆಗೆ ಇಲ್ಲವಾಗಿತ್ತು. ಅನುದಾನ ರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳ ಶುಲ್ಕಗಳ ನಿಯಂತ್ರಣ ಒಂದು ಅವಶ್ಯಕ ಕ್ರಮವಾಗಿದೆ.

ಆದರೆ ಶುಲ್ಕ ನಿಯಂತ್ರಣದ ಹೆಸರಿನಲ್ಲಿ ಸರಕಾರವೇ ಅನುದಾನ ರಹಿತ ಶಾಲೆಗಳ ಶುಲ್ಕ ವಸೂಲಿ ದಂಧೆಗೆ ಪೂರಕವಾಗಿ ಶುಲ್ಕಗಳನ್ನು ನಿಗದಿಗೊಳಿಸಿದರೆ ಅದರಿಂದಲೂ ವಿದ್ಯಾರ್ಥಿ ಪೋಷಕರು ಅನ್ಯಾಯಕ್ಕೊಳಗಾಗುತ್ತಾರೆ. ಆದ್ದ-ರಿಂದ

ಸರಕಾರವು ವಿದ್ಯಾರ್ಥಿ ಸಂಘಟನೆಗಳು, ಪೋಷಕರು, ಶಿಕ್ಷಣ ತಜ್ಞರು, ಚಿಂತಕರು ನಾನಾ ರಾಜಕೀಯ ಪಕ್ಷಗಳನ್ನು ಒಳಗೊಂಡಂತೆ ವಿಶಾಲ ವಿಭಾಗವನ್ನು ಚರ್ಚೆಯಲ್ಲಿ ಒಳಗೊಳಿಸಿ, ವಿವಿಧ ಸಮುದಾಯಗಳ ಸಲಹೆಯನ್ನು ಒಳಗೊಂಡು ಸೂಚನೆ ಮಂಡಿಸಬೇಕಾಗಿತ್ತು. ಕರಡು ರೂಪಿಸುವ ಸಮಿತಿಯಲ್ಲಿ ಈ ವಿಭಾಗಗಳಿಗೆ ಪ್ರಾತಿನಿಧ್ಯ ನೀಡಬೇಕಿತ್ತು.

ಸರಕಾರ ಮಾಡದ ಈ ವಿಶಾಲ ಸಮಾಲೋಚನೆಯ ಕೆಲಸವನ್ನು ಪ್ರಜಾಸತ್ತಾತ್ಮಕ ಚರ್ಚೆಯ ಹೊಣೆಯನ್ನು ವಿದ್ಯಾರ್ಥಿ ಚಳುವಳಿ ಕೈಗೆತ್ತಿಕೊಂಡಿದೆ.

**ದುಂಡು ಮೇಜಿನ ಸಭೆ**

ಅಕ್ಟೋಬರ್ 16, 2014 ರಂದು ಬೆಂಗಳೂರಿನ ಶಾಸಕರ ಭವನದ ಸಮ್ಮೇಳನ ಸಭಾಂಗಣದಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಸಂಘಟನೆಯ ನಾಯಕತ್ವದಲ್ಲಿ ಶಿಕ್ಷಣ ತಜ್ಞರು, ರಾಜಕೀಯ ಮುಖಂಡರು, ಚಿಂತಕರು, ಸಾಹಿತಿಗಳು, ಪೋಷಕರು, ಪ್ರಗತಿಪರ ಮುಖಂಡರುಗಳನ್ನೊಳಗೊಂಡಂತೆ ‘ಖಾಸಗಿ ಶಾಲೆಗಳ ಶುಲ್ಕ ನಿಗದಿ ಕರಡು ವರದಿಯಲ್ಲಿರುವ ಅಪಾಯಗಳು’ ಎಂಬ ಕುರಿತು ದುಂಡು ಮೇಜಿನ ಸಭೆಯೊಂದನ್ನು ಸಂಘಟಿಸಿಲಾಗಿತ್ತು.

ಎಸ್‌ಎಫ್‌ಐ ಸಂಘಟನೆಯ ರಾಜ್ಯ ಅಧ್ಯಕ್ಷರಾದ ಅಂಬರೀಷ್ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಸಂಘಟನೆಯ ರಾಜ್ಯ ಕಾರ್ಯದರ್ಶಿ ಗುರುರಾಜ ದೇಸಾಯಿ ಪ್ರಸ್ತಾವಿಕವಾಗಿ ಮಾತನಾಡಿ ಸರಕಾರದ ಕರಡು ಸೂಚನೆಯ ವಿವರಗಳನ್ನು ಸಭೆಯ ಮುಂದಿಟ್ಟರು.

‘ಸಾಮಾಜಿಕ ನ್ಯಾಯದ ಬಗ್ಗೆ ಸದಾ ಮಾತನಾಡುವ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸರಕಾರ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಖಾಸಗೀಕರಣಗೊಳಿಸಲು ಮುಂದಾಗಿದೆ. ಅನುದಾನರಹಿತ ಪೂರ್ವ ಪ್ರಾಥಮಿಕ, ಕಿರಿಯ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಗೆ ಶುಲ್ಕ ನಿಗದಿಗೆ ಸಂಬಂಧಿಸಿದಂತೆ ರಾಜ್ಯ ಸರಕಾರ ಕರಡು ಸೂಚನೆಯೊಂದನ್ನು ಮಂಡಿಸಿದೆ. ಈ ಕರಡು ಸೂಚನೆಯು ಹಲವಾರು ಲೋಪ ಮತ್ತು ಶಿಕ್ಷಣವಿರೋಧಿ ಅಂಶಗಳಿಂದ ಕೂಡಿದೆ. ಶಿಕ್ಷಣದ ಖಾಸಗಿಕರಣಕ್ಕೆ ಈ ವರದಿಯ ಮೂಲಕ ರತ್ನಗಂಬಳಿಯನ್ನು ಹಾಸಲಾಗಿದೆ ಎಂದು ವಿವರಿಸಿದರು.

**ಸಮಿತಿ ರಚನೆ :**

19.05.2013 ರಂದು ಬೆಂಗಳೂರಿನ ಶಿಕ್ಷಕರ ಸದನದಲ್ಲಿ ವಿಚಾರ ಸಂಕಿರಣವನ್ನು ನಡೆಸಿ ಹಾಗೂ ಗುಲಬರ್ಗಾ ಮತ್ತು ಧಾರವಾಡ ಆಯುಕ್ತರ ವ್ಯಾಪ್ತಿಯಲ್ಲಿಯೂ ವಿಚಾರ ಸಂಕಿರಣಗಳನ್ನು ನಡೆಸಿ ಒಟ್ಟಾರೆ ಮೂಡಿ ಬಂದ ಅಭಿಪ್ರಾಯಗಳನ್ನು ಆಧರಿಸಿ ಸರಕಾರ ಮತ್ತು ಉಚ್ಚ ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಲಾಗಿತ್ತು. ಅದರಂತೆಯೇ ಶಿಕ್ಷಣ ಇಲಾಖೆಯು ‘ಅನುದಾನರಹಿತ ಶಾಲೆಗಳಿಗೆ ಶುಲ್ಕ ನಿಯಂತ್ರಣ ಆಯೋಗ’ವನ್ನು ರಚಿಸಲು ಸರಕಾರಕ್ಕೆ ಕೋರಲಾಗಿತ್ತು. ಈ ಹಿನ್ನೆಲೆಯಲ್ಲಿ 28.02.2014 ರಂದು ರಾಜ್ಯ ಸರಕಾರವು ತಮ್ಮ ಹಂತದಲ್ಲಿಯೇ ಸಮಿತಿ ಅಥವಾ ಪ್ರಾಧಿಕಾರವನ್ನು ರಚಿಸಿಕೊಳ್ಳಬೇಕೆಂದು ಸಾರ್ವಜನಿಕ ಶಿಕ್ಷಣ ಇಲಾಖೆಗೆ ಆದೇಶ ನೀಡಿತ್ತು. ಅದರಂತೆಯೇ ಆಯುಕ್ತರ ಅಧ್ಯಕ್ಷತೆಯಲ್ಲಿ 13.03.14 ರಂದು ಸಭೆ ಸೇರಿ 14 ಜನರ ಸಮಿತಿ ರಚಿಸಲಾಯಿತು. ಆ ಸಮಿತಿಯು ಆಯುಕ್ತರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿತು. ಪುನಃ 22.03.14 ರಂದು ಸಭೆ ಸೇರಿದ ಈ ಸಮಿತಿಯು ತಮಗೆ ಸಹಾಯವಾಗಲು 05 ಜನರ ಉಪಸಮಿತಿಯನ್ನು ರಚಿಸಿಕೊಂಡಿತು. ನಿವೃತ್ತ ನಿರ್ದೇಶಕರು ಹಾಗೂ ಸಹ ನಿರ್ದೇಶಕರು ಮಾತ್ರ ಈ ಸಮಿತಿಯಲ್ಲಿದ್ದಾರೆ. ಶಿಕ್ಷಣ ತಜ್ಞರು, ಚಿಂತಕರು, ಪೋಷಕರು, ವಿದ್ಯಾರ್ಥಿ ಸಂಘಟನೆಗಳನ್ನು ಈ ಸಮಿತಿಯಿಂದ ದೂರ ಇಡುವ ಮೂಲಕ ನಿಯಮಗಳನ್ನು ಗಾಳಿಗೆ ತೂರಲಾಗಿದೆ ಎಂದು ಗುರುರಾಜ್ ಸಮಿತಿ ರಚನೆಯ ಹಿನ್ನೆಲೆಯ ಕುರಿತು ವಿವರಿಸಿದರು.

**ಶಿಫಾರಸ್ಸುಗಳು**

ಉಪಸಮಿತಿಯು ಶುಲ್ಕ ನಿಗದಿಗೆ ಸಂಬಂಧಿಸಿದಂತೆ ವಿವಿಧ ಹಂತದ ಶಿಫಾರಸ್ಸುಗಳನ್ನು ಮಾಡಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಮೈಸೂರು, ಹುಬ್ಬಳ್ಳಿ, ಧಾರವಾಡ, ಮಹಾನಗರ ಪಾಲಿಕೆ, ಜಿಲ್ಲಾ ಕೇಂದ್ರ, ತಾಲ್ಲೂಕ ಕೇಂದ್ರ, ಗ್ರಾಮೀಣ ಭಾಗ ಎಂದು ವಿಂಗಡಿಸಿ ಶುಲ್ಕವನ್ನು ನಿಗದಿ ಮಾಡಲಾಗಿದೆ. ಇಲ್ಲಿ ಶಿಕ್ಷಕರ ವೇತನಕ್ಕೆ ತಾರತಮ್ಯ ನೀತಿಯನ್ನು ಅನುಸರಿಸಲಾಗಿದೆ. ಅಭಿವೃದ್ಧಿ ಶುಲ್ಕವನ್ನು ಪಡೆಯುವುದಕ್ಕಾಗಿ ಮೂಲಭೂತ ಸೌಲಭ್ಯಗಳ ಆಧಾರದಲ್ಲಿ ಶಾಲೆಗಳನ್ನು ಎ,ಬಿ,ಸಿ,ಡಿ,ಇ ವಿವಿಧ ದರ್ಜೆಗಳಾಗಿ ಎಂದು ವಿಂಗಡಿಸಲಾಗಿದೆ. ಈ ಕೆಳಗಿನಂತೆ ಗ್ರೇಡ್ ಮತ್ತು ಶುಲ್ಕವನ್ನು ಕರಡು ವರದಿಯಲ್ಲಿ ನಿಗದಿ ಮಾಡಲಾಗಿದೆ.

| ಗ್ರೇಡ್ | ಮಾದರಿ | ಅಂಕಗಳು | ಅಭಿವೃದ್ಧಿ ಶುಲ್ಕ |
|---|---|---|---|
| ಎ | ಅತಿ ಶ್ರೇಷ್ಠ | 90 – 100 % | 10,000. ರೂ. |
| ಬಿ | ಶ್ರೇಷ್ಠ | 75 – 89 % | 7,500 ರೂ. |
| ಸಿ | ಉತ್ತಮ | 60 – 74 % | 5,000 ರೂ. |
| ಖ | ತೃಪ್ತಿಕರ | 50 _ 59 % | 2,500 ರೂ. |
| ಇ | ಸಾಧಾರಣ | 50 ಕ್ಕಿಂತ ಕಡಿಮೆ. | 1,500 ರೂ. |

ಈ ಮೇಲಿನ ಕೋಷ್ಟಕದಲ್ಲಿರುವಂತೆ ಅಂಕಗಳ ಆಧಾರದಲ್ಲಿ ಶಾಲೆಗಳನ್ನು ವಿಂಗಡಿಸಿ ಶುಲ್ಕ ನಿಗದಿ ಮಾಡಿರುವುದು ಆಘಾತಕಾರಿ ಬೆಳವಣಿಗೆಯೇ ಸರಿ. ಈ ನಿಯಮವೇ ಹೇಳುವಂತೆ ಶಾಲೆಗಳಲ್ಲಿನ ಮೂಲಭೂತ ಸೌಲಭ್ಯಗಳಿಗೆ ಅಂಕಗಳನ್ನು ನಿಗದಿ ಮಾಡಲಾಗಿದೆ. ಗುಣಮಟ್ಟದ ಕಟ್ಟಡ, ಗ್ರಂಥಾಲಯ, ಕ್ರೀಡಾಂಗಣ, ಪ್ರಯೋಗಾಲಯ, ಶಿಕ್ಷಕರ ನಿರ್ವಹಣೆ, ಪರೀಕ್ಷಾ ಫಲಿತಾಂಶ ಹೀಗೆ ವಿವಿಧ ಸೌಲಭ್ಯಕ್ಕೆ ಅಂಕಗಳನ್ನು ನಿಗದಿ ಮಾಡಲಾಗಿದೆ. ಸಾಧಾರಣ ಶಾಲೆ ಎಂದರೆ ಗುಣ ಮಟ್ಟದ ಕಟ್ಟಡ ಮತ್ತು ಸೌಕರ್ಯಗಳು ಇಲ್ಲದಿರುವುದು. ಶಿಕ್ಷಣದ ಗುಣಮಟ್ಟ ಇಲ್ಲದಿರುವುದು, ಕ್ರೀಡಾಂಗಣ ಇಲ್ಲದಿರುವುದು, ಪ್ರಯೋಗಾಲಯ, ಕುಡಿಯುವ ನೀರು ಇತರೆ ಸೌಲಭ್ಯ ಇಲ್ಲದಿರುವುದನ್ನು ಸಾ ಧಾರಣ ಶಾಲೆ ಎಂದು ಗುರುತು ಮಾಡಬೇಕಾಗುತ್ತದೆ. ಅಂತಹ ಶಾಲೆಗಳಿಗೆ ಸರಕಾರ 1,500 ಅಭಿವೃದ್ಧಿ ಶುಲ್ಕ ನಿಗದಿ ಮಾಡಿದೆ. ಖಾಸಗಿ ಶಾಲೆಗಳು ಸೌಲಭ್ಯವಿಲ್ಲದಿದ್ದರೂ ಶಾಲೆಗಳನ್ನು ನಡೆಸಬಹುದು ಎಂದು ಅಧಿಕೃತವಾಗಿ ಈ ಕರಡು ಸೂಚಿಸಲಾಗಿದೆ. ಪ್ರಾಥಮಿಕ ಶಾಲೆಗಳಿಗೆ ಈ ಹಿಂದೆ ಇದ್ದ ಬೋಧಕೇತರ ಶುಲ್ಕ 38.00 ರೂ.ಗಳ ಬದಲಾಗಿ 360.00 ಗೆ ಹೆಚ್ಚಿಸಲಾಗಿದೆ. ಪ್ರೌಢಶಾಲೆಗಳಿಗೆ 215.00 ರೂ.ಗಳ ಬದಲಾಗಿ 635.00 ರೂ. ತೆಗೆದುಕೊಳ್ಳಬೇಕು ಹೇಳಲಾಗಿದೆ. ಅಚ್ಚರಿಯೇನೆಂದರೆ ಕರಡು ವರದಿಯ ಕೊನೆಯಲ್ಲಿ “ಖಾಸಗಿ ಶಾಲೆಗಳ ಆಡಳಿತ ಮಂಡಳಿಯವರು ಹೆಚ್ಚಿನ ಸೌಲಭ್ಯ ನೀಡಿದರೆ ಪಾಲಕರೆ ಅನುಮತಿಯ ಮೇರೆಗೆ ಎಷ್ಟಾದರೂ ಹಣ ಪಡೆಯಬಹುದು ಎಂದು ಹೇಳಲಾಗಿದೆ.” ಈಜುಕೊಳ, ಕುದುರೆ ಸವಾರಿ, ಪ್ರವಾಸ ಇತ್ಯಾದಿಗಳಿಗೆ ಪ್ರತ್ಯೇಕ ಶುಲ್ಕ ಎಂದು ವಿವರಿಸಲಾಗಿದೆ.

ಒಟ್ಟಾರೆ ಇದನ್ನೆಲ್ಲಾ ಗಮನಿಸಿದರೆ ರಾಜ್ಯ ಸರಕಾರ ಮತ್ತು ಶಿಕ್ಷಣ ಇಲಾಖೆಯು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಮನಸೋ ಇಚ್ಚೆ ಹಣ ಪಡೆಯಲು ಅನುಕೂಲ ಮಾಡಿಕೊಡಬೇಕೆಂಬ ನಿಯಮವನ್ನು ರೂಪಿಸಿ ಕೊಡಲು ಹೊರಟಿದೆಯೇ ಎಂದು ಆತಂಕವಾಗುತ್ತದೆ. ಕೋಠಾರಿ ಆಯೋಗದ ಶಿಫಾರಸ್ಸುಗಳನ್ನು ಇಲ್ಲಿ ಗಾಳಿಗೆ ತೂರಲಾಗಿದೆ. ಶುಲ್ಕದ ವಿಚಾರದಲ್ಲಿ ರೆಕ್ಕೆ ಬಲಿತ ಹಕ್ಕಿಗಳಾಗಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸರಕಾರವೇ ಇಷ್ಟಿಷ್ಟು ಹಣ ಪಡೆಯಬೇಕು ಎಂದು ಅಧಿಕೃತಗೊಳಿಸಿದರೆ ಶಿಕ್ಷಣದ ಮಾರಾಟ ವ್ಯಾಪಕವಾಗಿ ಸಾಗುತ್ತದೆ. ಸೌಲಭ್ಯಗಳಿಲ್ಲದೆಯೇ ಖಾಸಗಿ ಶಾಲೆಗಳನ್ನು ನಡೆಸಬಹುದು ಎಂದಾದರೆ ಗಲ್ಲಿಗೊಂದು ಮನೆಗೊಂದು ಕಾನ್ವೆಂಟ್ ಶಾಲೆಗಳು ಹುಟ್ಟಿಕೊಳ್ಳುತ್ತವೆ. ಶುಲ್ಕ ನಿಯಂತ್ರಿಸುವ ಹೆಸರಿನಲ್ಲಿ ಖಾಸಗೀಕರಣವನ್ನು ಕಾನೂನುಬದ್ದಗೊಳಿಸಲು ಹೊರಟಿರುವ ಸರಕಾರದ ಜಾಣತನ ಎಲ್ಲರಿಗೂ ಅರ್ಥವಾಗುತ್ತದೆ. ಈ ಕರಡು ಸೂಚನೆಯಲ್ಲಿ ಶುಲ್ಕ ನಿಯಂತ್ರಿಸುವ ಯಾವ ಸಲಹೆಗಳು ಕಾಣಸಿಗುವುದಿಲ್ಲ. ಬಡ ಮಧ್ಯಮ ವರ್ಗದ ವಿದ್ಯಾರ್ಥಿಗಳನ್ನು ಶಿಕ್ಷಣದಿಂದ ವಂಚಿಸುವ ಹುನ್ನಾರ ಇದರಲ್ಲಡಗಿದೆ. ಇದರ ವಿರುದ್ದ ನಮ್ಮ ಹೋರಾಟ ವ್ಯಾಪಕಗೊಳ್ಳಬೇಕಿದೆ ಎಂದ ಗುರುರಾಜ್ ಇಲ್ಲಿ ಬರುವ ಒಟ್ಟು ಚರ್ಚೆಗಳನ್ನು ಸೇರಿಸಿ ಕರಡು ವರದಿಗೆ ಆಕ್ಷೇಪಣೆಯನ್ನು ರಾಜ್ಯ ಸರಕಾರಕ್ಕೆ ಸಲ್ಲಿಸಬೇಕಿದೆ. ಶಿಕ್ಷಣದ ಖಾಸಗೀಕರಣದ ವಿರುದ್ದ ಬಲಿಷ್ಟವಾದ ಹೋರಾಟಕ್ಕೆ ಮುಂದಡಿ ಇಡಲು ನಾವೆಲ್ಲ ಹೆಜ್ಜೆ ಹಾಕಬೇಕಿದೆ ಎಂದರು.

**‘ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸರಕಾರದಿಂದಲೇ ನಾಯಕತ್ವ’ : ಜಿ.ವಿ. ಶ್ರೀರಾಮರೆಡ್ಡಿ**

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳು ಹಾಗೂ ಮಾಜಿ ಶಾಸಕರೂ ಆದ ಜಿ.ವಿ. ಶ್ರೀರಾಮರೆಡ್ಡಿ ಈ ಸಭೆಯಲ್ಲಿ ಮಾತನಾಡಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸರಕಾರವೇ ನಾಯಕತ್ವ ನೀಡಲು ಹೊರಟಿದೆ ಎಂದು ಕರ್ನಾಟಕ ರಾಜ್ಯ

ಪುಟ 10 ಕ್ಕೆ

# ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಮಿಗಾಗಿ ಧರಣಿ ಸತ್ಯಾಗ್ರಹ

ಕಡಲತಡಿ

ವರದಿ : ವಾ. ಉಚ್ಚಿಲ್

ಅಕ್ಟೋಬರ್ 13 ರಂದು ಬೆಂಗಳೂರು ಸ್ವಾತಂತ್ರ್ಯ ಉದ್ಯಾನವನದಲ್ಲಿ ಆರಂಭವಾದ–ರಾಜ್ಯದ ನಾನಾ ಭಾಗಗಳಿಂದ ಬಂದಿದ್ದ ರೈತರ, ಕೃಷಿಕೂಲಿಕಾರರ ಭೂಮಿ ಹೋರಾಟಕ್ಕೆ ಪೂರಕವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಅಕ್ಟೋಬರ್ 13 ಮತ್ತು 14 ರಂದು ಭೂಮಿಗಾಗಿ ಧರಣಿ ಸತ್ಯಾಗ್ರಹಗಳು ನಡೆದುವು.

**ಮಂಗಳೂರು ನಗರ ಪಾಲಿಕೆಯೆದುರು ನಿವೇಶನ ರಹಿತರ ಧರಣಿ ಸತ್ಯಾಗ್ರಹ :**

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಭೂಮಿಯ ಪ್ರಶ್ನೆ ನಿವೇಶನಕ್ಕೆ ಸಂಬಂಧಿಸಿದುದು. ಹಲವಾರು ವರ್ಷಗಳಿಂದ ನಗರವಾಸಿಗಳಾಗಿದ್ದರೂ, ಸ್ವ–ಂತ ಮನೆಯಿಲ್ಲದೆ ಬಾಡಿಗೆ ಮನೆಯಲ್ಲಿ ವಾಸವಾಗಿರುವವರಿದ್ದಾರೆ. ಕುಟುಂಬವೇ ಬಡ ಕಾರ್ಮಿಕರಾಗಿದ್ದು, ಕುಟುಂಬ ವಿಸ್ತರಿಸಿದಾಗ ಬೇರೆ ಮನೆಗಳನ್ನು ಮಾಡಿಕೊಳ್ಳಲು ಸಾಧ್ಯವಾಗದೇ ಇರುವ ಮನೆಯಲ್ಲೇ ಒಟ್ಟಿಗೇ ವಾಸವಾಗಿರುವವರಿದ್ದಾರೆ. ಮನೆ ನಿವೇಶನ ನೀಡಬೇಕೆಂದು ನಗರ ಪಾಲಿಕೆ




ಮೂಲಕ ಸರಕಾರಕ್ಕೆ ಅರ್ಜಿ ಸಲ್ಲಿಸುತ್ತಲೇ ಇದ್ದಾರೆ. ಸರಕಾರಿ ಜಮೀನಿನಲ್ಲಿ ಮನೆಗೆ ತಕ್ಕಷ್ಟು ಜಾಗದಲ್ಲಿ ಮನೆಕಟ್ಟಿಕೊಂಡು ಹಲವಾರು ವರ್ಷಗಳಿಂದ ವಾಸವಾಗಿದ್ದು, ಆ ಜಮೀನಿಗೆ ಹಕ್ಕುಪತ್ರ ಪಡೆಯದವರು ಇದ್ದಾರೆ. ಇವರ ಪ್ರಶ್ನೆಗಳಿಗೆ ಸಂಬಂಧಿಸಿ ಈ ಹಿಂದೆ ಡಿವೈಎಫ್‌ಐ ನೇತೃತ್ವದಲ್ಲಿ ನಿವೇಶನ ಹಾಗೂ ಹಕ್ಕುಪತ್ರಗಳಿಗಾಗಿ ಹೋರಾಟಗಳು ನಡೆದಿವೆ. ಕಳೆದ 3 ವರ್ಷಗಳ ಹೋರಾಟಗಳಿಗೆ ಪಾಲಿಕೆ ಕಿಂಚಿತ್ತೂ ಬೆಲೆ ಕೊಟ್ಟಿಲ್ಲ. ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ಮಂಗಳೂರು ನಗರ ಸಮಿತಿ ನೇತೃತ್ವದಲ್ಲಿ ನಿವೇಶನ ರಹಿತರ ಸಮಾವೇಶಗಳನ್ನು ನಗರದಲ್ಲಿ ಅಲ್ಲಲ್ಲಿ ಏರ್ಪಡಿಸಿದ್ದು, ಕಳೆದ ಸಪ್ಟೆಂಬರ್ 28, 2014 ರಂದು ನಗರ ಮಟ್ಟದ ಸಮಾವೇಶ ನಡೆಸಿ, ಮಂಗಳೂರು ನಗರ ಮಟ್ಟದ ನಿವೇಶನ ರಹಿತರ ಹೋರಾಟ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿ ನೇತೃತ್ವದಲ್ಲಿ ಅಕ್ಟೋಬರ್ 13ರ ರಾಜ್ಯಮಟ್ಟದ ಭೂಮಿ ಹೋರಾಟಕ್ಕೆ ಪೂರಕವಾಗಿ ಮಂಗಳೂರು ಮಹಾನಗರ ಪಾಲಿಕೆ ಎದುರು ಧರಣಿ ಸತ್ಯಾಗ್ರಹವನ್ನು ಕೈಗೊಳ್ಳಲಾಯಿತು.

ಪ್ರತಿಭಟನೆಗೂ ಮೊದಲು ಮಂಗಳೂರಿನ ಜ್ಯೋತಿ ವೃತ್ತದಿಂದ ಪಾಲಿಕೆ ಕಚೇರಿವರೆಗೆ ನಿವೇಶನ ರಹಿತರ ಮೆರವಣಿಗೆ ನಡೆಸಲಾಯಿತು. ಪಾಲಿಕೆ ಎದುರು ನಡೆದ ಪ್ರದರ್ಶನದಲ್ಲಿ 600 ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ಮಂಗಳೂರು ಪಾಲಿಕೆಯವರು ನಿವೇಶನ ರಹಿತ ಅರ್ಜಿದಾರರಿಗೆ ವಾಜಪೇಯಿ ವಸತಿ ಯೋಜನೆಯಲ್ಲಿ ಅರ್ಜಿ ಸಲ್ಲಿಸುವಂತೆ ಹಿಂಬರಹ ನೀಡಿದ್ದರು. ವಾಜಪೇಯಿ ವಸತಿ ಯೋಜನೆಯಾದರೋ ನಿವೇಶನ ಉಳ್ಳವರಿಗೆ ವಸತಿ ನೀಡಲು ಆರ್ಥಿಕವಾಗಿ ನೆರವಾಗುವ ಯೋಜನೆ. ಪಾಲಿಕೆಯ ಬೇಜವಾಬ್ದಾರಿ ವರ್ತನೆಯನ್ನು ಸತ್ಯಾಗ್ರಹವನ್ನುದ್ದೇಶಿಸಿ ಮಾತನಾಡಿದ ನಾಯಕರು ಖಂಡಿಸಿದರು. ಅಲ್ಲದೆ ನಗರದಲ್ಲಿ ಲಭ್ಯವುಳ್ಳ ವಿಶಾಲ ಸರಕಾರಿ ಭೂಮಿಯನ್ನು ಶ್ರೀಮಂತನೊಬ್ಬನ ರೆಸಾರ್ಟ್‌ಗೆ ಹಾಗೂ ಶ್ರೀಮಂತರ ಬಳಕೆಗಾಗಿರುವ ಗಾಲ್ಫ್ ಕ್ಲಬ್‌ಗೆ ಕಾದಿರಿಸಲು ಮಾಡಿದ ಪ್ರಯತ್ನವನ್ನು ಖಂಡಿಸಲಾಯಿತು. ಸತ್ಯಾಗ್ರಹವನ್ನು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ವಸಂತ ಆಚಾರಿ ಉದ್ಘಾಟಿಸಿದರು. ನಗರ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಕರ್ನಾಟಕ ಪ್ರಾಂತ ರೈತ ಸಂಘದ ದ.ಕ. ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ಮಂಗಳೂರು ನಗರ ಸಿಪಿಐ(ಎಂ) ಕಾರ್ಪರೇಟರ್ ದಯಾನಂದ ಶೆಟ್ಟಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಜೆ.ಬಾಲಕೃಷ್ಣ ಶೆಟ್ಟಿ, ಹೋರಾಟ ಸಮಿತಿಯ ಅಧ್ಯಕ್ಷ ಪ್ರೇಮನಾಥ್ ಜಲ್ಲಿಗುಡ್ಡೆ, ಕಾರ್ಯದರ್ಶಿ ಸಂತೋಷ್ ನೀತಿನಗರ ಮತ್ತಿತರರು ಧರಣಿಯಲ್ಲಿ ಭಾಗವಹಿಸಿದ್ದರು. ಪಾಲಿಕೆಯ ಮೇಯರ್ ಹಾಗೂ ಮಂಗಳೂರು ದಕ್ಷಿಣ ಶಾಸಕರು ಸತ್ಯಾಗ್ರಹಿಗಳನ್ನು ಭೇಟಿಯಾಗಿ ಮನವಿ ಸ್ವೀಕರಿಸಿದರು.

**ಬಗರ್ ಹುಕುಂ ಅರಣ್ಯ ಸಾಗುವಳಿದಾರರು– ನಿವೇಶನ ರಹಿತರಿಂದ ಜಿಲ್ಲಾ ಕೇಂದ್ರದಲ್ಲಿ ಧರಣಿ:**

ಕರ್ನಾಟಕ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ದ.ಕ.ಜಿಲ್ಲೆಯ ಎಲ್ಲಾ ತಾಲೂಕುಗಳ ಬಗರ್ ಹುಕುಂ ಸಾಗುವಳಿದಾರರು, ಅರಣ್ಯ ಭೂಮಿ ಸಾಗುವಳಿದಾರರು, ನಿವೇಶನ ರಹಿತರು, ಹಕ್ಕುಪತ್ರ ಅರ್ಜಿದಾರರು ಅಕ್ಟೋಬರ್ 14 ರಂದು ಮಂಗಳೂರಿನಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿದರು.

ಸತ್ಯಾಗ್ರಹಕ್ಕೂ ಮೊದಲು ಮಂಗಳೂರು ಜ್ಯೋತಿ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಬೃಹತ್ ಮೆರವಣಿಗೆ ನಡೆಸಲಾಯಿತು. ಸುಮಾರು ಸಾವಿರ ಜನ ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಉರಿಬಿಸಿಲಿನಲ್ಲಿ ಡಾಮರು ರಸ್ತೆಯ ಮೇಲೆಯೇ ಪ್ರತಿಭಟನಾಕಾರರು ಕುಳಿತಿದ್ದರು.

ಕರ್ನಾಟಕ ಪ್ರಾಂತ ರೈತ ಸಂಘದ ದ.ಕ. ಜಿಲ್ಲಾಧ್ಯಕ್ಷರೂ ಹಿರಿಯ ಕಾರ್ಮಿಕ ನಾಯಕರೂ ಆದ ಕೆ.ಆರ್.ಶ್ರೀಯಾನ್ ಸತ್ಯಾಗ್ರಹವನ್ನು ಉದ್ಘಾಟಿಸಿ ಮಾತನಾಡಿದರು. ದ.ಕ.ಜಿಲ್ಲೆಯಲ್ಲಿ ಅನೇಕ ಬಗರ್‌ಹುಕುಂ ಸಾಗುವಳಿದಾರರಿಗೆ ಜಮೀನು ತೆರವುಗೊಳಿಸುವಂತೆ ಅಧಿಕಾರಿಗಳಿಂದ ನೋಟೀಸು ಬಂದಿವೆ. ಡಾ।ಬಾಲಸುಬ್ರಹ್ಮಣ್ಯಂ ಸಮಿತಿ ವರದಿ ಅನುಷ್ಠಾನದ ಸಂಬಂಧ, ಸರಕಾರದ ಭೂಮಿಯನ್ನು ಸ್ವಾಧೀನಪಡಿಸಿರುವವರಿಂದ ಭೂಮಿಯನ್ನು ವಶಪಡಿಸುವುದಾಗಿ ರಾಜ್ಯ ಸರ್ಕಾರ ರಾಜ್ಯ ಹೈಕೋರ್ಟ್‌ಗೆ ಪ್ರಮಾಣಪತ್ರ ನೀಡಿದೆ. ಈ ಮುಚ್ಚಳಿಕೆ ಜ್ಯಾರಿ ಮಾಡುವುದಕ್ಕಾಗಿ ಸರಕಾರ ನೋಟೀಸು ನೀಡುತ್ತಿದೆ. ಆದ–ರೆ ಭೂಗಳ್ಳರು ಕಬಳಿಸಿರುವ ಭೂಮಿಯನ್ನು ಸರಕಾರ ಸ್ವಾಧೀನಪಡಿಸಬೇಕಾಗಿದೆಯೇ ವಿನಃ, ರೈತರು ಅಭಿವೃದ್ಧಿಪಡಿಸಿದ ಭೂಮಿಯನ್ನಲ್ಲ. ರೈತರನ್ನೂ, ಭೂಗಳ್ಳರನ್ನೂ ಒಂದೇ ತಟ್ಟೆಯಲ್ಲಿಟ್ಟು



ತೂಗುವ ಸರಕಾರದ ನೀತಿ ಖಂಡನೀಯ ಎಂದು ಕೆ.ಆರ್.ಶ್ರೀಯಾನ್ ನುಡಿದಿದ್ದಲ್ಲದೆ, ರೈತರ ತೀವ್ರ ಶ್ರಮದಿಂದ ಅಭಿವೃದ್ಧಿಪಡಿಸಿರುವ ಭೂಮಿಯನ್ನು ಎಂದಿಗೂ ಬಿಟ್ಟುಕೊಡುವುದಿಲ್ಲ ಎಂದು ಸರಕಾರಕ್ಕೆ ಎಚ್ಚರಿಕೆ ನೀಡಿದರು.

ಒಂದೆಡೆ ರೈತರಿಂದ ಸರಕಾರ ಭೂಮಿಯನ್ನು ಕಿತ್ತುಕೊಳ್ಳುವುದಿದ್ದರೆ, ಇನ್ನೊಂದೆಡೆ ಭೂ ಸುಧಾರಣಾ ಶಾಸನಕ್ಕೆ ತಿದ್ದುಪಡಿ ಮಾಡಿ ಕೃಷಿ ಹೆಸರಿನಲ್ಲಿ ಉದ್ಯಮಿಗಳಿಗೂ ಹೇರಳ ಭೂಮಿಯನ್ನು ನೀಡುತ್ತಾ, ಉದ್ಯಮಿಗಳ ಪರವಾಗಿ ನಡೆದುಕೊಳ್ಳುತ್ತಿದೆ. ಉದ್ಯಮಿಗಳ ಪರವಾಗಿ ಭೂಮಿ ಒದಗಿಸುವಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ನೇತೃತ್ವದ ಸರಕಾರಗಳಲ್ಲಿ ಯಾವ ವ್ಯಾತ್ಯಾಸವೂ ಇಲ್ಲ ಎಂದು ಕೆ.ಆರ್.ಶ್ರೀಯಾನ್ ತಿಳಿಸಿದರು.

ಧರಣಿ ಸತ್ಯಾಗ್ರಹಿಗಳನ್ನುದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಾದವ ಶೆಟ್ಟಿ, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ, ಇನ್ನೊಬ್ಬ ಕಾರ್ಮಿಕ ಮುಖಂಡ ಬಿ.ಎಂ.ಭಟ್ ಮಾತನಾಡಿದರು. ಪ್ರಾಂತ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಕೃಷ್ಣಪ್ಪ ಸಾಲ್ಯಾನ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ದ.ಕ.ಜಿಲ್ಲೆಯ ಕಾರ್ಮಿಕ ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ಯು.ಬಿ.ಲೋಕಯ್ಯ, ಸುನಿಲ್ ಕುಮಾರ್ ಬಜಾಲ್ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಮುಖ್ಯಮಂತ್ರಿಯವರಿಗೆ ಜಿಲ್ಲಾಧಿಕಾರಿಗಳ ಮೂಲಕ ಸಲ್ಲಿಸಿದ ಮನವಿಯನ್ನು ಕಂದಾಯ ಅಧಿಕಾರಿಯೊಬ್ಬರು ಧರಣಿ ಸ್ಥಳಕ್ಕೆ ಬಂದು ಸ್ವೀಕರಿಸಿದರು. ಅಪರಾಹ್ನ ಮನವಿ ಸಂಬಂಧವಾಗಿ ಜಿಲ್ಲಾಧಿಕಾರಿಯವರೊಡನೆ ಮಾತುಕತೆಯಾಯಿತು.

**ಸಲ್ಫರ್ ಕೋಕ್ ಘಟಕ ಮುಚ್ಚಲು ಆಗ್ರಹಿಸಿ ಪ್ರತಿಭಟನೆ:**

ಮಂಗಳೂರು ನಗರದ ಹೊರವಲಯದಲ್ಲಿ ಸಾರ್ವಜನಿಕ ರಂಗದ ಎಂಆರ್‌ಪಿಎಲ್ (ಮಂಗಳೂರು ರಿಫೈನರಿ ಪ್ರೈ.ಲಿ.) ಪೆಟ್ರೋಲಿಯಮ್ ಉತ್ಪನ್ನಗಳನ್ನು ಸಂಸ್ಕರಿಸುವ ಬಲುದೊಡ್ಡ ಕೈಗಾರಿಕಾ ಸ್ಥಾವರವಾಗಿದೆ. ಇಂಥ ಬೃಹತ್ ಸ್ಥಾವರದ ಸ್ಥಾಪನೆಗಾಗಿ ಹಲವು ವರ್ಷಗಳ

ಪುಟ 10 ಕ್ಕೆ

## ನಿರುದ್ಯೋಗ ವಿರುದ್ಧ ಕುಂದಾಪುರದಲ್ಲಿ ಸಿಐಟಿಯು ಪ್ರತಿಭಟನೆ

ನಿರುದ್ಯೋಗಿಗಳಿಗೆ ಇರುವ ಕೆಲವು ರಕ್ಷಣಾತ್ಮಕ ಸವಲತ್ತುಗಳನ್ನು ಕೂಡಾ ಬಲಪಂಥೀಯ ಸರಕಾರಗಳು ಕಸಿದು ಕೊಳ್ಳುತ್ತಿವೆ. ಸಮಾಜವಾದಿ ರಾಷ್ಟ್ರಗಳಲ್ಲಿ ಮಾತ್ರ ನಿರುದ್ಯೋಗಿಗಳ ಹಕ್ಕು ಹಾಗೂ ಸವಲತ್ತುಗಳು ರಕ್ಷಣೆ ಆಗುತ್ತಿವೆ. ನಮ್ಮ ದೇಶದ ಕೇಂದ್ರ ಸರಕಾರ ಅತ್ಯಂತ ಮಹತ್ವದ ಯೋಜನೆಗಳಲ್ಲೊಂದಾದ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಬಲಹೀನಗೊಳಿಸಲು ಹೊರಟಿದೆ. ಅಲ್ಲದೆ ಕಾರ್ಮಿಕರಿಗೆ ಸಿಗುವ ಸಂಬಳ ಸಹಿತ ಕೆಲವು ರಜೆಗಳನ್ನು ಕಾರ್ಮಿಕರಿಗೆ ನಿರಾಕರಿಸುವ ಸೂಚನೆ ಮೋದಿ ಸರ್ಕಾರ ನೀಡಿದೆ. ಹೀಗಾಗಿ ಎಲ್ಲಾ ಕಾರ್ಮಿಕ ಸಂಘಟನೆಗಳು ಒಗ್ಗಟ್ಟಾಗಿ ತೀವ್ರ ಹೋರಾಟ ನಡೆಸಬೇಕಾಗಿದೆ ಎಂಬುದಾಗಿ ಸಿಐಟಿಯು ಉಡುಪಿ ಜಿಲ್ಲಾಧ್ಯಕ್ಷ ಕೆ.ಶಂಕರ್ ಕಾರ್ಮಿಕರಿಗೆ ಕರೆ ನೀಡಿದರು.

ಅವರು ಅಕ್ಟೋಬರ್ 1 ರಂದು ಕುಂದಾಪುರದಲ್ಲಿ ಸಿಐಟಿಯು ಕುಂದಾಪುರ ತಾಲೂಕು ಸಮಿತಿಯ ನೇತೃತ್ವದಲ್ಲಿ ನಡೆದ ನಿರುದ್ಯೋಗದ ವಿರುದ್ಧ ಜಾಗತಿಕ ಕಾರ್ಯಾಚರಣೆ ದಿನದ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಪ್ರತಿಭಟನಾ ಸಭೆಯನ್ನುದ್ದೇಶಿಸಿ ಸಿಐಟಿಯು ಕುಂದಾಪುರ ತಾಲೂಕು ಕಾರ್ಯದರ್ಶಿ ಸುರೇಶ್ ಕಲ್ಲಾಗರ ಮಾತನಾಡಿದರು. ಸುಮಾರು ನೂರ ಐವತ್ತಕ್ಕೂ ಮೀರಿ ಕಾರ್ಮಿಕರು ಭಾಗವಹಿಸಿದ್ದರು. ಪ್ರತಿಭಟನೆಯ ಬಳಿಕ ನಿರುದ್ಯೋಗದ ಭೂತ ದಹನ ಮಾಡಲಾಯಿತು.

**ಬೆಳುವಾಯಿ ಗ್ರಾಮ ಪಂಚಾಯತಿಗೆ ಮುತ್ತಿಗೆ:**

ದಲಿತರ ವಿವಿಧ ಬೇಡಿಕೆಗಳಿಗೆ ಗ್ರಾಮ ಪಂಚಾಯತು ಸ್ಪಂಧಿಸುತ್ತಿಲ್ಲ ಎಂದು ಆಕ್ಷೇಪಿಸಿ ಮೂಡಬಿದ್ರೆ ಸಮೀಪದ ಬೆಳುವಾಯಿ ಪಂಚಾಯತ್‌ಗೆ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ದಲಿತ ಹಕ್ಕುಗಳ ಸಮಿತಿ ವತಿಯಿಂದ ಅಕ್ಟೋಬರ್ 7 ರಂದು ಮುತ್ತಿಗೆ ಹಾಕಲಾಯಿತು.

ಉದ್ಯೋಗ ಖಾತರಿ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ದಲಿತ ಸಮುದಾಯದವರಿಗೆ ಮೊದಲ ಆದ್ಯತೆ ನೀಡಬೇಕು. ಖಾಸಗಿ ಜಮೀನು ಖರೀದಿಸಿ ನಿವೇಶನ ರಹಿತ ಫಲಾನುಭವಿಗಳಿಗೆ ನಿವೇಶನ ನೀಡಬೇಕು ಎಂದು ಒತ್ತಾಯಿಸಲಾಯಿತು. ಬಸವ ವಸತಿ ಯೋಜನೆಯಡಿ ಮನೆ ನಿರ್ಮಿಸಲು ಮೊದಲೆರಡು ಕಂತುಗಳಲ್ಲಿ ಹಣ ಪಾವತಿಸಿದರೂ, ಆದಾಯ ಪತ್ರದ ನೆಪವೊಡ್ಡಿ ಆನಂತರ ಹಣ ಬಿಡುಗಡೆ ಮಾಡಿಲ್ಲ. ದಲಿತರಿಗೆ ಉಚಿತ ನೀರು ಕೊಡಬೇಕೆಂದಿದ್ದರೂ ನೀರಿಗೂ ಬಿಲ್ ನೀಡಲಾಗುತ್ತಿದೆ ಎಂಬುದಾಗಿ ಪ್ರತಿಭಟನಾಕಾರರು ಆಕ್ಷೇಪ ವ್ಯಕ್ತಪಡಿಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘದ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಯಾದವ ಶೆಟ್ಟಿ, ದ.ಕ. ದಲಿತ ಹಕ್ಕುಗಳ ಸಮಿತಿ ಸಹಸಂಚಾಲಕ ಲಿಂಗಪ್ಪ ನಂತೂರು ಮಾತನಾಡಿದರು. ಮುನ್ನೂರಕ್ಕೂ ಹೆಚ್ಚು ಮಂದಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ದಲಿತ ಹಕ್ಕುಗಳ ಜಿಲ್ಲಾ ಸಹ ಸಂಚಾಲಕ ಶಂಕರ ವಾಲ್ಪಾಡಿ, ಕೃಷ್ಣ ಕೊಣಾಜೆ ಪ್ರಾಂತ ರೈತ ಸಂಘದ ಗಿರಿಜ ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ●

# ದಲಿತ ವಿಧವೆಯರಿಗೆ ಧಾರ್ಮಿಕ ಹಕ್ಕು : ಜನಾರ್ಧನ ಪೂಜಾರಿಯವರ 'ಸಾಮಾಜಿಕ ಕ್ರಾಂತಿ'ಯ ಮಹತ್ವ ಮತ್ತು ಮಿತಿಗಳು

ವಾಸುದೇವ ಉಚ್ಚಿಲ

ಸೀಮಿತವಾದ ಕೆಲವು ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಣೆಗಳನ್ನೇ ಅತ್ಯಂತ ಕ್ರಾಂತಿಕಾರಿ ಕಾರ್ಯ ಎಂಬಂತೆ ಸಮಕಾಲೀನ ಸಂದರ್ಭದಲ್ಲಿ ಚಿತ್ರಿಸಲಾಗುತ್ತಿದೆ. ತನ್ನ ನಿರ್ದೇಶನದಲ್ಲಿ ನಡೆಯುತ್ತಿರುವ ಮಂಗಳೂರಿನ ಕುದ್ರೋಳಿಯ ಗೋಕರ್ಣನಾಥ ದೇವಾಲಯದಲ್ಲಿ ಇದೀಗ ಸತತ ಮೂರನೇ ವರ್ಷದಲ್ಲಿ ಮತ್ತೊಂದು ಹೊಸದೇ ಆದ ಸಾಮಾಜಿಕ ಸುಧಾರಣೆಯನ್ನು ಹಿರಿಯ ಕಾಂಗ್ರೆಸಿಗ ಜನಾರ್ಧನ ಪೂಜಾರಿ ಮಾಡಿದ್ದಾರೆ. ಮೊದಲ ವರ್ಷ ನವರಾತ್ರಿ ವೇಳೆಯಲ್ಲಿ ವಿಧವೆಯರಿಗೆ ಸೀರೆ ಹೂ ಕುಂಕುಮ ನೀಡಿ 'ಅಮಂಗಳ' ಕಳೆಯುವ ಪ್ರಯತ್ನ ಮಾಡಿದರು ಮತ್ತು ವಿಧವೆಯರಿಂದ ಚಂಡಿಕಾಹೋಮ ಕೂಡಾ ಮಾಡಿಸಿದರು. ಎರಡನೇ ನವರಾತ್ರಿ ವೇಳೆ ಇಬ್ಬರು ವಿಧವೆಯರನ್ನು ದೇವಾಲಯದ ಅರ್ಚಕರಾಗಿ ನೇಮಿಸಿ ಅವರಿಂದ ದೇವರ ಪೂಜಾ ಮಾಡಿಸಿದರು. ಅದೇ ವರ್ಷ ತನ್ನ ದಲಿತ ಶಿಕ್ಷಕಿಯ ಪಾದ ಪೂಜೆ ಮಾಡಿದರು. ಇದೀಗ ಮೂರನೇಯ ವರ್ಷದಲ್ಲಿ ದೇವಾಲಯದಲ್ಲಿ ದಲಿತ ಮಹಿಳೆಯರಿಬ್ಬರನ್ನು ಅರ್ಚಕರಾಗಿ ನೇಮಿಸಿ ಅವರಿಂದ ಪೂಜೆ ಪ್ರಾರಂಭಿಸಿದ್ದಾರೆ.

ಜನಾರ್ಧನ ಪೂಜಾರಿಯವರು ಈ ಮೂರು ವರ್ಷಗಳಲ್ಲಿ ಮಾಡಿಸಿದ ಸುಧಾರಣೆಗಳಲ್ಲಿ ಸಾಮಾಜಿಕವಾಗಿ ಕ್ರಾಂತಿಕಾರಕ ಅಂಶಗಳೇನು ಎಂಬುದನ್ನು ಪಟ್ಟಿ ಮಾಡೋಣ. ವಿಧವೆಯರಿಗೆ ಹಿಂದೂ ಸಂಪ್ರದಾಯದಂತೆ ಸಮಾಜದಲ್ಲಿ ವಿವಾಹಾದಿ ಶುಭಕಾರ್ಯಗಳಲ್ಲೂ, ದೇವಾಲಯದ ಸೇವೆಯಲ್ಲೂ ಸಭಾ ಮಧ್ಯಕ್ಕೆ ಬರುವ ಅವಕಾಶವಿರುವುದಿಲ್ಲ. ಹೂ ಕುಂಕುಮ ಉತ್ತಮ ವಸ್ತ್ರ ಅವರಿಗೆ ನಿಷಿದ್ಧವಾಗಿತ್ತು. ಜನಾರ್ಧನ ಪೂಜಾರಿಯವರು ಏರ್ಪಡಿಸಿದ್ದ ಸಮಾರಂಭದಲ್ಲಿ ಸಾವಿರಾರು ವಿಧವೆಯರು (ಹಿರಿಯರು ಕಿರಿಯರು ಎನ್ನದೆ) ಸೀರೆ ಹೂ ಕುಂಕುಮ ಸ್ವೀಕರಿಸಿದರು. 'ಮುಟ್ಟಬಾರದಾಗಿದ್ದ' ದೇವಳದ ತೇರಿನ ಹಗ್ಗವನ್ನು ಜಗ್ಗಿ ಎಳೆದರು. ಸಾಂಪ್ರದಾಯಿಕ ಸಮಾಜ ಅವರಿಗೆ ನೀಡಿದ್ದ 'ಅಮಂಗಳತೆ'ಯನ್ನು ಸಾರ್ವಜನಿಕವಾಗಿ ಅಲ್ಲಗಳೆಯಲಾಯಿತು. ಮಹಿಳೆಯರು ಭಾಗವಹಿಸಬಾರದಿದ್ದ ಚಂಡಿಕಾ ಹೋಮದಲ್ಲಿ ಅವರು ಭಾಗಿಯಾಗುವಂತೆ ಮಾಡಿದರು. ಎರಡನೆಯದಾಗಿ ದೇವಸ್ಥಾನದಲ್ಲಿ ದೇವರ ಪೂಜೆ ಪುರುಷರಿಗೆ ಸೀಮಿತವಾಗಿದ್ದು, ಮಹಿಳೆಯರಿಗೆ ಆ ಅವಕಾಶ ಇರುವುದಿಲ್ಲ. ವಿಧವಾ ಸ್ತ್ರೀಯರಂತೂ ಪೂಜೆ ಹಾಗೂ ದೇವಬಿಂಬದ ಸಮೀಪಕ್ಕೆ ಹೋಗಬಾರದು. ಅಂಥದ್ದರಲ್ಲಿ ಆಯ್ದ ಇಬ್ಬರು ವಿಧವೆಯರಿಂದ ಸಾರ್ವಜನಿಕ ದೇವಾಲಯದ ಪೂಜೆ ಎಂದರೆ ನಿಷಿದ್ಧ ಸಂಪ್ರದಾಯವನ್ನು ಮುರಿದಂತೆ ಅಲ್ಲವೇ? ಮೂರನೆಯದಾಗಿ ದಲಿತ ಪುರುಷರೂ ಸಾರ್ವಜನಿಕ ದೇವಾಲಯದಲ್ಲಿ ಗರ್ಭಗೃಹವನ್ನು ಪ್ರವೇಶಿಸುವಂತಿಲ್ಲ. ಮಹಿಳೆಯರು ಹೇಗೂ ಪ್ರವೇಶಿಸುವಂತಿಲ್ಲ. ಈಗ ದಲಿತ ಮಹಿಳೆಯರೇ ಅರ್ಚಕರಾಗಿ ಕಾರ್ಯನಿರ್ವಹಿಸುತ್ತಿರುವುದು ಕೂಡಾ ಜಾತಿ ವ್ಯವಸ್ಥೆಯ ಮೇಲು ಕೀಳು ವ್ಯವಸ್ಥೆಯನ್ನೇ ಬುಡಮೇಲು ಮಾಡುವಂಥಾದ್ದು. ಒಂದು ಪ್ರಜಾಸತ್ತಾತ್ಮಕ ಸಮಾನತೆಯ ವ್ಯವಸ್ಥೆಯನ್ನು ಅಂಗೀಕರಿಸುವ ಭಾರತದಲ್ಲಿ ಈಗಲೂ ಮಹಿಳೆಯರಲ್ಲಿ ಕೆಲವರನ್ನು ಅಮಂಗಳ ಎಂದು ಪರಿಗಣಿಸಲಾಗುತ್ತಿದೆ. ದೇವರ ಪೂಜೆ ಮಾಡುವಲ್ಲಿಯೂ ಪುರುಷ–ಮಹಿಳೆ ಎಂಬುದಾಗಿ ಭೇದ ಮಾಡಿ, ಮಹಿಳೆಯ ಆರಾಧನಾ ಸ್ವಾತಂತ್ರ್ಯವನ್ನು ಹತ್ತಿಕ್ಕಲಾಗುತ್ತಿದೆ. ದಲಿತರು–ದಲಿತೇತರರು, ಕೆಳಜಾತಿ–ಮೇಲುಜಾತಿ ಎಂಬುದಾಗಿ ಸಾರ್ವಜನಿಕವಾಗಿ ತಾರತಮ್ಯವನ್ನು ಆಚರಿಸಲಾಗುತ್ತಿದೆ. ಈ ಹಲವು ಬಗೆಯ ಸಾಮಾಜಿಕ, ಧಾರ್ಮಿಕ ತಾರತಮ್ಯ ಅಮಾನವೀಯವಾದುದು, ಅಪ್ರಜಾಸತ್ತಾತ್ಮಕವಾದುದು, ಅಸಮಾನತೆಯನ್ನು ಎತ್ತಿಹಿಡಿಯುವಂಥದ್ದು ಎಂದು ಪರಿಗಣಿಸಿ, ಈ ತಾರತಮ್ಯ ವ್ಯವಸ್ಥೆಯನ್ನು ಸಾರ್ವಜನಿಕವಾಗಿ ಇಲ್ಲವಾಗಿಸುವಂಥ ಆಚರಣೆಗಳನ್ನು ರೂಢಿಗೆ ತರಲು ಜನಾರ್ಧನ ಪೂಜಾರಿಯವರು ಮಾಡಿದ ಪ್ರಯತ್ನಗಳು ಶ್ಲಾಘನೀಯ ಮಾತ್ರವಲ್ಲ ಅಷ್ಟು ಮಟ್ಟಿಗೆ ಕ್ರಾಂತಿಕಾರಿ ಕೂಡಾ.

ಹಿಂದೂ ಧಾರ್ಮಿಕ ಆಚರಣೆಗಳಲ್ಲಿ ಸುಧಾರಣೆಗಳನ್ನು ಬಯಸುವವರು ಗೋಕರ್ಣನಾಥ ದೇಗುಲದಲ್ಲಿ ನಡೆಯುತ್ತಿರುವ ಹೊಸ ರೂಢಿಗಳ ಶ್ಲಾಘನೆ ವ್ಯಕ್ತಪಡಿಸಿದ್ದಾರೆ. ಮಾಧ್ಯಮಗಳೂ ಶ್ಲಾಘಿಸಿವೆ. ಆದರೆ ಹಿಂದೂತ್ವದ ವಕ್ತಾರರು ಎಂದು ಪಡೆಕಟ್ಟಿ ಹಿಂದುತ್ವಕ್ಕಾಗಿ ಹೋರಾಡುತ್ತಿರುವ ಸಂಘಪರಿವಾರದ ಯಾವೊಬ್ಬ ನಾಯಕರೂ, ಬಿಜೆಪಿಯ ನಾಯಕರೂ ಈ ಬಗ್ಗೆ ಶ್ಲಾಘನೆ ವ್ಯಕ್ತಪಡಿಸಿಲ್ಲ. ಜನಾರ್ಧನ ಪೂಜಾರಿಯವರು ಕಟ್ಟಾ ಕಾಂಗ್ರೆಸಿಗರಾಗಿರುವುದು ಇದಕ್ಕೆ ಕಾರಣವಿರಬೇಕು.

## ಗಂಭೀರ ಮಿತಿಗಳು

ಹಾಗೆ ನೋಡಿದರೆ ಹಿಂದುತ್ವವಾದಿ ಸಿದ್ಧಾಂತಗಳ ವೈದಿಕ ಧರ್ಮ ಶ್ರೇಷ್ಠತೆಯ ಪರಿಕಲ್ಪನೆಯಾಗಲೀ, ವರ್ಣ ವ್ಯವಸ್ಥೆಯ ಅವೈಜ್ಞಾನಿಕತೆಯನ್ನಾಗಲೀ ಜನಾರ್ಧನ ಪೂಜಾರಿಯವರು ಪ್ರಶ್ನಿಸಿಲ್ಲ. ಅಲ್ಲದೆ ಜನಾರ್ಧನ ಪೂಜಾರಿಯವರಿಗೆ ವೈದಿಕ ಧರ್ಮಶ್ರೇಷ್ಠತೆ, ವರ್ಣವ್ಯವಸ್ಥೆಯ ಇರುವಿಕೆ ಬಗ್ಗೆ ಒಪ್ಪಿಗೆ ಇರುವಂತೆ ಕಾಣುತ್ತದೆ. ಕೆಲವು ವರ್ಷಗಳ ಹಿಂದೆ ಗೋಕರ್ಣನಾಥ ದೇಗುಲದ ಜೀರ್ಣೋದ್ಧಾರ ಆಗಿ ನವೀಕರಣ ಉತ್ಸವ ಸಂದರ್ಭ ಅವರು ಶೃಂಗೇರಿ ಶಂಕರ ಪೀಠದ ಧರ್ಮಗುರು ಶಂಕರಾಚಾರ್ಯರನ್ನೇ ಕರೆಯಿಸಿ ಅವರ ಮುಂದಾಳ್ತನದಲ್ಲಿ ಹೋಮ ಹವನಾದಿಗಳನ್ನು ಮಾಡಿಸಿದ್ದರು.



ಅರ್ಚಕರಾಗಿ ದಲಿತ ವಿಧವೆಯ ನೇಮಕ


ಗೋಕರ್ಣನಾಥ ದೇವಸ್ಥಾನಕ್ಕೆ ವಿಶಿಷ್ಟವಾದ ಚರಿತ್ರೆಯಿದೆ. ನೂರೆರಡು ವರ್ಷಗಳ ಹಿಂದೆ ಕೆಳಜಾತಿಯವರು ಮಾತ್ರವಲ್ಲದೆ ಅಸ್ಪೃಶ್ಯರೂ ಆಗಿದ್ದ ಬಿಲ್ಲವ ಸಮುದಾಯದವರಿಗಾಗಿ ಅಂದಿನ ಖ್ಯಾತ ಸಮಾಜೋದ್ಧಾರಕರಾದ ನಾರಾಯಣ ಗುರುಗಳು ಕಟ್ಟಿಸಿಕೊಟ್ಟ ದೇವಸ್ಥಾನವಿದು. ನಿಜವಾಗಿ ನೋಡಿದರೆ ನಾರಾಯಣ ಗುರುಗಳು ವರ್ಣ ವ್ಯವಸ್ಥೆಯನ್ನು ಎತ್ತಿಹೇಳುವ ವೈದಿಕ ವ್ಯವಸ್ಥೆಯನ್ನೇ ವಿರೋಧಿಸಿದವರು. ಬಹಳ ದೊಡ್ಡ ಚಿಂತನೆಯಿಂದ ಅವರು ರೂಪಿಸಿದ 'ಒಂದೇ ಜಾತಿ, ಒಂದೇ ಮತ, ಒಂದೇ ದೇವರು' ಎಂಬ ತತ್ವವನ್ನು ಅವರು ಕೇರಳದಿಂದ ಆರಂಭಿಸಿ ಎಲ್ಲೆಡೆಯೂ ಪ್ರಚಾರ ಮಾಡಿದರು. ಜಾತಿ ಮತಗಳಿಂದ ಕೂಡಿದ ಹಿಂದೂ ಸಮಾಜದಲ್ಲಿ ಮೇಲುಜಾತಿ ಎನಿಸಿದ ವೈದಿಕರು ಮಾತ್ರ ದೇವರನ್ನು ಪೂಜಿಸಬಹುದು ಎಂಬ ಸಂಗತಿ ಅವರಿಗೆ ಒಪ್ಪಿತವಾಗದಾಯ್ತು. ದೇವ ವಿಶ್ವಾಸಿಯಾದ ಪ್ರತಿಯೊಬ್ಬನೂ – ಅವನು ಯಾವುದೇ ಜಾತಿಯಲ್ಲಿ ಹುಟ್ಟಿರಲಿ–ದೇವರ ಪೂಜೆ ಮಾಡಲು ಸಾಧ್ಯವಾಗಬೇಕು ಎಂದು ಅವರು ಬಯಸಿದರು. ಅವರು ದೇವ ಬಿಂಬಗಳನ್ನು ಸ್ಪರ್ಶಿಸಲಾಗದ ಕೆಳಜಾತಿಯವರಿಗೆ ಆರಾಧನೆಯ ಅವಕಾಶಕ್ಕಾಗಿ ಹಂಬಲಿಸಿ ಕಾರ್ಯರೂಪಕ್ಕಿಳಿಸಿದರು. ಹಾಗೆ ನೋಡಿದರೆ ನಿರಾಕಾರ ತತ್ವವನ್ನು ಒಪ್ಪಿದ್ದ ಅವರಿಗೆ ಮೂರ್ತಿ ಪೂಜೆ ಒಪ್ಪಿತವಾಗಿರಲಿಲ್ಲ. ತನ್ನ ಸಮುದಾಯದ ಕೆಳಜಾತಿಯ ದೈವಭೂತಗಳನ್ನೂ ಅವರು ಆರಾಧಿಸಲು ಹೇಳಲಿಲ್ಲ. ಕೆಳಜಾತಿಯವರಿಗೆ ಬಡವರಿಗೆ ಆರಾಧಿಸಲು ತಾನೇನಾದರೂ ಒದಗಿಸಬೇಕೆಂಬ ಸಂಕಲ್ಪ ಅವರದ್ದಾಗಿತ್ತು. ಕೇರಳದಲ್ಲೂ, ಕರ್ನಾಟಕದಲ್ಲೂ ಅವರು ಸ್ಥಾಪಿಸಿದ ದೇವಾಲಯಗಳಲ್ಲಿ ಕೆಲವೆಡೆ ಅವರು ಶಿವಲಿಂಗಗಳನ್ನು ಸ್ಥಾಪನೆ ಮಾಡಿದರೆ, ಕೆಲವೆಡೆ ಗರ್ಭಗುಡಿಯಲ್ಲಿ ಕೇವಲ ಕನ್ನಡಿಯನ್ನು ಮಾತ್ರ ಸ್ಥಾಪಿಸಿದರು. ಕನ್ನಡಿಯಲ್ಲಿ ನಮ್ಮನ್ನು ನಾವು ನೋಡುವುದರ ಮೂಲಕ ದೇವರನ್ನು ನಾವು ತಿಳಿಯುವಂತಾಗಬೇಕು ಎಂಬುದು ಅವರ ವಿಚಾರವಾಗಿತ್ತು. ಅವರು ಎಲ್ಲೂ ಪೂಜಾರಿಗಳನ್ನು ನೇಮಿಸಲಿಲ್ಲ. ಅವರ ಕಾಲಾನಂತರದಲ್ಲಿ ಅವರು ಸ್ಥಾಪಿಸಿದ ದೇವಾಲಯಗಳಲ್ಲಿ ಕೇರಳದಲ್ಲಿ ಈಳವರನ್ನು, ಮಂಗಳೂರಿನಲ್ಲಿ ಬಿಲ್ಲವರನ್ನು ಆಯಾ ಜಾತಿ ಸಮುದಾಯಗಳ ಮುಖಂಡರು ನೇಮಿಸಿಕೊಂಡರು.

ತುಳುನಾಡಿನ ಮಟ್ಟಿಗೆ ದೈವಭೂತಗಳ ಆರಾಧನೆಯಲ್ಲದ ವೈದಿಕವೆನಿಸಲ್ಪಡುವ ದೇವಾಲಯದಲ್ಲಿ ಬ್ರಾಹ್ಮಣೇತರರು ಪೂಜೆಯ ಕಾರ್ಯ ಮಾಡುತ್ತಿರುವುದು ಗೋಕರ್ಣನಾಥ ದೇವಾಲಯದ ವೈಶಿಷ್ಟ್ಯ. ಅರ್ಚಕರು, ಮೇಲುಶಾಂತಿಯವರು/ಶಾಂತಿಯವರು ಎಂದು ಅನಿಸಿಕೊಳ್ಳುವ ಅರ್ಚಕ ವರ್ಗದವರು ಈಗ ವೈದಿಕ ಪೂಜಾ ಮಂತ್ರಗಳನ್ನು ಬಳಸುತ್ತಾರೆ. ಮೊದ ಮೊದಲು ಕೇರಳಕ್ಕೆ ಹೋಗಿ ಅಲ್ಲಿ ನಾರಾಯಣ ಗುರುಗಳು ಸ್ಥಾಪಿಸಿದ ದೇವಾಲಯಗಳಲ್ಲಿ ತರಬೇತಿ ಪಡೆದು ಬರುತ್ತಿದ್ದರು. ಈಚೆಗೆ ಅರ್ಚಕ ವರ್ಗ ಸಾಕಷ್ಟು ಬೆಳೆದಿದ್ದು, ವೈದಿಕ ವಿಭಾಗದಲ್ಲೇ ಪೂಜೆ, ವ್ರತ, ಹೋಮ, ಗಣಹೋಮ ಇತ್ಯಾದಿಗಳನ್ನು ಮಂಗಳೂರಿನ ಆಸುಪಾಸಿನ ಬಿಲ್ಲವರ ಹಾಗೂ ಕೆಲವೊಮ್ಮೆ ಇತರ ಬ್ರಾಹ್ಮಣೇತರರ ಮನೆಗಳಲ್ಲೂ ಅವರು ನಡೆಸಿಕೊಡುತ್ತಾರೆ. ಬ್ರಾಹ್ಮಣರಿಲ್ಲದೇ ಧಾರ್ಮಿಕ ವಿಧಿಗಳು ಮನೆಗಳಲ್ಲಿ ನಡೆಯುತ್ತಿವೆ.

ಹಿಂದುತ್ವವಾದದ ಪ್ರಭಾವದಿಂದಾಗಿ ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲಾ ಕೆಳ ಜಾತಿಗಳೂ ಪ್ರತಿಯೊಂದು ಧಾರ್ಮಿಕ ಚಟುವಟಿಕೆಗಳಿಗೂ ವೈದಿಕರನ್ನೇ ಕರೆಸುವ ಪರಿಪಾಠ ಬಂದಿದೆ. ಪೂಜೆ, ಹೋಮಾದಿಗಳನ್ನು ಬ್ರಾಹ್ಮಣರೇ ನಡೆಸಿದರೆ ಶ್ರೇಷ್ಠ ಹಾಗೂ ಧರ್ಮಸಮ್ಮತ ಎಂಬ ನಂಬಿಕೆ ಬಲವಾಗುತ್ತಿದೆ. ಆದರೆ ಜನಾರ್ಧನ ಪೂಜಾರಿಯವರ ನೇತೃತ್ವದಲ್ಲಿ ಗೋಕರ್ಣನಾಥ ದೇವಸ್ಥಾನವು ಬಿಲ್ಲವರ ಆಡಳಿತದಲ್ಲಿದ್ದರೂ ಸಾರ್ವಜನಿಕ ದೇವಾಲಯ ಎನಿಸಿಕೊಂಡಿದೆ. ಈ ಮೂರು ವರ್ಷಗಳಲ್ಲಿ ಸಾಮಾಜಿಕ ಕ್ರಾಂತಿಗೆ ಮುಂದಾಗಿದೆ. ಈ ದೇವಾಲಯದ ನವರಾತ್ರಿ ಉತ್ಸವ ಮಂಗಳೂರು ದಸರಾ ಎಂದು ಖ್ಯಾತವಾಗಿದೆ. ಆರೆಸ್ಸೆಸ್ ಪ್ರಭಾವಕ್ಕೆ ಒಳಗಾದ ಬಿಲ್ಲವರ ಬಹುದೊಡ್ಡ ವಿಭಾಗ ಕೇಸರಿ ಬಾವುಟವನ್ನು ಪೂಜಿಸಲು ಪ್ರತೀ ವರ್ಷವೂ ಪ್ರಯತ್ನ ನಡೆಸುತ್ತಾ ಬಂದಿದೆ. ಜನಾರ್ಧನ ಪೂಜಾರಿಯವರು ಕಾಂಗ್ರೆಸಿಗರಾಗಿರುವುದರಿಂದ ಬೇರೆಕಡೆ ಹಿಂದೂ ಧಾರ್ಮಿಕ ಉತ್ಸವಗಳಲ್ಲಿ ಮುಂಚೂಣಿಯಲ್ಲಿರುವ ಸಂಘಪರಿವಾರಿಗಳು ಮಂಗಳೂರು ದಸರಾ ಬಗ್ಗೆ ಕಹಿಯನ್ನು ಉಗುಳುತ್ತಾ ಬಂದಿದ್ದಾರೆ.

ದೇಶದಲ್ಲಿ ದಲಿತರ ಮೇಲೆ ದೌರ್ಜನ್ಯಗಳು, ಅಸ್ಪೃಶ್ಯತಾ ಆಚರಣೆ– ಸ್ವಾತಂತ್ರ್ಯ ಬಂದು 67 ವರ್ಷಗಳಾಗಿದ್ದರೂ ಕಡಿಮೆಯಾಗಿರುವುದಿಲ್ಲ. ಮೊನ್ನೆ ಮೊನ್ನೆ ಬಿಹಾರದಲ್ಲಿ ದಲಿತ ಮುಖ್ಯಮಂತ್ರಿಗಳು ದೇವಾಲಯವೊಂದಕ್ಕೆ ಭೇಟಿ ನೀಡಿ ವಾಪಾಸಾದ ಮೇಲೆ, ಅದನ್ನು ತೊಳೆದು ಸ್ವಚ್ಛಗೊಳಿಸಿದ ಘಟನೆ ವರದಿಯಾಗಿದೆ. ರಾಜ್ಯದ ದಲಿತ ಮಾಜಿ ಕೇಂದ್ರ ಮಂತ್ರಿಗಳೊಬ್ಬರು ಈಗಲೂ ದೇವಾಲಯದ ಹೊರಗಿನಿಂದಲೇ ದೇವರಿಗೆ ಕೈ ಮುಗಿಯುತ್ತಾರೆ. ಶಿಕ್ಷಕರೊಬ್ಬರ ಹೂಜಿ ನೀರನ್ನು ಕುಡಿದ ದಲಿತ ಬಾಲಕರಿಬ್ಬರನ್ನು ಶಾಲೆಯಿಂದ ಹೊರಹಾಕಿದ ಘಟನೆ ಕೆಲವು ದಿನಗಳ ಹಿಂದೆ ಉತ್ತರ ಭಾರತದ ರಾಜಾಸ್ತಾನದಲ್ಲಿ ನಡೆದುದು ವರದಿಯಾಗಿದೆ. ಇಂಥ ವಿದ್ಯಾಮಾನಗಳ ಜೊತೆಗೆ ಹೋಲಿಸಿದಾಗ ಜನಾರ್ಧನ ಪೂಜಾರಿಯವರು ದಲಿತರಿಗೆ ಮಹಿಳೆಯರಿಗೆ, ವಿಧವೆಯರಿಗೆ ಧಾರ್ಮಿಕ ಹಕ್ಕು ಗೌರವ ಒದಗಿಸುವ ಕಾರ್ಯ ಮಾಡಿದ್ದು ಒಂದು ಹಂತಕ್ಕೆ ಕ್ರಾಂತಿಕಾರಿಯಾದುದೇ. ಆದರೆ ಇದೇ ದಲಿತರ ಮಹಿಳೆಯರ ಆರ್ಥಿಕ ಶೋಷಣೆ ದಮನಗಳನ್ನು ಗೌಣವಾಗಿಸುವುದಿಲ್ಲ. ಈ ಘಟನೆಯನ್ನೇ ವಿಶ್ಲೇಷಿಸುತ್ತಾ, ದಲಿತರಿಗೆ ಆರ್ಥಿಕ ಶೋಷಣೆಗಿಂತ ಸಾಮಾಜಿಕ ಶೋಷಣೆಯಿಂದ ಬಿಡುಗಡೆ ಮುಖ್ಯವಾದುದು ಎಂಬಂತೆ ಕನ್ನಡ ಪ್ರಮುಖ ಪತ್ರಿಕೆಯೊಂದು ತನ್ನ ಸಂಪಾದಕೀಯದಲ್ಲಿ ಬರೆದಿದೆ. ಸಾಮಾಜಿಕ ಪ್ರಶ್ನೆ – ಆರ್ಥಿಕ ಪ್ರಶ್ನೆ ಎರಡೂ ಮುಖ್ಯವಾದುವು. ಇವುಗಳು ಪರಸ್ಪರ ಒಂದರ ಮೇಲೊಂದು ಪ್ರಭಾವ ಬೀರುತ್ತವೆ. ಯಾವುದು ಹೆಚ್ಚು ಯಾವುದು ಕಡಿಮೆ ಯಾವುದು ಮೊದಲು ಯಾವುದು ನಂತರ ಎಂದು ಆರ್ಥಿಕ ಪ್ರಶ್ನೆ–ಸಾಮಾಜಿಕ ಪ್ರಶ್ನೆಗಳನ್ನು ಒಂದರ ವಿರುದ್ದ ತಂದು ನಿಲ್ಲಿಸುವುದು ಸಮರ್ಪಕವಲ್ಲ. ಏಕಕಾಲಕ್ಕೆ ಎರಡೂ ಬಗೆಯ ಅನ್ಯಾಯ ಅಸಮಾನತೆಗಳನ್ನು ಎದುರಿಸಬೇಕಿದೆ.

ಪುಟ 15 ಕ್ಕೆ




# ಅಲೆಯೂ ಇಲ್ಲ, ಸುನಾಮಿಯೂ ಇಲ್ಲ

## ನಮ್ಮ ಚುನಾವಣಾ ವ್ಯವಸ್ಥೆಯ ಅಸಂಗತತೆಗಳಷ್ಟೇ

**ಲೋಕಸಭಾ ಚುನಾವಣೆಗಳಲ್ಲಿ ಅದು ಕೇವಲ 31ಶೇ. ಮತಗಳಿಸಿ ಆರಾಮವಾಗಿ ಬಹುಮತ ಗೆದ್ದುಕೊಂಡಿತು. ಹರ್ಯಾಣದಲ್ಲಿ ಅದೀಗ ಬಹುಮತ ಗಳಿಸಿರುವುದು ಚಲಾಯಿಸಿದ ಮತಗಳಲ್ಲಿ ಕೇವಲ 33ಶೇ. ಪಡೆದು. ಮಹಾರಾಷ್ಟ್ರದಲ್ಲಿ ಅದು ಕೇವಲ 29ಶೇ. ಮತ ಪಡೆದು 123 ಸ್ಥಾನಗಳನ್ನು ಗೆದ್ದುಕೊಂಡಿದೆ. ಹೀಗಿವೆ 'ಮೊದಲು ಗೆಲುವಿನ ಗೆರೆ ದಾಟುವ' ವ್ಯವಸ್ಥೆಯಲ್ಲಿನ ಅಸಂಗತತೆಗಳು. ನಮ್ಮ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸಿ, ಅದನ್ನು ನಿಜವಾಗಿಯೂ ಪ್ರಜಾಸತ್ತಾತ್ಮಕಗೊಳಿಸಲು, ಅಂದರೆ ಬಹುಮತದ ಆಳ್ವಿಕೆಯಾಗಿ ಮಾಡಲು ನಮ್ಮ ಚುನಾವಣಾ ವ್ಯವಸ್ಥೆಯಲ್ಲಿ ತೀವ್ರ ಬದಲಾವಣೆ ತರಬೇಕಾದ ಅಗತ್ಯತೆಯನ್ನು ಮತ್ತೊಮ್ಮೆ ಎತ್ತಿ ತೋರಿವೆ.**

**ಸೀತಾರಾಮ್ ಯೆಚೂರಿ**

ರಾಜ್ಯ ವಿಧಾನಸಭೆಗಳಿಗೆ ಇತ್ತೀಚಿನ ಚುನಾವಣೆಗಳ ನಂತರ ಬಿಜೆಪಿ ಹರ್ಯಾಣದಲ್ಲಿ ತನ್ನ ಸ್ವಂತ ಶಕ್ತಿಯ ಮೇಲೆ ಒಂದು ಸರಕಾರ ರಚಿಸಲು ಮತ್ತು ಮಹಾರಾಷ್ಟ್ರದಲ್ಲಿ ಅದರ ನೇತೃತ್ವದ ಒಂದು ಸರಕಾರ ರಚಿಸಲು ಸಜ್ಜಾಗುತ್ತಿದೆ. ಅಲ್ಲಿ ಕಾಂಗ್ರೆಸ್–ಎನ್‌ಸಿಪಿ ಸರಕಾರ ಹದಿನೈದು ವರ್ಷಗಳ ಒಂದು ದೀರ್ಘಕಾಲದ ವರೆಗೆ, ಮತ್ತು ಹರ್ಯಾಣದಲ್ಲಿ ಕಾಂಗ್ರೆಸ್ ಸತತವಾಗಿ ಎರಡು ಅವಧಿಗಳಲ್ಲಿ ಹತ್ತು ವರ್ಷಗಳ ಕಾಲ ಅಧಿಕಾರ ನಡೆಸಿದ ಮೇಲೆ ಈ ಫಲಿತಾಂಶಗಳು ಬಂದಿವೆ. ಇದು, ಸುಮಾರಾಗಿ ನ್ಯಾಯ ಮತ್ತು ಮುಕ್ತವಾದ ಈ ವಿಧಾನಸಭಾ ಚುನಾವಣೆಗಳಲ್ಲಿ ಜನತೆಯ ತೀರ್ಪು. ನಮ್ಮಂತಹ ಪ್ರಜಾಪ್ರಭುತ್ವಗಳಲ್ಲಿ ಇಂತಹ ಜನತೆಯ ತೀರ್ಪು ಅಂತಿಮ ಅಧಿಕಾರ ಹೊಂದಿರುವಂತದ್ದು.

ಕಾಂಗ್ರೆಸ್ ಮತ್ತು ಎನ್‌ಸಿಪಿ ಪ್ರತ್ಯೇಕವಾಗಿ ಚುನಾವಣಾ ಹೋರಾಟ ನಡೆಸಿದವು. ಬಹುಶಃ, ಬೇರೆ ಅಂಶಗಳೊಂದಿಗೆ 15 ವರ್ಷಗಳ ಕಾಲದ ಅಧಿಕಾರಸ್ಥ–ವಿರೋಧಿ ಅಂಶವೂ ಸೇರಿಕೊಂಡುದರ ನಕಾರಾತ್ಮಕ ಪರಿಣಾಮ ಉಂಟಾಗಲಿದೆ ಎಂದು ಎನ್‌ಸಿಪಿ ನಿರೀಕ್ಷಿಸಿರಬೇಕು. ಇಂತಹ ಸಂದರ್ಭದಲ್ಲಿ ಕಾಂಗ್ರೆಸ್ 18ಶೇ. ಮತಗಳಿಸಿ 42 ಸ್ಥಾನಗಳನ್ನೂ, ಎನ್‌ಸಿಪಿ 17ಶೇ. ಮತಗಳಿಸಿ 41 ಸ್ಥಾನಗಳನ್ನೂ ಪಡೆದಿವೆ. ಹರ್ಯಾಣದಲ್ಲಿ 90ರಲ್ಲಿ 47 ಸ್ಥಾನಗಳನ್ನು ಪಡೆದು ಬಿಜೆಪಿ ನೇರ ಸರಳ ಬಹುಮತ ಗಳಿಸಿದೆ.

### ಬಹುಮತ ಗಿಟ್ಟಿಸುವ ಕಲೆ

ಈ ವೇಳೆಗಾಗಲೇ ಬಿಜೆಪಿ ಒಂದು ಬಹುಧ್ರುವೀಯ ಚುನಾವಣಾ ಸ್ಪರ್ಧೆಯಲ್ಲಿ ಮೂರನೇ ಒಂದು ಭಾಗ ಅಥವ ಅದಕ್ಕಿಂತಲೂ ಕಡಿಮೆ ಜನಬೆಂಬಲದೊಂದಿಗೆ ಬಹುಮತ ಪಡೆದುಕೊಳ್ಳುವ ಕಲೆಯನ್ನು ಕರಗತ ಮಾಡಿ ಕೊಂಡಂತೆ ಕಾಣುತ್ತದೆ. ಲೋಕಸಭಾ ಚುನಾವಣೆಗಳಲ್ಲಿ ಅದು ಕೇವಲ 31ಶೇ. ಮತಗಳಿಸಿ ಆರಾಮವಾಗಿ ಬಹುಮತ ಗೆದ್ದುಕೊಂಡಿತು. ಹರ್ಯಾಣದಲ್ಲಿ ಅದೀಗ ಬಹುಮತ ಗಳಿಸಿರುವುದು ಚಲಾಯಿಸಿದ ಮತಗಳಲ್ಲಿ 33ಶೇ. ಪಡೆದು. ಮಹಾರಾಷ್ಟ್ರದಲ್ಲಿ ಅದು ಕೇವಲ 29ಶೇ. ಮತ ಪಡೆದು 123 ಸ್ಥಾನಗಳನ್ನು ಗೆದ್ದುಕೊಂಡಿದೆ. "2004 ಮತ್ತು 2009ರಲ್ಲಿ ಮಿತ್ರರಾಗಿ ಸ್ಪರ್ಧಿಸಿ ಕಾಂಗ್ರೆಸ್ ಮತ್ತು ಎನ್‌ಸಿಪಿ ಜತೆಗೂಡಿ ಅನುಕ್ರಮವಾಗಿ 40 ಮತ್ತು 37ಶೇ. ಮತ ಗಳಿಸಿದ್ದವು. ಈ ಬಾರಿ ಪ್ರತ್ಯೇಕವಾಗಿ ಸ್ಪರ್ಧಿಸಿ ಅವು ಒಟ್ಟು 35ಶೇ. ಮತ ಗಳಿಸಿವೆ. ಅವರ ಸೀಟುಗಳ ಸಂಖ್ಯೆ 144ರಿಂದ 83ಕ್ಕೆ ಇಳಿದಿದೆ. ಅತ್ತ ಬಿಜೆಪಿಯದ್ದು 46 ರಿಂದ 123 ಕ್ಕೆ ನೆಗೆದಿದೆ" ಎಂದು ಇಂಡಿಯನ್ ಎಕ್ಸ್‌ಪ್ರೆಸ್(ಅಕ್ಟೋಬರ್ 20, 2014) ಹೇಳಿದೆ.

ಹೀಗಿವೆ 'ಮೊದಲು ಗೆಲುವಿನ ಗೆರೆ ದಾಟುವ' ವ್ಯವಸ್ಥೆಯಲ್ಲಿನ ಅಸಂಗತತೆಗಳು. ಇದನ್ನು ನಾವೀಗಾಗಲೇ ಈ ಅಂಕಣದಲ್ಲಿ ಲೋಕಸಭಾ ಚುನಾವಣೆಗಳ ಹಿನ್ನೆಲೆಯಲ್ಲಿ ಚರ್ಚಿಸಿದ್ದೇವೆ. ಇದು ನಮ್ಮ ಚುನಾವಣಾ ವ್ಯವಸ್ಥೆಯಲ್ಲಿ ತೀವ್ರ ಬದಲಾವಣೆಯನ್ನು ಮಾಡಿ ಒಂದು ಆನುಪಾತಿಕ ಪ್ರಾತಿನಿಧ್ಯದತ್ತ ಚಲಿಸಬೇಕಾದ ತುರ್ತನ್ನು ತೋರಿಸುತ್ತದೆ. ಬಹುಶಃ ಮೊದಲಿಗೆ, ಈಗ ಹಲವು ಪಾಶ್ಚಿಮಾತ್ಯ ಪ್ರಜಾಪ್ರಭುತ್ವಗಳಲ್ಲಿ ಆಚರಣೆಯಲ್ಲಿರುವ ಒಂದು 'ಭಾಗಶಃ ಆನುಪಾತಿಕ ಪ್ರಾತಿನಿಧ್ಯ'ದೊಂದಿಗೆ ಆರಂಭಿಸಬಹುದು.

ಈ ರಾಜ್ಯ ವಿಧಾನಸಭೆಗಳ ಫಲಿತಾಂಶಗಳು ನಮ್ಮ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸಿ, ಅದನ್ನು ನಿಜವಾಗಿಯೂ ಪ್ರಜಾಸತ್ತಾತ್ಮಕಗೊಳಿಸಲು, ಅಂದರೆ ಬಹುಮತದ ಆಳ್ವಿಕೆಯಾಗಿ ಮಾಡಲು ಇಂತಹ ಸುಧಾರಣೆಗಳನ್ನು ಆರಂಭಿಸುವ ತುರ್ತನ್ನು ಮತ್ತೊಮ್ಮೆ ಎತ್ತಿ ತೋರಿವೆ. ಬಹುಮತದ ಆಳ್ವಿಕೆಯ ಬದಲು ನಾವೀಗ ಸತತವಾಗಿ ಕೇಂದ್ರದಲ್ಲಿ ಮತ್ತು ಹಲವು ರಾಜ್ಯಗಳಲ್ಲಿ ತಮ್ಮ ಪರವಾಗಿ ಬಂದ ಮತಗಳಿಗಿಂತ ಹೆಚ್ಚಿಗೆ ವಿರುದ್ಧವಾದ ಮತಗಳನ್ನು ಪಡೆದ ಪಕ್ಷಗಳು/ಮೈತ್ರಿ ಕೂಟಗಳು ಸರಕಾರದ ಮೇಲೆ ಹತೋಟಿ ಹೊಂದಿರುವಂತಹ ಸನ್ನಿವೇಶವನ್ನು ಕಾಣುತ್ತಿದ್ದೇವೆ. ಪ್ರಜಾಪ್ರಭುತ್ವದ ಇಂತಹ ವಿರೂಪವನ್ನು ತುರ್ತಾಗಿ ಸರಿಪಡಿಸಬೇಕಾಗಿದೆ.

### ಟೊಳ್ಳು, ಬಾಲಿಶ ದಾವೆಗಳು

ಸನ್ನಿವೇಶ ಹೀಗಿರುವಾಗ, 'ಮೋದಿ ಅಲೆ' ಈಗ 'ಮೋದಿ ಸುನಾಮಿ' ಯಾಗಿ ಬಿಟ್ಟಿದೆ ಎಂದು ಬಿಜೆಪಿ ಮುಖಂಡರು ಹೇಳಿಕೊಳ್ಳುತ್ತಿರುವುದು ತುಸು ಟೊಳ್ಳಾಗಿ ಕಾಣುತ್ತದೆ. ನಿಜವಾಗಿಯೂ ಇದು ಸುನಾಮಿಯಾದರೆ ನಮ್ಮ ಸಾಮಾಜಿಕ ಸಾಮರಸ್ಯಕ್ಕೆ, ಐಕ್ಯತೆಗೆ ಮತ್ತು ಸಮಗ್ರತೆಗೆ ಇದು ಎಂತಹ ವಿನಾಶ ತರಬಹುದು ಎಂದು ಅರಿಯಲು ಕೂಡ ನಡುಕ ಉಂಟಾಗುತ್ತದೆ (ಈ ಬಗ್ಗೆ ಮುಂದೆ ನೋಡೋಣ).

ಅಲ್ಲದೆ, ಈ ಫಲಿತಾಂಶಗಳು ಲೋಕಸಭಾ ಚುನಾವಣೆಗಳ ನಂತರ ಬಿಜೆಪಿಗೆ ಒಂದು ಇಳಿಕೆಯನ್ನೂ ತೋರಿಸುತ್ತವೆ. ಲೋಕಸಭಾ ಚುನಾವಣೆಗಳಲ್ಲಿ ಒಟ್ಟಾಗಿ ಸ್ಪರ್ಧಿಸಿದ್ದ ಬಿಜೆಪಿ ಮತ್ತು ಶಿವಸೇನೆ ಅದರಲ್ಲಿ 288 ವಿಧಾನಸಭಾ ಕ್ಷೇತ್ರಗಳಲ್ಲಿ 245ರಲ್ಲಿ ಮುಂದಿದ್ದವು. ಈ ಬಾರಿ ಬಿಜೆಪಿ ಗೆದ್ದಿರುವುದು 123 ಮತ್ತು ಶಿವಸೇನೆ 63, ಅಂದರೆ ಒಟ್ಟು 186. ಅವರಿಬ್ಬರು ಒಟ್ಟಾಗಿ ಸ್ಪರ್ಧಿಸಿದ್ದರೆ ಹೆಚ್ಚು ಸೀಟುಗಳನ್ನು ಗೆಲ್ಲಬಹುದಾಗಿತ್ತು ಎಂಬುದು ಒಂದು ವಿವಾದಾತ್ಮಕ ಸಿದ್ಧಾಂತ. ಅದು ನಿಜವೆಂದು ಕೊಂಡರೂ ಈ ಇಳಿಕೆ ಗಮನಾರ್ಹ.

'ದಿ ಹಿಂದು"(ಅಕ್ಟೋಬರ್ 20, 2014) ಪ್ರಕಾರ "ಆದರೂ ಫಲಿತಾಂಶಗಳು ಹೇಳಿಕೊಳ್ಳುವಷ್ಟು ವ್ಯಾಪಕವೇನೂ ಆಗಿಲ್ಲ. ಮೋದಿಯವರು ಭಾರೀ ರ್‍ಯಾಲಿಗಳನ್ನು ನಡೆಸಿದ ಚುನಾವಣಾ ಕ್ಷೇತ್ರಗಳಲ್ಲೂ ಆ ಪಕ್ಷಕ್ಕೆ ಅವನ್ನು ಮತಗಳಾಗಿ ಪರಿವರ್ತಿಸಲು ಸಾಧ್ಯವಾಗಿಲ್ಲ. ಮೋದಿ ಒಂದು ರ್‍ಯಾಲಿ ನಡೆಸಿದ ಬ್ರಹ್ಮಪುರಿಯಲ್ಲಿ ಕಾಂಗ್ರೆಸ್ ಅದನ್ನು 14ಸಾವಿರ ಮತಗಳಿಂದ ಬಿಜೆಪಿಯಿಂದ ಕಿತ್ತುಕೊಂಡಿದೆ. ತುಳಜಾಪುರದಲ್ಲಿ ಕಾಂಗ್ರೆಸ್ ಮತ್ತು ಎನ್‌ಸಿಪಿ ತಲಾ ಹತ್ತಕ್ಕಿಂತ ಹೆಚ್ಚು ಮತಗಳನ್ನು ಪಡೆಯುವುದಿಲ್ಲ ಎಂದು ಮೋದಿ ಸಾರಿದ್ದರು. ಆದರೆ ಅಲ್ಲಿ ಕಾಂಗ್ರೆಸ್ ತನ್ನ ಸ್ಥಾನವನ್ನು ಸಾಕಷ್ಟು ಆರಾಮವಾಗಿಯೇ ಉಳಿಸಿಕೊಂಡಿದೆ. ಕಲ್ವಾನ್ ಕ್ಷೇತ್ರವನ್ನು ಸಿಪಿಐ(ಎಂ) ಆ ಸ್ಥಾನವನ್ನು ಎನ್‌ಸಿಪಿಯಿಂದ ಕಿತ್ತುಕೊಂಡಿದೆ. ಎನ್‌ಸಿಪಿ 67,795 ಮತಗಳನ್ನು ಪಡೆದರೆ ಬಿಜೆಪಿ 25,457 ಮತಗಳನ್ನು ಪಡೆದಿದೆ.

ದೇಶದಲ್ಲಿ ಬಿಜೆಪಿಗೆ ಬೆಂಬಲ ಬೆಳೆಯುತ್ತಿದೆ ಎಂಬ ದಾವೆಯನ್ನು, ಅದು ಮಹಾರಾಷ್ಟ್ರದಲ್ಲಿ ಸರಕಾರವನ್ನು ರಚಿಸಬೇಕಾದರೆ ಬೇರೆ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳಲೇ ಬೇಕಾಗಿದೆ ಎಂಬ ಸಂಗತಿಯನ್ನು ಗಮನದಲ್ಲಿಟ್ಟುಕೊಂಡು ನೋಡಬೇಕಾಗಿದೆ. ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರದಲ್ಲಿ ಹತ್ತು ವರ್ಷಗಳ ಕಾಲ 'ಉತ್ಕೃಷ್ಟ' ಮಂತ್ರಾಲಯಗಳನ್ನು ಪಡೆದು ಅಧಿಕಾರ ಹಂಚಿಕೊಂಡಿದ್ದ ಎನ್‌ಸಿಪಿ 'ಶುದ್ಧಾಂಗ'( ಬೇಷರತ್ ಆಗಿರಲಿಕ್ಕಿಲ್ಲವಾದ) ಬಾಹ್ಯ ಬೆಂಬಲವನ್ನು ಕೊಡುವುದಾಗಿ ಹೇಳಿದೆ.

ಈ ಸಂಚಿಕೆ ಮುದ್ರಣಕ್ಕೆ ಹೋಗುತ್ತಿರುವ ವೇಳೆಗೆ, ದೇಶದಲ್ಲಿ ಬಿಜೆಪಿಯ ಬಹಳ ದೀರ್ಘಕಾಲದ ಮಿತ್ರನಾಗಿರುವ, ಮತ್ತು ತಾನು 'ಹಿಂದುತ್ವ'ಕ್ಕೆ ಇನ್ನೂ ಹೆಚ್ಚು ಬದ್ಧನಾಗಿದ್ದೇನೆ ಎಂದು ಹೇಳಿಕೊಳ್ಳುವ ಶಿವಸೇನೆ ಮತ್ತೊಮ್ಮೆ ಸರಕಾರದಲ್ಲಿ ಅಧಿಕಾರ ಹಂಚಿಕೊಳ್ಳುವ ಚೌಕಾಸಿ ನಡೆಸುತ್ತಿದೆ. ಈ ವ್ಯವಹಾರದ ಸಂಪೂರ್ಣ 'ಸತ್ಯ' ಸಾರ್ವಜನಿಕವಾಗಿ ಗೊತ್ತಾಗುತ್ತದೋ ಇಲ್ಲವೋ, ಇದು ಸಂಭವಿಸಿದರೆ ಆಶ್ಚರ್ಯವೇನೂ ಪಡಬೇಕಾಗಿಲ್ಲ.


ಇಂತಹ ಸನ್ನಿವೇಶದಲ್ಲಿ ಸಮ್ಮಿಶ್ರ ಸರಕಾರಗಳ ಯುಗ ಮುಗಿದಿದೆ ಎನ್ನುವ ಬಿಜೆಪಿ ಮುಖಂಡರ ದಾವೆಗಳು ಭೋಳೆಯಾಗಿ ಕಾಣಿಸುತ್ತವೆ. ಲೋಕಸಭಾ ಚುನಾವಣೆಗಳ ನಂತರ ಸಮ್ಮಿಶ್ರ ಸರಕಾರಗಳ ಸಮಯ ಈಗ ಮುಗಿದಿದೆ, ಇದೀಗ ಒಂದು ಸಮರ್ಥ ವಿರೋಧವನ್ನು ಕಲೆ ಹಾಕಲು ಮೈತ್ರಿಕೂಟ ಏರ್ಪಡಿಸಿಕೊಳ್ಳಬೇಕಾಗಿ ಬಂದಿದೆ ಎಂದು ಹೇಳಿರುವುದುದಾಗಿ ಮೋದಿ ಖ್ಯಾತರಾಗಿದ್ದಾರೆ. ಆದರೆ ಬಿಜೆಪಿ ಇಂದು ಮಹಾರಾಷ್ಟ್ರದಲ್ಲಿ ಒಂದು ಸಮ್ಮಿಶ್ರ ಸರಕಾರವನ್ನು ರಚಿಸದಿರಲು ಸಾಧ್ಯವಿಲ್ಲ. ನಿಜ, ಸ್ವಂತ ಬಹುಮತ ಕೂಡಿಸಿಕೊಳ್ಳಲು 'ಕುದು–ರೆ ವ್ಯಾಪಾರ'ದ ಅತೀ ತುಚ್ಛ ಸ್ವರೂಪಕ್ಕೆ ಶರಣಾಗದಿದ್ದರೆ ಅದು ಒಂದು ಸಮ್ಮಿಶ್ರ ಸರಕಾರ ರಚನೆ ಮಾಡದಿರಲು ಸಾಧ್ಯವಿಲ್ಲ.

### ನಿಜಕ್ಕೂ ಸುನಾಮಿಯಾದರೆ....

'ಮೋದಿ ಸುನಾಮಿ' ನಮ್ಮ ಸಮ್ಮಿಶ್ರ ಸಾಮಾಜಿಕ ವ್ಯವಸ್ಥೆಗೆ ಎಂತಹ ಭಾರೀ ವಿನಾಶ ತರಬಹುದು, ಎಂಬುದರ ಒಂದು ಸೂಚನೆ, ಅದರ ಗುರುವಾದ ಆರೆಸ್ಸೆಸ್‌ನಿಂದಲೇ ಬಂದಿದೆ. ಆರೆಸ್ಸೆಸ್‌ನ ರಾಷ್ಟ್ರೀಯ ಮಂಡಳಿಯ ಮೂರು ದಿನಗಳ ಸಭೆಯ ನಂತರ ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡುತ್ತ ಅದರ ವಕ್ತಾರರು ಮತ್ತೊಮ್ಮೆ, 'ಹಿಂದೂ ಸಮಾಜ ಲವ್ ಜಿಹಾದ್‌ನ ನಾಚಿಕೆಯನ್ನು' ಎದುರಿಸುತ್ತಿದೆ ಎಂದು, ಮಾಧ್ಯಮಗಳಲ್ಲಿ ತದ್ವಿರುದ್ಧವಾದ ಸಾಕ್ಷ್ಯಗಳು ಪ್ರಕಟವಾಗಿದ್ದರೂ ಕೂಡ ಹೇಳಿದ್ದಾರೆ. ಬಿಜೆಪಿಯ ಚುನಾವಣಾ ಪ್ರಣಾಳಿಕೆಯನ್ನು ಪ್ರಸ್ತಾಪಿಸುತ್ತ ಅಯೋಧ್ಯೆಯಲ್ಲಿ ರಾಮದೇವಸ್ಥಾನ ಕಟ್ಟಲು ಇರುವ ಎಲ್ಲ ಅಡಚಣೆಗಳನ್ನು ಸರಕಾರ ನಿವಾರಿಸುತ್ತದೆ ಎಂದು ದಾವೆ ಮಾಡಿದ್ದಾರೆ. ಕೋಮುವಾದದ ಆಪಾದನೆಗಳನ್ನೆಲ್ಲ ಬದಿಗೊತ್ತುತ್ತ, "ಹಾಗಿದ್ದರೆ ಆರೆಸ್ಸೆಸ್‌ಗೆ ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳ ಸಾಧ್ಯವಿರುತ್ತಿರಲಿಲ್ಲ." ಎಂದಿದ್ದಾರೆ( ದಿ ಹಿಂದು, ಅಕ್ಟೋಬರ್21, 2014).

ಸತ್ಯಸಂಗತಿಯೆಂದರೆ, ಆರೆಸ್ಸೆಸ್‌ಗೆ ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳಲು ಸಾಧ್ಯವಾಗಿರುವುದೇ ದೇಶದಲ್ಲಿ ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಮೂಲಕ. ಹೀಗೆ ಅದು ಕೋಮುಧ್ರುವೀಕರಣವನ್ನು ತೀಕ್ಷ್ಣಗೊಳಿಸಿ ಹಿಂದೂ ಮತಗಳನ್ನು ಕ್ರೋಡೀಕರಿಸುವ ಅತ್ಯಂತ ಕೆಟ್ಟ 'ವೋಟ್ ಬ್ಯಾಂಕ್ ರಾಜಕೀಯ'ವನ್ನು ಆಚರಿಸುವದರ ಚುನಾವಣಾ ಫಲಗಳನ್ನು ತನ್ನ ರಾಜಕೀಯ ಅಂಗವಾದ ಬಿಜೆಪಿ ಗಿಟ್ಟಿಸುವಂತೆ ಅನುವು ಮಾಡಿ ಕೊಟ್ಟಿದೆ. ಇದನ್ನು ಪ್ರತಿರೋಧಿಸದಿದ್ದರೆ, ಘಂಟಾಘೋಷವಾಗಿ ಮೂಲೆಗುಂಪು ಮಾಡದಿದ್ದರೆ ನಮ್ಮ ಶ್ರೀಮಂತ ಸಾಮಾಜಿಕ–ಸಾಂಸ್ಕೃತಿಕ–ಧಾರ್ಮಿಕ–ಭಾಷಿಕ ವೈವಿಧ್ಯತೆಯ ಸಮಾಜದ ಐಕ್ಯತೆ ಮತ್ತು ಸಾಮರಸ್ಯಕ್ಕೆ ಗಂಭೀರ ಬೆದರಿಕೆ ಬರುತ್ತದೆ. ಆದ್ದರಿಂದ ಭಾರತೀಯ ಜನತೆ ನಮ್ಮ ಗಣ–ತಂತ್ರದ ಜಾತ್ಯಾತೀತ ಪ್ರಜಾಸತ್ತಾತ್ಮಕ ಬುನಾದಿಯ ಮೇಲಿನ ಈ ದಾಳಿಗಳನ್ನು ಐಕ್ಯತೆಯಿಂದ ಪ್ರತಿರೋಧಿಸಬೇಕಾಗಿದೆ.

**ಈ ವೇಳೆಗಾಗಲೇ ಬಿಜೆಪಿ ಒಂದು ಬಹುಧ್ರುವೀಯ ಚುನಾವಣಾ ಸ್ಪರ್ಧೆಯಲ್ಲಿ ಮೂರನೇ ಒಂದು ಭಾಗ ಅಥವ ಅದಕ್ಕಿಂತಲೂ ಕಡಿಮೆ ಜನಬೆಂಬಲದೊಂದಿಗೆ ಬಹುಮತ ಪಡೆದುಕೊಳ್ಳುವ ಕಲೆಯನ್ನು ಕರಗತ ಮಾಡಿ ಕೊಂಡಂತೆ ಕಾಣುತ್ತದೆ. ಮಹಾರಾಷ್ಟ್ರದಲ್ಲಿ ಅದು ಕೇವಲ 29ಶೇ. ಮತ ಪಡೆದು 123 ಸ್ಥಾನಗಳನ್ನು ಗೆದ್ದುಕೊಂಡಿದೆ. ಕಾಂಗ್ರೆಸ್ 18ಶೇ. ಮತಗಳಿಸಿ 42 ಸ್ಥಾನಗಳನ್ನೂ, ಎನ್‌ಸಿಪಿ 17ಶೇ. ಮತಗಳಿಸಿ 41 ಸ್ಥಾನಗಳನ್ನೂ ಪಡೆದಿವೆ. ಹರ್ಯಾಣದಲ್ಲಿ ಬಿಜೆಪಿ 33ಶೇ. ಮತ ಪಡೆದು 90ರಲ್ಲಿ 47 ಸ್ಥಾನಗಳನ್ನು ಗೆದ್ದಿದೆ.**


ಚುನಾವಣಾ ಲೆಕ್ಕಾಚಾರದಲ್ಲಿ ನಂಬರ್ ಒನ್– ವ್ಯಂಗ್ಯ ಚಿತ್ರ: ಕೇಶವ್, ದಿ ಹಿಂದು


ಮಹಾರಾಷ್ಟ್ರ – ಸಿಪಿಐ(ಎಂ)ನ ಜೆ.ಪಿ. ಗವಿತ್, ಕಲ್ವಾನ್ ಕ್ಷೇತ್ರದ ವಿಜೇತ ಅಭ್ಯರ್ಥಿ

# ಪಶ್ಚಿಮ ಬಂಗಾಳ:
# ಬಾಂಬ್ ಸ್ಫೋಟಗಳು ಮತ್ತು ತೃಣಮೂಲ ಸಂಪರ್ಕಗಳ ಅನಾವರಣ

ಅಕ್ಟೋಬರ್ 2, 2014 ರಂದು ಪಶ್ಚಿಮ ಬಂಗಾಳದ ಬರ್ಧಮಾನ್ ನಗರದ ಬಳಿ ಇರುವ ಖಗ್ರಾಘರ್‌ನಲ್ಲಿ ಪ್ರಬಲ ಬಾಂಬ್ ಸ್ಫೋಟವಾಯಿತು. ಸ್ಫೋಟದಿಂದಾಗಿ ಇಬ್ಬರು ವ್ಯಕ್ತಿಗಳು ಮೃತಪಟ್ಟರು. ಅವರ ದೇಹಗಳು ಚೂರು ಚೂರಾಗಿದ್ದವು. (ನಂತರದ ಶೋಧನೆಯಲ್ಲಿ ಅಲ್ಲಿ ದೊಡ್ಡ ಪ್ರಮಾಣದಲ್ಲಿ ಬಾಂಬುಗಳು/ ಸ್ಫೋಟಕಗಳು ಪತ್ತೆಯಾದವು. ಬಾಂಬ್ ನಿಷ್ಕ್ರಿಯ ದಳವು ಅವುಗಳನ್ನು ಸುರಕ್ಷಿತವಾಗಿ ಸ್ಫೋಟಿಸಿ ಅಪಾಯ ತಪ್ಪಿಸಿತು.) ಬಹಿಷ್ಕೃತ ಮುಸ್ಲಿಂ ಮೂಲಭೂತವಾದಿ ಸಂಘಟನೆಯೊಂದರ ಕರಪತ್ರಗಳು ಇಲ್ಲಿ ಕಂಡು ಬಂದವು. ಈ ಬೆಳವಣಿಗೆ ಪಶ್ಚಿಮ ಬಂಗಾಳ ಮತ್ತು ಇಡೀ ದೇಶಕ್ಕೆ ಆತಂಕಕಾರಿಯಾದ ಬೆಳವಣಿಗೆ.



ತೃಣಮೂಲ ಕಾಂಗ್ರೆಸ್ಸಿನ ಕಚೇರಿ ಈ ಕಟ್ಟಡದ ನೆಲಮಹಡಿಯಲ್ಲಿದ್ದು ಅದರ ನಾಮಫಲಕವನ್ನು ಸ್ಫೋಟದ ನಂತರ ತೆಗೆದು ಮುಚ್ಚುವ ತರಾತುರಿ ಕಂಡುಬಂತು. ತೃಣಮೂಲ ಕಾಂಗ್ರೆಸ್ಸಿನ ನಾಯಕರು, ಕಟ್ಟಡದ ಮಾಲೀಕ ಮತ್ತು ಅಪರಾಧಿಗಳ ನಡುವೆ ನಿಕಟ ಸಂಬಂಧಗಳ ಬಗೆಗೆ ಈಗ ಸಾಕಷ್ಟು ಆತಂಕಕಾರಿ ಮಾಹಿತಿಗಳು ಹೊರಬರುತ್ತಿವೆ. ಸ್ಫೋಟದ ಕಟ್ಟಡವನ್ನು ಪ್ರವೇಶಿಸಲು ಯಾರಿಗೂ ತತ್‌ಕ್ಷಣ ಅವಕಾಶವನ್ನು ಕೊಡಲಿಲ್ಲ. ಜನರ ಪ್ರವೇಶವನ್ನು ತಡೆಯಲಾಗಿತ್ತು. ಅಲ್ಲಿ ನಂತರ ಕಂಡು ಬಂದದ್ದೇನೆಂದರೆ ಹಲವು ಕರಪತ್ರಗಳನ್ನು ದಾಖಲೆಗಳನ್ನು ಸುಡಲಾಗಿತ್ತು. ಅವು ಪೂರ್ಣವಾಗಿ ಸುಟ್ಟಿಲ್ಲವಾದ್ದರಿಂದ ಅವು ಮುಸ್ಲಿಂ ಮೂಲಭೂತವಾದಿ ಸಂಘಟನೆಗಳ ಕರಪತ್ರಗಳು ಮತ್ತು ದಾಖಲೆಗಳು ಎಂಬುದು ಗೊತ್ತಾಗಿದೆ. ಸುಡಲು ಸಾಧ್ಯವಾಗದ ಸಿಮ್ ಕಾರ್ಡ್ ಅನ್ನು ಇಲ್ಲಿ ವಶಪಡಿಸಿಕೊಳ್ಳಲಾಗಿದ್ದು ಅದರಲ್ಲಿನ ವಿವರಗಳು ವಿಷಯ ಎಷ್ಟು ಗಂಭೀರ ಎಂದು ಹೇಳುತ್ತಿವೆ. 'ಇಂಡಿಯನ್ ಮುಜಾಹಿದ್ದೀನ್'ಗಳ ಬಳಿ ಸಹ ಇಲ್ಲದ ಆತ್ಯಂತ ಆಧುನಿಕವಾದ ಮತ್ತು ಅಪಾಯಕಾರಿಯಾದ ಸ್ಫೋಟಕಗಳು ಮತ್ತು ಆಯುಧಗಳು ಮತ್ತು ಸ್ಫೋಟಗಳಲ್ಲಿ ಬಳಸುವ ತಾಂತ್ರಿಕ ನಕ್ಷೆ ಇತ್ಯಾದಿಗಳು ಸಿಕ್ಕಿವೆ.

ಆದರೆ ಮಮತಾ ಬ್ಯಾನರ್ಜಿ ಸರಕಾರ ಮೊದಲಿಗೆ ಇದೊಂದು ನಿರ್ಲಕ್ಷಿಸಬಹುದಾದ ಸಣ್ಣ ಅನಿಲ ಸಿಲಿಂಡರ್ ಸ್ಫೋಟದ ಅಪಘಾತ ಎಂದು ಬಿಂಬಸಲು ಪ್ರಯತ್ನ ಪಟ್ಟಿತು. ಮಮತಾ ಸರಕಾರದ ಸೂಚನೆಯಂತೆ ತೃಣಮೂಲ ಮತ್ತು ಮುಸ್ಲಿಂ ಮೂಲಭೂತವಾದಿ ಸಂಘಟನೆಗಳ ಸಂಪರ್ಕಗಳ ಬಗೆಗೆ ಸಿಗಬಹುದಾದ ಎಲ್ಲ ಸಾಕ್ಷ್ಯಗಳನ್ನು ನಾಶ ಮಾಡುವುದು ಸ್ಥಳಕ್ಕೆ ಜನರ ಪ್ರವೇಶವನ್ನು ತಡೆಯುವ ಮತ್ತು ಅದನ್ನು ವಿಳಂಬ ಮಾಡುವುದರ ಕಾರಣವಾಗಿತ್ತು. 'ರಾಷ್ಟ್ರೀಯ ತನಿಖಾ ಸಂಸ್ಥೆ– ಎನ್‌ಐಎ'ಯಿಂದ ಘಟನೆಯ ತನಿಖೆಗೆ ನಡೆಸಬೇಕೆಂಬುದಕ್ಕೂ ಮಮತಾ ಸರಕಾರ ಸಮ್ಮತಿಸಲಿಲ್ಲ. ಸ್ಫೋಟ–ಕ್ಕೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವ ಇರುವ ಕಾರಣದಿಂದ ಎನ್‌ಐಎ ತಾನೇ ಸ್ವಯಂ ತನಿಖೆಗೆ ಮುಂದಾಗಿದೆ. ಆದರೆ ಎನ್‌ಐಎ ತನಿಖೆಗೆ ತೃಣಮೂಲ ಸರಕಾರ ಸಹಕಾರ ಕೊಡುತ್ತಿಲ್ಲ, ಬದಲಿಗೆ ತಡೆ ಒಡ್ಡಲು ಪ್ರಯತ್ನಿಸುತ್ತಿದೆ ಎಂಬುದನ್ನೂ ರಾಜ್ಯದ ಜನ ನೋಡುವಂತಾಯಿತು.




ಸ್ಫೋಟ ಸಾಮಾನ್ಯವಾದದ್ದಲ್ಲ. ಸ್ಫೋಟದ ರೂವಾರಿಗಳು, ಪಶ್ಚಿಮ ಬಂಗಾಳ ಅಲ್ಲದೇ ಉತ್ತರ ಪ್ರದೇಶ, ತಮಿಳುನಾಡು, ಮಹಾರಾಷ್ಟ್ರದ ಮುಂಬೈ ಮುಂತಾದ ಹಲವೆಡೆ ಸ್ಫೋಟದ ಸಂಚುಗಳನ್ನು ನಡೆಸಿದ್ದಾರೆಂಬುದು ತಿಳಿದುಬಂದಿದೆ. ಈ ಭಯೋತ್ಪಾದಕರ ಸಂಪರ್ಕಗಳು ಹಲವಾರು ದೇಶಗಳ ನಡುವೆ ಹರಡಿರುವುದು ಸಹ ಕಂಡು ಬರುತ್ತಿದೆ. ಹಾಗಾಗಿ ದೇಶದ ಭದ್ರತೆ ಸಂಬಂಧಿಸಿದಂತಹ ಗಂಭೀರ ಪ್ರಶ್ನೆಯಲ್ಲಿ ಸಹ ತೃಣಮೂಲ ಸರಕಾರ ತನ್ನ ಸಂಕುಚಿತ ರಾಜಕೀಯವನ್ನು ಬಿಡಲು ತಯಾರಾಗಲಿಲ್ಲ. ಶಾರದಾ ಚಿಟ್ ಫಂಡ್ ಹಗರಣದಲ್ಲಿ ಸಿಬಿಐ ತನಿಖೆ ವಿರುದ್ಧ ವಾದ ಮಾಡಿದಂತೆ ಈ ವಿಷಯದಲ್ಲೂ ಮೊಂಡುವಾದ ಮುಂದಿಟ್ಟಿತು. ಶಾರದಾ ಪ್ರಕರಣ ಸೇರಿದಂತೆ ಹಲವಾರು ಪ್ರಕರಣಗಳಲ್ಲಿ ಆದಂತೆ ತೃಣಮೂಲಕ್ಕೆ ಈ ವಿಷಯದಲ್ಲಿಯೂ ಮುಖಭಂಗವಾಯಿತು.

ಈಗ ನಂತರದ ಹಂತದಲ್ಲಿ ವರದಿಯಾದಂತೆ ಪಶ್ಚಿಮ ಬಂಗಾಳ ಪೊಲೀಸ್ ಮೂಲಗಳ ಪ್ರಕಾರವೇ ಬಂಗಾಳದ ಆಳುವ ಪಕ್ಷದ ಸ್ಥಳೀಯ ನಾಯಕರು ಜಿಹಾದಿಗಳೊಡನೆ ದೊಡ್ಡ ಪ್ರಮಾಣದಲ್ಲಿ ಹಣಕಾಸು ವಿನಿಮಯದಲ್ಲಿ ತೊಡಗಿದ್ದಾರೆ. ಅಲ್ಲದೆ ತೃಣಮೂಲ ಕಾಂಗ್ರೆಸ್‌ನ 'ಸುರಕ್ಷ ಮನೆ'ಗಳಲ್ಲಿ ಜಿಹಾದಿಗಳಿಗೆ ಆಶ್ರಯ ಸಿಗುತ್ತಿದೆ. ಇದಲ್ಲದೆ ಜಿಹಾದಿಗಳನ್ನು ಎಡರಂಗದ ಕಾರ್ಯಕರ್ತರನ್ನು ಚುನಾವಣಾ ಸಮಯದಲ್ಲಿ ಕೊಲೆ ಮಾಡಲು 2011 ರಿಂದಲೂ ಬಳಸಿಕೊಳ್ಳಲಾಗುತ್ತಿದೆ. 'ಸಿಮಿ'ಯ ಸಂಸ್ಥಾಪಕ ಸದಸ್ಯರೊಬ್ಬರು ಈಗ ತೃಣಮೂಲದ ರಾಜ್ಯ ಸಭಾ ಸದಸ್ಯರಾಗಿದ್ದಾರೆ. ಅವರು ಜಿಹಾದಿಗಳಿಗೆ ಇಂತಹ ಕಾರ್ಯಗಳಿಗೆ ಹಣಕಾಸು ಒದಗಿಸಿದವರು.

ಅಮೆರಿಕದ ರಾಜ್ಯ ಕಾರ್ಯದರ್ಶಿ ಹಿಲೆರಿ ಕ್ಲಿಂಟನ್ 2011 ರಲ್ಲೇ ಮಮತಾ ಬ್ಯಾನರ್ಜಿ ಅವರಿಗೆ ಬಂಗಾಳ ಬಾಂಗ್ಲಾದೇಶದ ಜಿಹಾದಿ ಗುಂಪುಗಳಿಗೆ ಸುರಕ್ಷಿತ 'ಸ್ವರ್ಗ'ವಾಗುತ್ತಿರುವುದನ್ನು ಹೇಳಿ ಎಚ್ಚರಿಸಿದ್ದರು. ಹಿಂದೆ ಎಡರಂಗ ಸರ್ಕಾರವೂ ಸಹ ಅನೇಕ ಮದ್ರಸಾಗಳು ಅಪಾರ ಶಸ್ತ್ರಾಸ್ತ್ರಗಳೊಂದಿಗೆ ಆತಂಕವಾದದ ಕೇಂದ್ರಗಳಾಗುತ್ತಿರುವುದರ ಬಗ್ಗೆ ಎಚ್ಚರಿಸಿತ್ತು.

ಬಾಂಗ್ಲಾದೇಶದ ಶೇಕ್ ಹಸೀನಾ ಅವರ ಸರ್ಕಾರ ಮುಸ್ಲಿಂ ಆತಂಕವಾದಿಗಳು ಬರ್ಧ್ವಾನ್, ನಾದಿಯಾ ಮತ್ತು ಮುರ್ಷಿದಾಬಾದ್‌ಗಳಲ್ಲಿ ತಮ್ಮ ನೆಲೆಗಳನ್ನು ಬೆಳೆಸುತ್ತಿರುವುದರ ಬಗೆಗೆ ಎಚ್ಚರಿಸುತ್ತಲೇ ಬಂದಿತ್ತು. ತದ ನಂತರದಲ್ಲಿ ಬಾಂಗ್ಲಾದೇಶದ ಸರ್ಕಾರ ಕೋಲ್ಕೊತ್ತದ ಸುತ್ತ ಮುತ್ತಲಿನ ಪ್ರದೇಶಗಳೂ ಜಿಹಾದಿ ಗುಂಪುಗಳಿಗೆ ತಾಣವಾಗುತ್ತಿರುವುದರ ಎಚ್ಚರ ನೀಡಿತ್ತು. ಈ ಎಚ್ಚರವನ್ನು ನಿರಂತರವಾಗಿ ಕಡೆಗಣಿಸುತ್ತಲೇ ಬರಲಾಗಿದೆ.

ಅಕ್ಟೋಬರ್ 9 ರಂದು ಕೇಂದ್ರ ಗೃಹ ಸಚಿವಾಲಯದ ನಿರ್ದೇಶನದ ಪ್ರಕಾರ 'ರಾಷ್ಟ್ರೀಯ ತನಿಖಾ ಸಂಸ್ಥೆ' ಈ ಘಟನೆಗಳ ತನಿಖೆಯನ್ನು ಕೈಗೆತ್ತಿಕೊಂಡಿದೆ. ಇದಕ್ಕೆ ಸಂಬಂಧಪಟ್ಟ ಕಾಗದಗಳನ್ನು ಅದು ತನ್ನ ವಶಕ್ಕೆ ತೆಗೆದುಕೊಂಡಿದೆ. ಅಲ್ಲದೆ ಅಸ್ಸಾಮಿನ ಬಾರಪೇಟಾದಲ್ಲಿ ದೂರನ್ನು ದಾಖಲಿಸಲಾಗಿದೆ.

ರಾಷ್ಟ್ರೀಯ ತನಿಖಾ ಸಂಸ್ಥೆಯ ಐಜಿ ಮಟ್ಟದ ಪ್ರಯತ್ನಗಳಿಗೂ ಮಮತಾ ಸರಕಾರ ಕಿವುಡುತನ ತೋರುತ್ತಿದೆ ಎಂಬುದು ಅಪಾಯದ ಸೂಚನೆಯಾಗಿ ಕಾಣುತ್ತಿದೆ.

ಭಯೋತ್ಪಾದನಾ ವಿರೋಧಿ ತಂಡ ಮುಷ್ಠಿಯಲ್ಲಿ ಮಾಲ್ಡಾದ ಇಂಗ್ಲೀಷ್ ಬಜಾರ್‌ಗೆ ಹೋಗಿ ಮೂವರು 'ಸಿಮಿ' ಸದಸ್ಯರನ್ನು ವಶಕ್ಕೆ ತೆಗೆದು–ಕೊಂಡಿದೆ. ಇವರಲ್ಲಿ ಇಬ್ಬರು ಹಸುಗೂಸುಗಳಿರುವ ಮಹಿಳೆಯರು. ಬಂಗಾಳದ ಜಿಹಾದಿ ಸೆಲ್ ಗಳು ಜನರ ಭಾವನೆಗಳನ್ನು ಉಪಯೋಗಿಸಿಕೊಳ್ಳುತ್ತಿವೆ. ಈಗ ದಿವಾಳಿಯಾಗಿರುವ ಕುಖ್ಯಾತ ಚಿಟ್ ಫಂಡ್ ಸಂಸ್ಥೆ 'ಶಾರದಾ' ಮತ್ತು 'ಜಮಾತ್ ಉಲ್ ಮುಜಾಹೀದೀನ್, ಬಾಂಗ್ಲಾದೇಶ್' ನಡುವೆ ಸಂಬಂಧ ಇರುವುದು ಬೆಳಕಿಗೆ ಬಂದಿದೆ.

ರಾಷ್ಟ್ರೀಯ ತನಿಖಾ ಸಂಸ್ಥೆ ಬಂಗಾಳದ ಹೊರಗೆ ಮಾಡಿದ ತನಿಖೆಗಳಿಂದ ಜಿಹಾದಿಗಳು ಹಲವು ಸೆಲ್‌ಗಳನ್ನು ಬಾರಪೇಟ ಮತ್ತು ಧೂಬ್ರಿಗಳಲ್ಲಿ ಸ್ಥಾಪಿಸಿರುವುದು ಬೆಳಕಿಗೆ ಬಂದಿದೆ. ಇವರಿಗೆ ಪ್ರಾಯೋಜಕತ್ವ, ಮತ್ತು ಮಾರ್ಗಸೂಚಿಗಳನ್ನು 'ಜಮಾತ್ ಉಲ್ ಮುಜಾಹೀದೀನ್–ಬಾಂಗ್ಲಾದೇಶ್' ನೀಡಿದೆ. ಬಂಗಾಳದ ಸರ್ಕಾರದ ನಡವಳಿಕೆಗೆ ವ್ಯತಿರಿಕ್ತವಾಗಿ ಅಸ್ಸಾಮಿನ ರಾಜ್ಯ ಸರ್ಕಾರ ತನಿಖೆಗೆ ಸಹಕಾರ ನೀಡುತ್ತಿದೆ. ಆಸ್ಸಾಂ ಸರಕಾರದ ಗೃಹ ಇಲಾಖೆಯ ಪ್ರಕಾರ ಮೃತ ಬಾಂಬ್ ತಯಾರಕ ಶಕೀಲ್ ಜಿಹಾದಿಗಳನ್ನು ಆಯ್ಕೆ ಮಾಡಿಕೊಳ್ಳಲು ಮತ್ತು ಬಾಂಬ್ ತಯಾರಿಸುವ ಪರಿಣತಿ ನೀಡಲು ಬಾರಪೇಟ ಮತ್ತು ಧೂಬ್ರಿಗಳಿಗೆ ಲೆಕ್ಕವಿಲ್ಲದಷ್ಟು ಬಾರಿ ಬಂದು ಹೋಗಿದ್ದಾನೆ.




ಇದಲ್ಲದೆ ಆಸ್ಸಾಮಿನ ಡಾಕ್ಟರನೊಬ್ಬ ಈ ಎಲ್ಲ ಕಾರ್ಯಗಳಿಗೆ ಹಣಕಾಸು ಮೂಲ ಮತ್ತು ವಾಹಕವಾಗಿ ಕೆಲಸ ಮಾಡಿದ್ದಾನೆ. ಈ ಹಣ ಬಾಂಗ್ಲಾದೇಶದ ಸಿಲ್ಹೆಟ್, ಉತ್ತರ ಬಂಗಾಳ, ಮಾಲ್ಡಾ, ಬೆಹ್ರಂಪೋರ, ಬೆಲ್ಡಂಗ ಬರ್ಧ್ವಾನ್‌ಗಳ ಮೂಲಕ ಬಹಳ ಸಂಕೀರ್ಣ ಮಾರ್ಗದಲ್ಲಿ ಪಯಣಿಸಿ ಜಿಹಾದಿಗಳ ಕೈ ಸೇರಿದೆ.

ಪುಟ 10 ಕ್ಕೆ

## ಸಿಪಿಐ(ಎಂ) 21 ನೇ ರಾಜ್ಯ ಸಮ್ಮೇಳನದ ಲಾಂಛನ



## ಈ ವಾರ ....

ಪುಟ 3 ರಿಂದ

ಈ ಪ್ರಕರಣ ಸಿಬಿಐ ಗೆ ವಹಿಸುವ ಮೊದಲೇ ಲಭ್ಯವಿದ್ದ ಬಹುತೇಕ ಎಲ್ಲಾ ಸಾಕ್ಷಿಗಳನ್ನು ನಾಶಪಡಿಸಲಾಗಿದೆ. ಉದಾಹರಣೆಗೆ ಈ ಪ್ರಕರಣದಲ್ಲಿನ ಆರೋಪಿ ಧೀರಜ್ ಜೈನ್ ಎಂಬಾತನ ಮನೆಯ ಕೆಲಸ ಮಾಡುತ್ತಿದ್ದ ವಾರಿಜಾ ಆಚಾರ್ತಿ (55) 'ಆತ್ಮಹತ್ಯೆ' ಮಾಡಿಕೊಂಡಳು! ಎಂದು ಹೇಳಲಾಯಿತು. ಈಕೆಗೆ ಈ ಪ್ರಕರಣದ ಪ್ರಮುಖ ಮಾಹಿತಿಗಳಿದ್ದು ಮುಖ್ಯ ಸಾಕ್ಷಿಯಾಗಿದ್ದಳು. ಹಾಗೆಯೇ ಈಗ ಬಂಧಿಸಲಾದ ಮಾನಸಿಕ ಅಸ್ವಸ್ತ ಸಂತೋಷ್‌ರಾವ್‌ನನ್ನು ಹಿಡಿದು ಕೊಟ್ಟವನೆಂದು ಹೇಳಲಾದ ರವಿ ಪೂಜಾರಿಯೂ ಒಬ್ಬ ಮುಖ್ಯ ಸಾಕ್ಷಿ, ಆತನೂ ಕೂಡ 'ಆತ್ಮಹತ್ಯೆ' ಮಾಡಿಕೊಂಡನಂತೆ! ಇನ್ನು ಹತ್ಯೆಗೀಡಾದ ಸೌಜನ್ಯಳ ಪೋಸ್ಟ್‌ಮಾರ್ಟಂ ವರದಿಯಲ್ಲೂ ಹಲವು ಅಂಶಗಳು ಮರೆಯಾಗಿವೆ. ಅಂದರೆ ಬಹುತೇಕ ಸಾಕ್ಷಿ ಆಧಾರಗಳು ಇಲ್ಲವಾದ ಬಳಿಕ ಹಿಡಿಯುವುದು ಯಾರನ್ನು? ಶಿಕ್ಷಿಸುವುದೂ ಯಾರನ್ನು? ತಡೆಯುವುದು ಏನನ್ನು?

ಈಗ ಬಂಧಿತನಾಗಿರುವ ಆರೋಪಿ ಸಂತೋಷ್‌ರಾವ್ ಮಾನಸಿಕ ಅಸ್ವಸ್ಥ, ಮೇಲಾಗಿ ಲೈಂಗಿಕ ನ್ಯೂನತೆಗಳಿರುವ ಅಸಮರ್ಥ ಎಂದು ವರದಿ ಬಂದಿವೆ. ಹೀಗಾಗಿ ಖಂಡಿತಕ್ಕೂ ನಿಜ ಆರೋಪಿಗಳು ಬೇರೆಯೇ ಇರುವುದರಲ್ಲಿ ಅನುಮಾನವಿಲ್ಲ.

ಮೇಲಾಗಿ ಈ ವಿಷಯದಲ್ಲಿ ಇನ್ನೂ ಕೆಲವು ಆಟಗಳೂ ನಡೆದಿವೆ. ಸೌಜನ್ಯ ಪ್ರಕರಣವನ್ನು ಬೇಧಿಸುವಂತೆ ಒತ್ತಾಯಿಸಿ ಪ್ರಗತಿಪರ ಸಂಘಟನೆಗಳ ಹೋರಾಟಕ್ಕೆ ವ್ಯತಿರಿಕ್ತವಾಗಿ ಮತ್ತು ಹೆಗಡೆ ಪಾಳೇಗಾರಿ 'ಪ್ರಭುತ್ವ'ದ ವಿರುದ್ಧ ಜನರ ಆಕ್ರೋಶವನ್ನು ಬೇರೆಡೆಗೆ ತಿರುಗಿಸುವ ಯತ್ನದ ಭಾಗವಾಗಿ ಸಂಘಪರಿವಾರದ ತಿಮರೋಡಿ ಈಗಲೂ ಹೊಸ ನಾಟಕ ಶುರುವಿಟ್ಟು ಕೊಂಡಿದ್ದಾನೆ. ಸೌಜನ್ಯಳ ಮೇಲೆ ಅತ್ಯಾಚಾರ ಎಸಗಿದವರಿಗೆ ಶಿಕ್ಷೆ ದೊರೆಯುವಂತಾಗಲು 'ಸಹಸ್ರ ಚಂಡಿಕಾ ಯಜ್ಞ' ವನ್ನು 1008 ಮುತ್ತೈದೆಯವರನ್ನೊಡಗೂಡಿಸಿ ಮಾಡಿದ್ದಾರೆ! ಗಂಭಿರವಾದ ಸಮಸ್ಯೆಗೆ ನೇರ ಹೋರಾಟಕ್ಕೆ ಇಳಿಯದೇ, ನಮ್ಮ ಕಾನೂನಿನಂತೆ ಶಿಕ್ಷೆ ಕೊಡಿಸದೇ ದೇವರಿಂದ ಶಿಕ್ಷೆ ಕೊಡಿಸಲು, ಧಾರ್ಮಿಕ ಹೆಸರಿನಲ್ಲಿ ಹಾದಿ ತಪ್ಪಿಸುವ ಪ್ರಯತ್ನವಲ್ಲದೇ ಬೇರೇನಲ್ಲ. ಜೊತೆಗೆ ಕಮ್ಯೂನಿಸ್ಟರ ವಿರುದ್ಧ ವೃಥಾ ಆರೊಪಗಳನ್ನು ಮಾಡಿ ಪತ್ರಿಕಾಗೋಷ್ಠಿ ನಡೆಸಿದ್ದಾದರೂ ಯಾವ ಉದ್ದೇಶದಿಂದ? ಧರ್ಮರಕ್ಷಕ ಪಾಳೇಗಾರರನ್ನು ಮೆಚ್ಚಿಸಲು ಅಲ್ಲವೇ? ತಮಾಷೆಯೆಂದರೆ ಇಂತಹ ತಿಮರೋಡಿಯ ಮೇಲೆ ಧರ್ಮಸ್ಥಳದ ಹೆಗಡೆ ಪರಿವಾರ ಕೇಸ್ ಹಾಕಿದೆಯಂತೆ! ಈ ಇಬ್ಬರೂ ಪಾಳೇಗಾರರು ಎಂಬುದರಲ್ಲಿ ಸಂಶಯವಿಲ್ಲ.

ಈಗಲೂ ರಾಜ್ಯ ಸರಕಾರ ಕಣ್ಮುಚ್ಚಿ ಕುಳಿತಿದೆ. ಕೇಂದ್ರ ಕ್ಕೆ ವರ್ಗಾಯಿಸಿ ಹೊಣೆ ತೊಳೆದುಕೊಂಡಿದೆ.

ಈ ಎಲ್ಲಾ ಆಟಗಳು, ವಿಳಂಬಗಳ ವಿರುದ್ಧ ಇತ್ತೀಚೆಗೆ ಡಿ.ವೈ.ಎಫ್.ಐ ಮತ್ತಿತರ ಪ್ರಗತಿಪರ ಸಂಘಟನೆಗಳು ಮತ್ತು ಸಿಪಿಎಂ ಪಕ್ಷಗಳು ಸಿಬಿಐ ತನಿಖೆ ತೀವ್ರಗೊಳಿಸುವಂತೆ, ಕೂಡಲೇ ಮಧ್ಯಂತರ ವರದಿ ನೀಡುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿವೆ. ಇನ್ನಷ್ಟು ವಿಸ್ತಾರಗೊಳ್ಳಲಿದೆ.

ಸೌಜನ್ಯಳ ಮೇಲೆ ಅತ್ಯಾಚಾರ ನಡೆದು, ಬರ್ಬರ ಕೊಲೆಯಾಗಿ ಎರಡು ವರುಷಗಳು ಕಳೆದಿವೆ. ಹೋರಾಟದ ಧ್ವನಿ ಎತ್ತರಗೊಂಡಿದೆ. ಆದರೆ. . . .?!

●

## ಬಾಂಬ್ ಸ್ಫೋಟಗಳು.....

ಪುಟ 9 ರಿಂದ

ಮಹಿಳಾ ಕೊರಿಯರ್‌ಗಳನ್ನೂ ಈ ಕೆಲಸಗಳಿಗೆ ಬಳಸಲಾಗಿದೆ. ಕೋಲ್ಕೊತ್ತಾದ ಮಾರುಕಟ್ಟೆಯಿಂದ ಸ್ಫೋಟಕಗಳನ್ನು ಸಾಗಿಸಲು ಇವರನ್ನು ಚಾಣಾಕ್ಷವಾಗಿ ಬಳಸಲಾಗಿದೆ.

ಎಡರಂಗ ಬಹುಸಂಖ್ಯಾತ ಮೂಲಭೂತವಾದಿಗಳು ಬೆಳೆದಂತೆಲ್ಲ ಅಲ್ಪಸಂಖ್ಯಾತ ಮೂಲಭೂತವಾದಿಗಳು ಉದ್ಧಟರಾಗುತ್ತಾ-ರೆ ಎಂದು ಹೇಳುತ್ತ ಬಂದಿದೆ. ಸಾಮ್ರಾಜ್ಯಶಾಹಿ ಶಕ್ತಿಗಳು ಮೂಲಭೂತವಾದಿಗಳನ್ನು ತಮ್ಮ ಉದ್ದೇಶ ಸಾಧನೆಗೆ ಬಳಸಿಕೊಳ್ಳುತ್ತ ಬಂದಿವೆ. ನಮ್ಮ ದೇಶವೂ ಸೇರಿದಂತೆ ಹಲವು ದೇಶಗಳಲ್ಲಿ ಆಳುವ ವರ್ಗ ತಮ್ಮ ಹಿತಾಸಕ್ತಿ ಸಾಧಿಸಿಕೊಳ್ಳಲು ಮೂಲಭೂತವಾದಿಗಳನ್ನು ಬಳಸಿಕೊಳ್ಳುತ್ತಿವೆ. ಪಶ್ಚಿಮ ಬಂಗಾಳದಲ್ಲಿ ಆಳುವ ಪಕ್ಷದ ಅವಕಾಶವಾದಿ ನಿಲುವು ಮೂಲಭೂತವಾದಿಗಳನ್ನು ಬೆಳೆಸುವ ವಾತಾವರಣವನ್ನು ಉಂಟು ಮಾಡಿದೆ. ಬರ್ಧಮಾನದ ಘಟನೆ ಭವಿಷ್ಯದಲ್ಲಿ ಬರಬಹುದಾದ ದೊಡ್ಡ ಅವಘಡದ ಸಂಕೇತವಾಗಿದೆ. ಪಾತಕಿಗಳ ನಿಜ ರೂಪು ಬಹಿರಂಗಗೊಳ್ಳಬೇಕಿದೆ.

ಎಲ್ಲ ಧರ್ಮ ನಿರಪೇಕ್ಷ, ದೇಶಭಕ್ತ ಮತ್ತು ಪ್ರಜಾಸತ್ತಾತ್ಮಕ ಜನ ಈ ವಿಷಯದಲ್ಲಿ ಎಚ್ಚರಿಕೆಯಿಂದಿದ್ದು ಸಾಮರಸ್ಯವನ್ನು ಕಾಯ್ದುಕೊಳ್ಳಬೇಕೆಂದು ಎಡರಂಗ ಜನರಲ್ಲಿ ಮನವಿ ಮಾಡಿದೆ.

ಈ ಮಧ್ಯೆ ಶಾರದಾ ಚಿಟ್ ಫಂಡ್ ಹಗರಣದ ತನಿಖೆ ಸಹ ಪ್ರಗತಿಯಲ್ಲಿ ಈ ಹಗರಣದಲ್ಲಿ ಭಾಗಿಯಾದ ಹಲವರು ತಪ್ಪೊಪ್ಪಿಗೆ ಹೇಳಿಕೆಗಳನ್ನು ನೀಡುತ್ತಿದ್ದು ಅದರ ಮೂಲಕವೂ ಶಾರದಾ ಹಗರಣಕ್ಕೂ ಮತ್ತು ತೃಣಮೂಲ ಪಕ್ಷದ ನಾಯಕರಿಗೂ ಇರುವ ನಂಟು ಮತ್ತಷ್ಟು ಮತ್ತಷ್ಟು ಸ್ಪಷ್ಟವಾಗುತ್ತ ಹೋಗುತ್ತಿದೆ. ಲಕ್ಷಾಂತರ ಬಡ ಭಾರತೀಯರ ಜೀವಮಾನದ ಹಣ ಹೋಯಿತಲ್ಲಾ ಎಂಬುದು ಇಲ್ಲಿಯವರೆಗಿನ ದುಃಖವಾಗಿದ್ದರೆ ಈಗ ಅದು ದೇಶ ವಿರೋಧಿಯಾದ ಭಯೋತ್ಪಾದಕ ಉದ್ದೇಶಕ್ಕೂ ಬಳಕೆಯಾಗಿದೆ ಎಂದು ಕಂಡು ಬರುತ್ತಿರುವುದು ಈಗಾಗಲೇ ನೊಂದ ಜನಗಳ ಗಾಯದ ಮೇಲೆ ಉಪ್ಪು ಸವರಿದಂತಾಗಿದೆ.

●

## ದುಂಡುಮೇಜಿನ ಸಭೆ........

ಪುಟ 5 ರಿಂದ

ಸರಕಾರದ ಕಾರ್ಯವೈಖರಿ ವಿರುದ್ಧ ವಾಗ್ದಾಳಿ ನಡೆಸಿದರು.

"ಶಿಕ್ಷಣವನ್ನು ವ್ಯಾಪಾರೀಕರಣಗೊಳಿಸಲು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ರತ್ನಗಂಬಳಿ ಹಾಸಲು ಸರಕಾರವೇ ವಿಶೇಷ ಆಸಕ್ತಿ ವಹಿಸಿದೆ. ಶಿಕ್ಷಣ ವ್ಯಾಪಾರೀಕರಣದಿಂದ ಉಳ್ಳವರು ಮಾತ್ರ ಅದರ ಲಾಭ ಪಡೆಯಲು ಸಾ ಧ್ಯ ಎನ್ನುವಂತಾಗಿದೆ. ಕುಲಪತಿಗಳ ಮೇಲೆಯೇ ನ್ಯಾಯಾಂಗ ತನಿಖೆಗೆ ಕಾರಣವಾಗುವಂತೆ ನಾನಾ ಆರೋಪಗಳು ಎದುರಾಗುತ್ತಿವೆ. ಇಡೀ ಶಿಕ್ಷಣ ವ್ಯವಸ್ಥೆ ಹದಗೆಟ್ಟಿದೆ. ವಿದ್ಯಾರ್ಥಿಗಳ ನಡುವೆಯೇ ಸರಕಾರ ಅಸಮಾನತೆಯ ಬೀಜ ಬಿತ್ತುತ್ತಿದೆ." ಎಂದರು.

"ಶಿಕ್ಷಣ ಸಚಿವರಿಗೆ ಪ್ರಾಥಮಿಕ ಶಿಕ್ಷಣದ ಗಂಧಗಾಳಿ ಗೊತ್ತಿಲ್ಲ. ಉನ್ನತ ಶಿಕ್ಷಣ ಸಚಿವರು ಇಲಾಖೆಯತ್ತ ವಿಶೇಷ ಗಮನ ಹರಿಸುತ್ತಿಲ್ಲ. ಶಿಕ್ಷಣವನ್ನು ಖಾಸಗೀಕರಣಗೊಳಿಸಿದ ಮೊದಲ ಕೀರ್ತಿಯೂ ನಮ್ಮ ರಾಜ್ಯಕ್ಕೆ ಸಲ್ಲುತ್ತದೆ. ರಾಮಕೃಷ್ಣ ಹೆಗಡೆ ಮುಖ್ಯಂತ್ರಿಗಳಾಗಿದ್ದ ವೇಳೆ ಇದು ಆರಂಭಗೊಂಡಿತು." ಎಂದು ಅವರು ಖೇದ ವ್ಯಕ್ತಪಡಿಸಿದರು.

**ಸರಕಾರ ಶಾಮೀಲು**

ಪೋಷಕರ ಸಂಘಟನೆಗಳ ಅಧ್ಯಕ್ಷರಾದ ರವಿ ಹೆಗ್ಗನಹಳ್ಳಿ ಮಾತನಾಡಿ, " ಶಿಕ್ಷಣ ಇಲಾಖೆ ಆಯುಕ್ತರು ಹಾಗೂ ಸಚಿವರು ಖಾಸಗಿ ಶಿಕ್ಷಣ ಸಂಸ್ಥೆಗಳ ಜತೆ ಶಾಮೀಲಾಗಿದ್ದಾರೆ. ಇಲಾಖೆ ಅಧಿಕಾರಿಗಳು ಇವರಿಗೆ ದಲ್ಲಾಳಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬಡ ಹಾಗೂ ಮಧ್ಯಮ ವರ್ಗದ ಮಕ್ಕಳ ಶಿಕ್ಷಣದ ಕುರಿತು ಸ್ವಲ್ಪವೂ ಯೋಚಿಸುತ್ತಿಲ್ಲ." ಎಂದು ಟೀಕಿಸಿದರು. ಮುಳ್ಳಹಳ್ಳಿ ಸೂರಿ ಈ ಮಾತನ್ನು ಬೆಂಬಲಿಸಿದರು.

"ಖಾಸಗಿ ಶಿಕ್ಷಣ ಸಂಸ್ಥೆಗಳ ದಬ್ಬಾಳಿಕೆ ತಡೆಯಲು ರಾಜ್ಯ ಸರಕಾರ ಎಲ್ಲ ಖಾಸಗಿ ಶಾಲೆಗಳನ್ನು ರಾಷ್ಟ್ರೀಕರಣಗೊಳಿಸುವ ಎದೆಗಾರಿಕೆ ತೋರಬೇಕು. ವಿರೋಧ ವ್ಯಕ್ತವಾದರೆ ಸುಗ್ರೀವಾಜ್ಞೆ ಮೂಲಕ ಇದನ್ನು ಜಾರಿಗೊಳಿಸಬೇಕೆಂದು." ಆಗ್ರಹಿಸಿದರು.

'ಜನಶಕ್ತಿ ವಾರಪತ್ರಿಕೆ'ಯ ಎಸ್.ವೈ. ಗುರುಶಾಂತ್ ಅವರು ಮಾತನಾಡಿ ಸರಕಾರಗಳು ಒಳ್ಳೆಯ ಕಾನೂನು ಕ್ರಮಗಳ ಮಾತನಾಡಿದರೂ ಅದರ ಮರೆಯಲ್ಲಿ ಶಿಕ್ಷಣ ವಿರೋಧಿ ನೀತಿಗಳೇ ಜಾರಿಯಾಗುವ ಅಪಾಯವಿದೆ. ಈ ಬಗೆಗೆ ಎಚ್ಚರ ಅಗತ್ಯ ಎಂದರು. ಡಿವೈಎಫ್‌ಐನ ರಾಜ್ಯ ಕಾರ್ಯದರ್ಶಿ ಬಿ. ರಾಜಶೇಖರ ಮೂರ್ತಿ, ಶ್ರೀಪಾದ ಭಟ್, ಟಿ.ಎಚ್. ಕುಮಾರಸ್ವಾಮಿ ಮುಂತಾದವರು ಪಾಲ್ಗೊಂಡಿದ್ದರು.

**ಆಕ್ಷೇಪಣೆ ಸಲ್ಲಿಕೆಗೆ ನಿರ್ಧಾರ**

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ದುಂಡು ಮೇಜಿನ ಸಭೆ ಬಳಿಕ ಕರಡು ವರದಿಗೆ ಆಕ್ಷೇಪಣೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಮೂಲಕ ಸರಕಾರಕ್ಕೆ ಸಲ್ಲಿಸುವ ನಿರ್ಣಯ ಕೈಗೊಂಡಿತು. ಹಾಗೆಯೇ ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲೂ ದುಂಡು ಮೇಜಿನ ಸಭೆಗಳ ಮೂಲಕ ಸಾರ್ವಜನಿಕ ಅಭಿಪ್ರಾಯ ರೂಪಿಸಿ ಹೋರಾಟ ನಡೆಸುವುದಾಗಿಯೂ ಸಂಘಟನೆ ಪ್ರಕಟಿಸಿತು. ಶುಲ್ಕಗಳ ಕರಡು ಸೂಚನೆ ಕೈಬಿಟ್ಟು ಸಮಾನ ಶಿಕ್ಷಣ ನೀಡುವ ವರದಿ ಸಿದ್ಧಪಡಿಸಲು ಕರೆ ನೀಡಿತು. ಮಕ್ಕಳಿಗೆ ಅನ್ಯಾಯವಾಗದಂತೆ, ಪೋಷಕರಿಗೆ ಅನಗತ್ಯ ಹೊರೆಯಾಗದಂತೆ ಸರಕಾರ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಎಸ್‌ಎಫ್‌ಐ ಆಗ್ರಹಿಸಿದೆ.

●

## ಕಡಲತಡಿ.....

ಪುಟ 6 ರಿಂದ

ಹಿಂದೆ ಡಿವೈಎಫ್‌ಐ ನೇತೃತ್ವದಲ್ಲಿ ಚಳುವಳಿಗಳೂ ನಡೆದಿದ್ದವು. ಈಗ ವಿಸ್ತಾರಗೊಳ್ಳುತ್ತಿರುವ ಈ ಸ್ಥಾವರದ ಸುತ್ತ ಮುತ್ತಲಿನ ಜನವಾಸ್ತವ್ಯದ ಪ್ರದೇಶ ಹಾಗೂ ಪರಿಸರದ ಬಗ್ಗೆ ಆಡಳಿತವರ್ಗ ಅತಿ ಕಡಿಮೆ ಕಾಳಜಿ ಹೊಂದಿರುವುದು ಇತ್ತೀಚಿನ ಬೆಳವಣಿಗೆಯಲ್ಲಿ ಕಂಡು ಬರುತ್ತದೆ.

ಎಂಆರ್‌ಪಿಎಲ್ ಬೃಹತ್ ಕಂಪೌಂಡ್‌ಗೆ ತಾಗಿಕೊಂಡಿರುವಂತೆಯೇ ಜನಬಾಹುಳ್ಯದ ವಸತಿ ಪ್ರದೇಶವಾದ ಜೋಕಟ್ಟೆ ಗ್ರಾಮವಿದೆ. ಕಂಪೌಂಡ್‌ನೊಳಗಡೆಯೇ ಕಾರ್ಖಾನೆಗಳ ವಿಸ್ತರಣೆಗೆ ಸ್ಥಳಾವಕಾಶಗಳಿದ್ದರೂ, ಈಚೆಗೆ ಕಂಪೌಂಡ್‌ನ ಅಂಚಿನಲ್ಲೇ ಕಾರ್ಖಾನೆಗಳನ್ನು ಎಂಆರ್‌ಪಿಎಲ್ ಸ್ಥಾಪಿಸುತ್ತಿದೆ. ಇತ್ತೀಚೆಗೆ ಸಲ್ಫರ್ ಘಟಕವೊಂದರ ಸ್ಥಾಪನೆಯ ಸಿದ್ಧತೆ ನಡೆದಿದೆ. ಜೋಕಟ್ಟೆ ಗ್ರಾಮದ ಅಂಚಿನಲ್ಲೇ ಸಲ್ಫರ್ ಘಟಕ ಸ್ಥಾಪನೆಯಾಗಿದ್ದು, ಜೋಕಟ್ಟೆ ಪ್ರದೇಶದ ನೆಲಜಲ, ವಾಯು ಪ್ರದೇಶವನ್ನೆಲ್ಲಾ ಅದು ಹಾಳುಗೆಡಹುತ್ತಿದೆ. ಕಲ್ಮಶಯುಕ್ತ ರಾಸಾಯನಿಕ ಸಂಯುಕ್ತಗಳು ನೆಲದಲ್ಲಿ ಇಂಗಿ, ಜೋಕಟ್ಟೆ ಗ್ರಾಮದಲ್ಲಿ ಕೊಳಚೆಯಾಗಿ ಹರಿದು ಅಲ್ಲಿನ ಜವುಗು ಪ್ರದೇಶದಲ್ಲಿ ತುಂಬಿ ದುರ್ನಾತ ಬೀರುತ್ತಿದೆ. ಅಲ್ಲದೆ ಭೂಮಿಯಲ್ಲಿ ಇಂಗಿ ಗ್ರಾಮದ ಬಾವಿಗಳಿಗೆ ಸೇರಿದ ತೈಲ ಹಾಗೂ ಇತರ ರಾಸಾಯನಿಕಗಳು ಕುಡಿಯುವ ನೀರನ್ನು ಹಾಳು ಮಾಡಿದೆ. ಕಾರ್ಖಾನೆಯಲ್ಲಿ ರಾಸಾಯನಿಕ ದಹನ ನಡೆದಾಗಲೆಲ್ಲಾ ಉಸಿರು ಕಟ್ಟುವ ದುರ್ವಾಸನೆ ಹರಡುತ್ತದೆ. ಕೆಲವು ಮನೆಗಳಂತೂ ಎಂಆರ್‌ಪಿಎಲ್ ಕಂಪೌಂಡಿನಿಂದ ಕೇವಲ 15 ಮೀಟರ್ ದೂರದಲ್ಲಿವೆ. ಅಂಗನವಾಡಿಯೊಂದು ಸಮೀಪದಲ್ಲೇ ಇದ್ದು, ಸಲ್ಫರ್ ಘಟಕ ಆರಂಭವಾದಾಗಿನಿಂದ ಕೆಲವರು ತಮ್ಮ ಮಕ್ಕಳನ್ನು ಅಲ್ಲಿಗೆ ಕಳುಹಿಸುತ್ತಿಲ್ಲ. ಈ ಬಗ್ಗೆ ಊರಿನ ಜನ ಹಿಂದೆ ಆಕ್ಷೇಪ ವ್ಯಕ್ತಪಡಿಸಿದಾಗ ಬೇರೆ ಎಷ್ಟೋ ಕೈಗಾರಿಕಾ ಸ್ಥಾವರಗಳಿಗಿಂತ ತಾವೇ ಪರಿಸರದ ಬಗ್ಗೆ ಹೆಚ್ಚು ಸಂರಕ್ಷಣಾ ವ್ಯವಸ್ಥೆ ಮಾಡಿದ್ದೇವೆಂದು ಸ್ಥಾವರದ ಆಡಳಿತ ವರ್ಗ ಹೇಳಿದ್ದಲ್ಲದೆ, 'ತಾವೇ ಪರಿಶೀಲಿಸಿರಿ' ಎಂದು ಉತ್ತರ ಭಾರತದ ಕೈಗಾರಿಕಾ ಸ್ಥಾವರವೊಂದಕ್ಕೆ ಆಯ್ದ ನಾಗರಿಕರನ್ನು ಪರಿಶೀಲನೆಗೆಂದು ಕಳುಹಿಸಿಕೊಟ್ಟಿದ್ದರು. ಆದ-ರೆ ಭೇಟಿ ನೀಡಿದ ಸ್ಥಾವರದಲ್ಲಿ ಜನವಸತಿಗಿಂತ ಕಾರ್ಖಾನೆ ದೂರವೇ ಇದ್ದುದನ್ನು ನಾಗರಿಕರು ಗಮನಿಸಿದ್ದರು ಮತ್ತು ಎಂಆರ್‌ಪಿಎಲ್ ಆಡಳಿತ ನಾಗರಿಕರಿಗೆ ಸುಳ್ಳು ಹೇಳುತ್ತಿದೆ ಎಂದು ಈಗ ದೂರುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ನಾಗರಿಕರ ಅತೃಪ್ತಿಗೆ ಡಿವೈಎಫ್‌ಐ ಧ್ವನಿಯಾಗಿ ಸಲ್ಫರ್‌ಕೋಕ್ ಘಟಕದ ವಿರುದ್ಧ ಜೋಕಟ್ಟೆ ನಾಗರಿಕರ ಹೋರಾಟ ಸಮಿತಿಗೆ ನೇತೃತ್ವ ನೀಡಿದೆ. ನಾಗರಿಕ ಹೋರಾಟ ಸಮಿತಿಯು ಜಿಲ್ಲಾಡಳಿತದ ಹಾಗೂ ಸಾರ್ವಜನಿಕರ ಗಮನ ಸೆಳೆಯಲು ಅಕ್ಟೋಬರ್ 10, 2014 ರಂದು ಮಂಗಳೂರಿನಲ್ಲಿ ಒಂದು ಬೃಹತ್ ಪ್ರತಿಭಟನೆ ನಡೆಸಿತು. ಮಂಗಳೂರಿನ ಕ್ಲಾಕ್ ಟವರ್‌ನಿಂದ ಮೆರವಣಿಗೆ ಹೊರಟ ನಾಗರೀಕರು ಜಿಲ್ಲಾಧಿಕಾರಿ ಕಚೇರಿ ಎದುರು ಸಮಾವೇಶಗೊಂಡಾಗ 700 ಕ್ಕೂ ಹೆಚ್ಚು ಜೋಕಟ್ಟೆ–ಸುರತ್ಕಲ್ ಪ್ರದೇಶದ ನಾಗರಿಕರು ಒಟ್ಟುಗೂಡಿದ್ದು, ಸಮಸ್ಯೆಯ ಗಂಭೀರತೆಯನ್ನು ಸಾರ್ವಜನಿಕರಿಗೆ ಎತ್ತಿ ತೋರಿಸಿತು. ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಭಾಷಣಕಾರರು ಎಂಆರ್‌ಪಿಎಲ್ ಜೊತೆಗೆ ಜಿಲ್ಲಾಡಳಿತವನ್ನು, ಉಸ್ತುವಾರಿ ಸಚಿವರನ್ನು, ಆರೋಗ್ಯ ಸಚಿವರನ್ನು, ಸ್ಥಳೀಯ ಶಾಸಕರನ್ನು ತರಾಟಗೆ ತೆಗೆದು–ಕೊಂಡರು. ಸಭೆಯನ್ನುದ್ದೇಶಿಸಿ ಡಿವೈಎಫ್‌ಐ ರಾಜ್ಯ ಸಮಿತಿ ಅಧ್ಯಕ್ಷರಾದ ಮುನೀರ್ ಕಾಟಿಪಳ್ಳ, ಕರ್ನಾಟಕ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಾದವ ಶೆಟ್ಟಿ, ನಾಗರಿಕ ಹೋರಾಟ ಸಮಿತಿಯ ಅಧ್ಯಕ್ಷ ಬಿ.ಎಸ್.ಹುಸೇನ್ ಮಾತನಾಡಿದರು. ಡಿವೈಎಫ್‌ಐ ಮಂಗಳೂರು ನಗರ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಮಾಜಿ ಸಂಸದ ಬಿ.ಇಬ್ರಾಹಿಂ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

**ಪಾವೂರು ಗ್ರಾಮ ಪಂಚಾಯತ್ ಎದುರು ಡಿವೈಎಫ್‌ಐ ಪ್ರತಿಭಟನೆ :**

ಮೂಲ ಸೌಕರ್ಯ, ಸಮರ್ಪಕ ಕುಡಿಯುವ ನೀರು ಪೂರೈಕೆ, ಬಡವರಿಗೆ ನಿವೇಶನಕ್ಕೆ ಆಗ್ರಹಿಸಿ ಮತ್ತು ಆಡಳಿತಗಾರರ ಬೇಜವಾಬ್ದಾರಿಯನ್ನು ಖಂಡಿಸಿ ಡಿವೈಎಫ್‌ಐ ಪಾವೂರು ಘಟಕದ ಆಶ್ರಯದಲ್ಲಿ ಉಳ್ಳಾಲ ಪ್ರದೇಶದ ಪಾವೂರು ಗ್ರಾಮ ಪಂಚಾಯತ್ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಡಿವೈಎಫ್‌ಐ ರಾಜ್ಯ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿದರು. ಸ್ಥಳೀಯ ಮುಖಂಡರಾದ ವಿಶ್ವನಾಥ ಬಂಗಾರುಪಾದೆ, ಡಿವೈಎಫ್‌ಐ ಉಳ್ಳಾಲ ವಲಯ ಉಪಾಧ್ಯಕ್ಷ ರಫೀಕ್ ಹರೇಕಳ, ಪಾವೂರು ಘಟಕಾಧ್ಯಕ್ಷ ಸಿರಾಜ್, ಕಾರ್ಯದರ್ಶಿ ಚಿತ್ತರಂಜನ್ ಭಂಡಾರಮನೆ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

●

### ಮೆಸ್ಸೇಜ್ ಮಾಡಿಲ್ಲ... ಸರಿಯಾಗಿ ಹೆಬ್ಬೆಟ್ಟು ಕೊಟ್ಟಿಲ್ಲ...ಅಂತ ರೇಷನ್ ಕಾರ್ಡ್ ರದ್ದು

# 'ರದ್ದಾದ ರೇಷನ್ ಕಾರ್ಡ್ ಮತ್ತೆ ಕೊಡಿ - ಹೊಸ ಅರ್ಜಿ ಕೊಟ್ಟ ಬಡವರಿಗೆ ರೇಷನ್ ಕೊಡಿ' ರಾಮದುರ್ಗದಲ್ಲಿ ಮೊಳಗಿದ ಘೋಷಣೆ

ಗೈಬು ಎಂ. ಜೈನೆಖಾನ

ಸರಿಯಾದ ರೀತಿಯಲ್ಲಿ ಸಮೀಕ್ಷೆ ಮಾಡದೇ, 'ನವೀಕರಣ (ರಿನಿವಲ್) ಮಾಡಿಲ್ಲ.. ಸರಿಯಾಗಿ ಮೆಸ್ಸೇಜ್.. ಕಳುಹಿಸಿಲ್ಲ..' ಎಂಬ ನೆಪಗಳನ್ನು ಮುಂದೆ ಮಾಡಿ ತಾಲೂಕಿನ 30 ಸಾವಿರ ಬಡವರ ಕಾರ್ಡುಗಳನ್ನು ರದ್ದುಮಾಡಿದ ತಾಲೂಕಾ ಆಡಳಿತದ ನೀತಿಯನ್ನು ಪ್ರತಿಭಟಿಸಿ ಅಕ್ಟೋಬರ್ 17, 2014 ರಂದು ಸಾವಿರಾರು ಜನ ಕಾರ್ಡು ರದ್ದಾದ ಕುಟುಂಬಗಳ ಸದಸ್ಯರು ರಾಮದುರ್ಗದ ತಹಶೀಲ್ದಾರ ಕಚೇರಿ ಎದುರು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಒಂದು ರೂಪಾಯಿ ಕೆ.ಜಿ.ಯಂತೆ 30 ಕೆ.ಜಿ. ಅಕ್ಕಿ ಕೊಡುವುದಾಗಿ ಸ್ವತಃ ಮುಖ್ಯ ಮಂತ್ರಿಯವರೇ ಘೋಷಿಸಿದ್ದಾರೆ. ಮಾತಿನಂತೆ ನಡೆದುಕೊಳ್ಳದೆ ದಿನಕ್ಕೊಂದು ಕ್ರಮ ತಂದು ಪಡಿತರ ಚೀಟಿಗಳನ್ನು ಕಡಿತ ಮಾಡುತ್ತಿದ್ದಾರೆ. ಜನತೆಯ ಮೇಲೆ ನಿಜವಾಗಿ ಕಾಳಜಿ ಇದ್ದರೆ ಕೂಡಲೆ ಮುಖ್ಯ ಮಂತ್ರಿಯವರು ಮಾತಿನಂತೆ ನಡೆದು ಅರ್ಹ ಫಲಾಭವಿಗಳಿಗೆ ರೇಶನ್ ಕಾರ್ಡು ನೀಡಿ 30 ಕೆ.ಜಿ. ಅಕ್ಕಿ ಕೊಟ್ಟು ಮಾತು ಉಳಿಸಿಕೊಳ್ಳಬೇಕೆಂದು ತಹಶೀಲ್ದಾರ ಕಚೇರಿ ಎದುರು ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಸಿಪಿಐ(ಎಂ) ಮುಖಂಡರಾದ ವ್ಹಿ.ಪಿ. ಕುಲಕರ್ಣಿ ಮಾತನಾಡಿದರು.

ಮುಂದಿನ ದಿನಗಳಲ್ಲಿ ಎಪಿಎಲ್ ಪಡಿತರ ಚೀಟಿದಾರರಿಗೆ ಅಕ್ಕಿ ವಿತರಿಸಲಾಗುವದೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದನ್ನು ನಾವು ಸ್ವಾಗತಿಸುತ್ತೇವೆ. ಆದರೆ ಈಗಿರುವ ಪಡಿತರ ಚೀಟಿ-ದಾರರಿಗೆ ವಿತರಿಸುವ ಆಹಾರದಲ್ಲಿ ಕಡಿತ ಮಾಡಿ ಎಪಿಎಲ್‌ದವರಿಗೆ ವಿತರಿಸುವುದು ಸರಿಯಲ್ಲ. ಮೊಬೈಲ್ ಫೋನ್ ಇದ್ದವರಿಗೆ ಬಿಪಿಎಲ್ ಕಾರ್ಡ ಇಲ್ಲ ಎಂದು ಹೇಳಿದ ಸರ್ಕಾರ ಈಗ ಮೆಸ್ಸೇಜ್ ಮಾಡಲು ಹೇಳುತ್ತಿದೆ. ಇದು ಬಡವರ ಬದುಕಿನ ಜೊತೆ ಚೆಲ್ಲಾಟವಾಡುವ ನೀತಿ ಎಂದು ಸಿಪಿಐ(ಎಂ) ಮುಖಂಡ ಗೈಬು ಜೈನೆಖಾನ್ ಮಾತನಾಡಿದರು.

ಪಡಿತರದ ಮೇಲೆ ಅವಲಂಬಿಸಿರುವ ಸಾವಿರಾರು ಕುಟುಂಬಗಳು ತಮ್ಮ ಕಾರ್ಡು ರದ್ದಾಗಿದ್ದ-ರಿಂದ ಕಂಗಾಲಾಗಿದ್ದಾರೆ. ಕೂಡಲೇ ಈ ಕುರಿತು ಸರ್ಕಾರ ರದ್ದಾದ ಕಾರ್ಡು ಪ್ರಾರಂಭ ಕೊಡಲಿ ಎಂದು ನಾಗಪ್ಪ ಸಂಗೊಳ್ಳಿ ಆಗ್ರಹಿಸಿದರು.

**133 ಗ್ರಾಮಗಳಲ್ಲಿ ವಾಹನ ಪ್ರಚಾರ**

ಪ್ರತಿಭಟನೆಯ 2 ದಿನ ಮೊದಲು ರಾಮದುರ್ಗ ತಾಲೂಕಿನ 133 ಗ್ರಾಮಗಳಿಗೆ 2 ಗಾಡಿಗಳನ್ನು ಮಾಡಿಕೊಂಡು ಪ್ರಚಾರ ಮಾಡಲಾಯಿತು. ಈ ಸಂದರ್ಭದಲ್ಲಿ ಕಾರ್ಡು ರದ್ದಾದ ಹಾಗೂ ಹೊಸ ಅರ್ಜಿ ಕೊಟ್ಟ ಬಡ ಜನರು ತಮ್ಮ ಅಳಲನ್ನು ತೋಡಿಕೊಳ್ಳುತ್ತಿದ್ದರು.

**ಮೆಸ್ಸೇಜ್ ಮಾಡಿಲ್ಲ ..ಸರಿಯಾಗಿ ಹೆಬ್ಬೆಟ್ಟು ಕೊಟ್ಟಿಲ್ಲ.. ಅಂತ**

ಹಲಗತ್ತಿ ಗ್ರಾಮದ ಲಕ್ಷ್ಮಣ ಮೂಲಂಗಿ ಎಂಬ ಬಡ ಕೂಲಿಕಾರ ನಮ್ಮ ಪ್ರಚಾರ ಮಾಡುವ ಗಾಡಿ ಹತ್ತಿರ ಬಂದು "ಏನ್ರಿ ಎಪ್ಪಾ ಇದು? ರೇಶನ್ ಕಾರ್ಡಿನ ಬಗ್ಗೆ ಹೇಳಾಕತ್ತಿರಿ" ಎಂದು ಕೇಳಿದ. ಮೆಸ್ಸೇಜ್ ಮಾಡಿಲ್ಲ ಸರಿಯಾಗಿ ಹೆಬ್ಬೆಟ್ಟು ಕೊಟ್ಟಿಲ್ಲ ಅಂತಾ ಸರ್ಕಾರದವರು ಬಡವರ ಕಾರ್ಡು ರದ್ದ ಮಾಡ್ಯಾರ. ಯಾಕ ಅಂತಾ ಕೇಳಾಕ ನಾವು 17 ನೇ ತಾರೀಖಿಗೆ ತಹಶೀದ್ದಾರ ಕಚೇರಿಗೆ ಹೊರಟಿವಿ. ಅದಕ್ಕ ನೀವು ನಮ್ಮ ಜೊತೆ ಬರ್ರಿ ಅಂತಾ ಹೇಳಾಕ ಬಂದಿವಿ... ಅಂತಾ ನಾವು ಆ ಕೂಲಿಕಾರನಿಗೆ ಹೇಳಿದ ತಕ್ಷಣ ಲಕ್ಷ್ಮಣನ ಕಣ್ಣು ತೇವವಾಗಿ ಎಪ್ಪಾ ನೀವು ಒಬ್ಬರಾದ್ರು ಬಡವರ ಬಗ್ಗೆ ಕೇಳಾವ್ರ ಅದಿರಿ. ನನಗೆ ಬಹಳ ಖುಷಿ ಆಯಿತ್ರಿ. ನಾನೂ ಬರತಿನಿ, ನಮ್ಮ ಊರಾನವರಿಗೆ ಕರಕೊಂಡ ಬರತೀನಿ ಅಂತಾ ಕೈಯಲ್ಲಿ ಕರಪತ್ರ ಹಿಡಿದುಕೊಂಡು ಹೊರಟೇ ಬಿಟ್ಟ.

ಖಾನಪೇಠ ಗ್ರಾಮದ ಹಣಮಂತ ಅಣ್ಣಿಗೇರಿ ಬಂದು 'ಎಪ್ಪಾ ನನ್ನ ಕಾರ್ಡ ರದ್ದ ಮಾಡ್ಯಾರ್ರಿ ಹಿಂದಕ್ 3-4 ತಿಂಗಳ ರೇಶನ್ ಕೊಟ್ಟಾರ್ರಿ ಈಗ 2 ತಿಂಗಳ ಆತು ನನಗ ರೇಶನ್ ಕೊಡಾಕತ್ತಿಲ್ಲ. ಯಾಕ ಅಂತಾ ಕೇಳಿದ್ರ ಲಿಸ್ಟ್‌ನ್ಯಾಗ ನಿನ್ನ ಹೆಸರ ಬಂದಿಲ್ಲ. ತಹಶೀಲ್ದಾರ ಕಚೇರಿಗೆ ಹೋಗಿ ಕೇಳ ಅಂತ ಹೇಳ್ತಾರ್ರಿ. ನಾ ಏನ ಮಾಡ್ಲಿ ?' ಅಂತಾ 70 ವಯಸ್ಸಿನ ಮುದುಕ ಸರ್ಕಾರಕ್ಕೆ ಶಾಪ ಹಾಕುತ್ತಿದ್ದ.

**'ಪ್ಯಾಟ್ಯಾಗಿನ ಅಕ್ಕಿ ತಂದ ತಿನ್ನುವಷ್ಟ ತಾಕತ್ ನಮಗಿಲ್ಲರಿ..'**

ಮಲ್ಲವ್ವ ಎಂಬ ಒಬ್ಬ ಬಡ ಮಹಿಳೆ ಹಾಗೂ ಈಶ್ವರ ಭಜಂತ್ರಿ ಎಂಬ ಆಶ್ರಯ ಪ್ಲಾಟಿನ ಮುದುಕ ಹಾಗೂ ಕಟಕೋಳ ಗ್ರಾಮದ ದಲಿತ ಕೇರಿಯ ಒಬ್ಬ ಬಡ ಮಹಿಳೆ ಮೆರವಣಿಗೆ ಹೊರಡುವ ಮೊದಲು ನಮ್ಮ ಹತ್ತಿರ ಬಂದು 'ನಮ್ಮ ಹೆಸರ ಬರಕೊಳ್ರಿ ಸಾಹೇಬ್ರ, ನಾವು ಬಹಳ ಬಡವರು ಅದಿವಿ. ನಮ್ಮ ಕಡೆ ರೇಶನ್ ಕಾರ್ಡ ಐತ್ರಿ. ಆದ್ರ ರೇಶನ್ ಕೊಡುದಿಲ್ಲ ಅಂತಾ ಹೇಳಾಕತ್ತ್ಯಾರ. ಯಾಕ ಅಂತಾ ಕೇಳಿದ್ರ ನಿನ್ನ ಕಾರ್ಡ ರದ್ದ ಆಗೈತಿ, ಹೋಗ ಅಲ್ಲೆ ತಹಶೀಲ್ದಾರ ಆಫೀಸಕ್ಕ ಹೋಗಿ ಕೇಳ ಅಂತ ಉತ್ರಾ ಕೊಡತಾರ. ಪ್ಯಾಟ್ಯಾಗಿನ ಅಕ್ಕಿ ತಂದ ತಿನ್ನುವಷ್ಟ ತಾಕತ್ ನಮಗಿಲ್ಲರಿ. ಹೆಂಗಾರ ಮಾಡಿ ನಮಗ ರೇಶನ್ ಸಿಗುವಂಗ ಮಾಡಿದ್ರ ನಿಮಗ ಪುನ್ಯಾ ಹತ್ತತ್ತೈತ್ರಿ..' ಅಂತ ಕಣ್ಣೀರು ಹಾಕುವ ದೃಶ್ಯ ನೋಡಿದವರ ಕಣ್ಣು ತೇವವಾಗುವಂತಿತ್ತು.

ಒಟ್ಟಾರೆ ಆಗಿ ಸರ್ಕಾರದ ನೀಡಿ ಹಾಗೂ ಟಾರ್ಗೇಟ್ ಪದ್ಧತಿಯಿಂದ ನಿಜವಾದ ಬಡವರಿಗೆ ಅನ್ಯಾಯವಾಗಿದೆ ಎಂದು ಹೋರಾಟದಲ್ಲಿ ಭಾಗವಹಿಸಿರುವ ಎಲ್ಲಾ ಬಡವರಿಗೆ ಮನದಟ್ಟು ಮಾಡಲಾಯಿತು. ರದ್ದಾದ ಕಾರ್ಡು ಚಾಲೂ ಮಾಡಬೇಕು, ಹೊಸ ಅರ್ಜಿದಾರರಿಗೆ ಕೂಡಲೆ ಪಡಿತರ ಚೀಟಿ ನೀಡಿ ರೇಶನ್ ಚಾಲೂ ಮಾಡಬೇಕೆಂದು ಒತ್ತಾಯಿಸಲಾಯಿತು. ಒಂದು ತಿಂಗಳ ಅವಧಿಯಲ್ಲಿ ಈ ಕೆಲಸ ಆಗಲಿಲ್ಲ ಅಂ-ದರೆ ಮುಂದಿನ ಹೋರಾಟ ತೀವ್ರ ಆಗುವದೆಂದು ತಹಶೀಲ್ದಾರರಿಗೆ ಮನವಿ ಕೊಡುವದರ ಮೂಲಕ ತಿಳಿಸಲಾಯಿತು.



ಹೋರಾಟಕ್ಕೆ ಬಂದಂತಹ ನೀವೆಲ್ಲರೂ ಮುಂದಿನ ಹೋರಾಟಕ್ಕೆ ತಯಾರಾಗಿ ಬರಬೇಕು ನಮ್ಮ ಹಕ್ಕನ್ನು ಪಡೆದೇ ತೀರೋಣ ಎಂದು ಹೇಳಿದಾಗ, ಕೆಂಪು ಜೆಂಡಾದವರು ನಮಗೆ ನ್ಯಾಯ ಕೊಡಸೇ ತೀರತಾರ ಎಂದು ಜನ ಮಾತಾಡಿಕೊಂಡು ತಮ್ಮ - ತಮ್ಮ ಗ್ರಾಮಗಳಿಗೆ ತೆರಳಿದರು.

ಎಸ್.ಬಿ. ಹಳ್ಳಿ, ನಾಗಪ್ಪ ಸಂಗೊಳ್ಳಿ, ಅಯ್ಯೂಬ ಮೊಹಳಕರ, ದಾದಾಪೀರ ಕೌಜಲಗಿ, ವೀರಭದ್ರ ಕಂಪ್ಲಿ, ಮತ್ತು ಶೆಟ್ಟೆಪ್ಪ ಸಂಗೊಳ್ಳಿ ಮೆರವಣಿಗೆಯ ನೇತೃತ್ವ ವಹಿಸಿದ್ದರು. ■

# ಅ-1 'ಜಾಗತಿಕ ಕಾರ್ಯಾಚರಣೆ' ದಿನ: ನಿರುದ್ಯೋಗದ ವಿರುದ್ಧ ಕಾರ್ಮಿಕರ ಮತಪ್ರದರ್ಶನ ಕಾರ್ಮಿಕ ಕಾನೂನುಗಳ ತಿದ್ದುಪಡಿ ವಿರೋಧಿಸಿ ಡಿ-5 ದೇಶದಾದ್ಯಂತ ಹೋರಾಟ

ಅಭಿವೃದ್ಧಿ ಹೊಂದಿದ ದೇಶಗಳು ಸೇರಿದಂತೆ ಭಾರತದಲ್ಲೂ ನಿರುದ್ಯೋಗ ಸಮಸ್ಯೆ ಗಂಭೀರವಾಗಿದೆ. ನಿರುದ್ಯೋಗ ಸಮಸ್ಯೆಯ ಪರಿಹಾರಕ್ಕೆ ಸರಕಾರಗಳು ಯಾವುದೇ ಕ್ರಮವಹಿಸುತ್ತಿಲ್ಲ. ಇನ್ನೂ ತಾತ್ಕಾಲಿಕ, ಗುತ್ತಿಗೆ, ಅರೇ ಗುತ್ತಿಗೆ ಹೆಸರಿನಲ್ಲಿ ವ್ಯಾಪಕ ಶೋಷಣೆ ನಡೆಯುತ್ತಿರುವಾಗಲೇ ಅವರಿಗೆ ಭದ್ರತೆ ನೀಡುವ ಬದಲು ಕೇಂದ್ರದ ಮೋದಿ ಸರಕಾರ ಅಭಿವೃದ್ಧಿ ಹೆಸರಿನಲ್ಲಿ ಮಾಲೀಕರ ಪರವಾಗಿ ದೇಶದ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡಲು ಹೊರಟಿರುವದು ಕಾರ್ಮಿಕ ವಿರೋಧಿಯಾಗಿದ್ದು ಇದರ ವಿರುದ್ಧ ಡಿಸೆಂಬರ್-5, 2014 ರಂದು ದೇಶದಾದ್ಯಂತ ದೇಶದ ಎಲ್ಲಾ ಕಾರ್ಮಿಕ ಸಂಘಟನೆಗಳು ಹೋರಾಟವನ್ನು ಹಮ್ಮಿಕೊಂಡಿವೆ ಎಂದು ಸಿಐಟಿಯು ಧಾರವಾಡ ಜಿಲ್ಲಾ ಉಪಾಧ್ಯಕ್ಷ ಬಿ.ಎನ್.ಪೂಜಾರಿ ಹೇಳಿದರು.



"ನಿರುದ್ಯೋಗದ ವಿರುದ್ಧ ಮತ್ತು ಗೌರವಪೂರ್ಣ ಕೆಲಸಕ್ಕಾಗಿ, ಉದ್ಯೋಗರಹಿತರಿಗೆ ಸಂರಕ್ಷಣೆ ಸವಲತ್ತುಗಳನ್ನು ನೀಡುವಂತೆ ಹಾಗೂ ಖಾಯಂ ಮತ್ತು ಸುಭದ್ರ ಕೆಲಸಕ್ಕಾಗಿ ಒತ್ತಾಯಿಸಿ 'ವಿಶ್ವ ಕಾರ್ಮಿಕ ಸಂಘಗಳ ಮಹಾಮಂಡಳ' **(WFTU)** ಜಗತ್ತಿನಾದ್ಯಂತ ಕರೆ ನೀಡಿರುವ 'ಜಾಗತಿಕ ಕಾರ್ಯಾಚರಣೆ ದಿನ'ದ ಅಂಗವಾಗಿ ಅಕ್ಟೋಬರ್ 1 ರಂದು ಡಾ॥ ಬಿ.ಆರ್. ಅಂಬೇಡ್ಕರ ವೃತ್ತದಲ್ಲಿ ನಡೆದ ಮತಪ್ರದರ್ಶನದಲ್ಲಿ ಮಾತನಾಡಿದ ಅವರು ಇವತ್ತಿನ ಸನ್ನಿವೇಶದಲ್ಲಿ ಉದ್ಯೋಗದಲ್ಲಿರುವ ಕಾರ್ಮಿಕರು ನಿರುದ್ಯೋಗಿಗಳ ಜೊತೆ ಹೆಗಲಿಗೆ ಹೆಗಲು ಕೊಟ್ಟು ಹೋರಾಟ ಮಾಡುವದು ಅಗತ್ಯವಾಗಿದೆ ಎಂದರು.

ಮತಪ್ರದರ್ಶನದಲ್ಲಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಮಹೇಶ ಪತ್ತಾರ, ಬಿಎಸ್‌ಎನ್‌ಎಲ್ ನೌಕರರ ಸಂಘದ ಅಧ್ಯಕ್ಷ ಹರೀಶ ದೊಡ್ಡಮನಿ, ರೈತ ಮುಖಂಡ ಬಿ.ಎಸ್.ಸೊಪ್ಪಿನ ಮಾತನಾಡಿದರು.

ಸಿಐಟಿಯು ಜಿಲ್ಲಾಧ್ಯಕ್ಷ ಬಿ.ಐ.ಈಳಿಗೇರ, ವಿಮಾ ನೌಕರರ ಸಂಘಟನೆಯ ಎ.ಎಂ.ಖಾನ, ಉದಯ ಗದಗಕರ್, ಆನಂದ ಅರ್ಚಕ, ಬಿಎಸ್‌ಎನ್‌ಎಲ್ ನೌಕರರ ಸಂಘದ ಕಾರ್ಯದರ್ಶಿ ಶಿವಶಂಕರಪ್ಪ, ಜಿ.ಜಿ.ಪಾಟೀಲ, ಎಸ್‌ಎಫ್‌ಐ ಕಾರ್ಯದರ್ಶಿ ಈರಪ್ಪ ನಾಯ್ಕ, ಡಿವೈಎಫ್‌ಐ ಮುಖಂಡ ಮಾರುತಿ ಅಂಬಿಗೇರ, ಸಮುದಾಯದ ಗಂಗಾಧರ ಗಾಡದ, ಕಾರ್ಮಿಕ ಸಂಘಟನೆಗಳ ಮುಖಂಡರಾದ ಹುಸೇನ ನದಾಫ್, ಹನಮಂತ ಅಂಬಿಗೇರ, ರಾಜು ಕೊಟಗಿ, ಶಿವಾನಂದ ಮಠಪತಿ ಹಾಗೂ ಸಿಐಟಿಯು, ವಿಮಾ ನೌಕರರ ಸಂಘ, ಬಿಎಸ್‌ಎನ್‌ಎಲ್ ನೌಕರರ ಸಂಘಗಳು ಸೇರಿದಂತೆ ವಿವಿಧ ಸಂಘಟನೆಗಳ ಕಾರ್ಯಕರ್ತರು ಮತಪ್ರದರ್ಶನದಲ್ಲಿ ಭಾಗವಹಿಸಿದ್ದರು.

**- ಮಹೇಶ ಪತ್ತಾರ** ■

# ಪಶ್ಚಿಮ ಬಂಗಾಳ: ಜನವಿರೋಧಿ ನೀತಿಗಳ ವಿರುದ್ಧ ಜನಜಾಗೃತಿ
# ೩೦ ಸಾವಿರಕ್ಕೂ ಹೆಚ್ಚು ಹಳ್ಳಿಗಳಲ್ಲಿ ಸಂಚರಿಸಿದ ರೈತ ಜಾಥ



ಅಖಿಲ ಭಾರತ ಕಿಸಾನ್ ಸಭಾದ ಪಶ್ಚಿಮ ಬಂಗಾಳ ಘಟಕವು ರೈತರು ಮತ್ತು ಕೃಷಿ ಕಾರ್ಮಿಕರು ದಿನ ನಿತ್ಯವೂ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಗಮನ ಸೆಳೆಯಲು ಅಕ್ಟೋಬರ್ 15ರಿಂದ 19ರ ವರೆಗೆ ಐದು ದಿನಗಳ ಕಾಲ ರಾಜ್ಯದ 30,000 ಹಳ್ಳಿಗಳನ್ನು ತಲುಪುವ ಗುರಿ ಹೊಂದಿರುವ ಒಂದು ಜಾಥಾ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಜಾಥಾಕ್ಕೆ ಉತ್ಸಾಹಪೂರ್ಣ ಸ್ವಾಗತ ಮತ್ತು ಬೆಂಬಲ ದೊರೆತಿದೆ. ಕೆಂಬಾವುಟದ ಜೊತೆಗೆ ವರ್ಣರಂಜಿತವಾದ ಬ್ಯಾನರ್ಗಳನ್ನು ಹಿಡಿದ ಮೆರವಣಿಗೆ ಬೆಳಗಿನಿಂದ ಸಂಜೆಯವರೆಗೆ ಹೊಲ ಗದ್ದೆಗಳ ನಡುವೆ ಹಳ್ಳಿಯಿಂದ ಹಳ್ಳಿಗೆ ಸಾಗಿದವು. ಜಾಥಾ ಹಳ್ಳಿಯೊಂದನ್ನು ತಲುಪುತ್ತಿದ್ದಂತೆಯೇ ಅಲ್ಲಿನ ಜನ ಘೋಷಣೆಗಳೊಂದಿಗೆ ಅದನ್ನು ಬರಮಾಡಿಕೊಳ್ಳುತ್ತಿದ್ದರು. ಗ್ರಾಮಾಂತರಗಳಲ್ಲಿ ಹದಗೆಡುತ್ತಿರುವ ಆರ್ಥಿಕ-ಸಾಮಾಜಿಕ ಪರಿಸ್ಥಿತಿ ಮತ್ತು ತೃಣಮೂಲ ದುರಾಡಳಿತದ ಬಗ್ಗೆ ಮನಮುಟ್ಟುವಂತಹ ಒಂದು ಚಿಕ್ಕ ಭಾಷಣದ ನಂತರ ಜಾಥ ಇನ್ನೊಂದು ಹಳ್ಳಿಯತ್ತ ಪಯಣಿಸುತ್ತಿತ್ತು.

**ಜಾಥಾ ಮೇಲೆ ಹಲ್ಲೆ**

ಪೂರ್ವ ಮೇದಿನೀಪುರ ಜಿಲ್ಲೆಯ ಸೆಲ್ಮಾಬಾದ್ ಎಂಬ ಹಳ್ಳಿಯ ಬಳಿ ತೃಣಮೂಲ ಪಕ್ಷದ ಗೂಂಡಾಗಳು ಅಕ್ಟೋಬರ್ 18ರಂದು ಜಾಥಾ ಮೇಲೆ ಹಲ್ಲೆ ನಡೆಸಿದರು. ಪಶ್ಚಿಮ ಬಂಗಾಳ ಕಿಸಾನ್ ಸಭಾದ ಸಹ ಕಾರ್ಯದರ್ಶಿ ಹಾಗು ಹಿರಿಯ ಮುಖಂಡ ತರುಣ ರಾಯ್ ಮತ್ತು ಇತರ 40 ಜನರಿಗೆ ಗಾಯಗಳಾಗಿವೆ. ತರುಣ ರಾಯ್ ತಲೆಗೆ ಬಲವಾದ ಪೆಟ್ಟು ಬಿದ್ದಿದ್ದು ಅವರನ್ನು ಮೇದಿನೀಪುರ ಮೆಡಿಕಲ್ ಕಾಲೇಜು ಆಸ್ಪತ್ರೆಗೆ ಸೇರಿಸಲಾಗಿದೆ. ಉಳಿದವರಿಗೆ ಸ್ಥಳೀಯವಾಗಿ ಚಿಕಿತ್ಸೆ ನೀಡಲಾಗಿದೆ. ಪಶ್ಚಿಮ ಬಂಗಾಳ ಕಿಸಾನ್ ಸಭಾ ಈ ಹಲ್ಲೆಯನ್ನು ತೀವ್ರವಾಗಿ ಖಂಡಿಸಿದೆ. ಹಲ್ಲೆಕೋರರನ್ನು ಶಿಕ್ಷಿಸುವಂತೆ ಮತ್ತು ಹಲ್ಲೆಯನ್ನು ಪ್ರತಿಭಟಿಸಿ ರಾಜ್ಯಾದ್ಯಂತ ರ್ಯಾಲಿಗಳು ನಡೆದಿವೆ.

**ತೃಣಮೂಲ ಗೂಂಡಾ ಪಡೆಯನ್ನು ಹಿಮ್ಮೆಟ್ಟಿಸಿದ ಮಹಿಳೆಯರು**

ಜಾಥಾ ಕಾರ್ಯಕ್ರಮದ ಕೊನೆಯ ದಿನ(ಭಾನುವಾರ, ಅಕ್ಟೋಬರ್ 19, 2014) ತಾಮ್ಲುಕ್ ಬಳಿ ಇಕ್ಷುಪತ್ರಿಕಾ ಎಂಬ ಹಳ್ಳಿಯಲ್ಲಿ ಜಾಥಾ ಮೇಲೆ ದಾಳಿ ನಡೆಸಲು ಲಾಠಿ, ದೊಣ್ಣೆ, ಕಂಬಿಗಳು, ಮತ್ತು ಸೈಕಲ್ ಚೈನುಗಳ ಸಮೇತ ಸಜ್ಜಾಗಿ ಬಂದಿದ್ದ ತೃಣಮೂಲ ಬೆಂಬಲಿತ ಗೂಂಡಾಗಳ 30 ಜನರ ಗುಂಪೊಂದು ಮೋಟಾರ್ ಸೈಕಲ್‌ಗಳ ಮೇಲೆ ಬಂದವರು ಇನ್ನೂರು ಮಂದಿಯಷ್ಟಿದ್ದ ಜಾಥಾ ತಂಡದ ಮೇಲೆ ಹಲ್ಲೆ ನಡೆಸಲು ಪ್ರಾರಂಭಿಸಿದರು. ತಮ್ಮ ಮುಖಂಡರ ಮೇಲೆ ನಡೆಯುತ್ತಿದ್ದ ದಾಳಿಯನ್ನು ನೋಡುತ್ತಿದ್ದ ಮಹಿಳೆಯರು ಹತ್ತಿರದಲ್ಲಿದ್ದ ತಮ್ಮ ಮನೆಗಳಿಗೆ ಹೋಗಿ ಪೊರಕೆ ಹಿಡಿದು ಓಡಿ ಬಂದರು. ವಿಷಯ ತಿಳಿದ ಊರಿನ ಇತರ ಮಹಿಳೆಯರು ಸಹ ಪೊರಕೆ ಹಿಡಿದು ಸ್ಥಳಕ್ಕೆ ದೌಡಾಯಿಸಿದರು. ಅವರು ಘೋಷಣೆಗಳನ್ನು ಕೂಗುತ್ತಾ ತಮ್ಮ ಪೊರಕೆ ಸೇವೆ ಆರಂಭಿಸಿದರು. ಆಲ್ಲಿಯವರೆಗೆ ಹತ್ತಿರದಿಂದ ಜಾಥಾ ತಂಡದ ಮೇಲೆ ನಡೆಯುತ್ತಿದ್ದ ದಾಳಿಯನ್ನು ನೋಡುತ್ತಾ ಆನಂದಿಸುತ್ತಿದ್ದ ಪೊಲೀಸರು ಹಲ್ಲೆಕೋರರು ಅಲ್ಲಿಂದ ತಪ್ಪಿಸಿಕೊಳ್ಳಲು ಸಹಾಯವಾಗುವಂತೆ ತಮ್ಮ ಕಾರ್ಯಾಚರಣೆ ಪ್ರಾರಂಭಿಸಿದರು. ಅದನ್ನರಿತ ಮಹಿಳೆಯರು ಕೋಪೋದ್ರಿಕ್ತರಾದರು. ತಕ್ಷಣವೇ ಅವರು ಹಲ್ಲೆಕೋರರು ಮತ್ತು ಪೋಲೀಸರನ್ನು ಸುತ್ತುವರೆದು ರಸ್ತೆಯಲ್ಲೇ ಕುಳಿತು ಘೋಷಣೆ ಕೂಗಲು ಆರಂಭಿಸಿದರು. ಪೋಲೀಸರ ಬೆದರಿಕೆಗೆ ಅವರು ಬಗ್ಗಲೇ ಇಲ್ಲ. ಕಿಸಾನ್ ಸಭಾ ಮುಖಂಡರು ಮತ್ತು ಮಹಿಳೆಯರೊಂದಿಗೆ ಪೋಲೀಸರು ಮಾತುಕತೆ ನಡೆಸಿ, ದಾಳಿಕೋರರಮೇಲೆ ಕಾನೂನು ಕ್ರಮ ಜರುಗಿಸುವುದಾಗಿಯೂ ಮತ್ತು ದಾಳಿಕೋರರಿಗೆ ಗುಟ್ಟಾಗಿ ನೆರವಾಗಿದ್ದ ಒಬ್ಬ ಪೋಲೀಸನ ಮೇಲೆ ಶಿಸ್ತು ಕ್ರಮ ಜರುಗಿಸುವುದಾಗಿಯೂ ಭರವಸೆಕೊಟ್ಟ ನಂತರ ಸುತ್ತುವರಿಕೆಯನ್ನು ಹಿಂತೆದುಕೊಂಡರು. ಜಾಥಾ ಪಶ್ಚಿಮ ಬಂಗಾಳದ 30 ಸಾವಿರಕ್ಕೂ ಹೆಚ್ಚಿನ ಹಳ್ಳಿಗಳಲ್ಲಿ ಸಂಚರಿಸಿದೆ. ಜಾಥಾ ಯಶಸ್ವಿಯಾಗಲು ಶ್ರಮಿಸಿದ ಎಲ್ಲರಿಗೂ ಪಶ್ಚಿಮ ಬಂಗಾಳ ಕಿಸಾನ್ ಸಭಾ ಅಭಿನಂದನೆ ಸಲ್ಲಿಸಿದೆ. ●

# ಕೋಮುವಾದದ ವಿರುದ್ಧ 17 ಎಡಪಕ್ಷಗಳ ಸಮಾವೇಶ



ಕೇಂದ್ರದಲ್ಲಿ ಸಂಘಪರಿವಾರದ ನಿಯಂತ್ರಣದಲ್ಲಿ ಬಿಜೆಪಿ ನೇತೃತ್ವದ ಸರಕಾರವೊಂದು ಅಧಿಕಾರವನ್ನು ಹಿಡಿದಿದೆ. ಕೋಮುವಾದಿ ಸಂಘಟನೆಗಳು, ಶಕ್ತಿಗಳು ಜನರ ಮನಸ್ಸಿನಲ್ಲಿ ಭ್ರಮೆಗಳನ್ನು ಮೂಡಿಸುತ್ತಾ, ಅವರನ್ನು ದಾರಿತಪ್ಪಿಸುವ ವಂಚಕ ರಾಜಕೀಯವನ್ನು ತೀವ್ರಗೊಳಿಸಿವೆ. ಅನ್ನ, ಬಟ್ಟೆ ಮುಂತಾದ ಜನರ ಬದುಕಿನ ಜ್ವಲಂತ ಪ್ರಶ್ನೆಗಳನ್ನು ಮೂಲೆಗುಂಪು ಮಾಡುತ್ತಾ ಸುಲಿಗೆಕೋರ ಆಳುವ ವರ್ಗಗಳ ಪರವಾದ ಅಜೆಂಡಾಗಳನ್ನು ಮುಂದೆ ತರುತ್ತಿವೆ. ಜನಪರ ಚಳುವಳಿಗಳನ್ನು ತುಳಿಯುವ ಉದ್ದೇಶ ಎದ್ದು ಕಾಣುತ್ತಿದೆ. ಜನರ ಐಕ್ಯತೆಯನ್ನು ನಾಶಗೊಳಿಸಿ ಜನಸಮೂಹಗಳನ್ನು ವಿಭಜಿಸುವ ಸಂಚುಗಳು ರೂಪತಳೆಯುತ್ತಿವೆ. ಎತ್ತ ನೋಡಿದರೂ ಕೋಮುವಾದ ದೇಶದ ಶತ್ರುವಾಗಿ ಮತ್ತೊಮ್ಮೆ ಹೆಡೆ ಎತ್ತುವ ಅಪಾಯಕಾರಿ ಲಕ್ಷಣ ಕಂಡು ಬರತೊಡಗಿವೆ.


ರಾಷ್ಟ್ರ ರಾಜಕಾರಣದಲ್ಲಿ ಬಲಪಂಥೀಯ ಶಕ್ತಿಗಳು ಆರಂಭಿಸಿರುವ ಅನೇಕ ಅಪಾಯಕಾರಿ ಆಯಾಮಗಳನ್ನುಳ್ಳ ಈ ದಾಳಿಯನ್ನು ಹಿಮ್ಮೆಟ್ಟಿಸಲು ಎಡಶಕ್ತಿಗಳ ವಿಶಾಲ ಐಕ್ಯತೆ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಎಡಪಕ್ಷಗಳು ಒಗ್ಗಟ್ಟಿನ ಪ್ರಯತ್ನವೊಂದನ್ನು ಆರಂಭಿಸಿವೆ. ನವೆಂಬರ್ ಎರಡನೇ ವಾರದಲ್ಲಿ ದೇಶದ 17 ಎಡಪಕ್ಷಗಳ ಒಂದು ಜಂಟಿ ಸಮಾವೇಶವನ್ನು ದಿಲ್ಲಿಯಲ್ಲಿ ಹಮ್ಮಿಕೊಳ್ಳಲಾಗಿದೆ.

ಇತ್ತೀಚೆಗೆ ಸಿಪಿಐ(ಎಂ), ಸಿಪಿಐ, ಫಾರ್ವರ್ಡ್ ಬ್ಲಾಕ್, ಆರ್‌ಎಸ್‌ಪಿ, ಎಸ್‌ಯುಸಿಐ(ಸಿ), ಸಿಪಿಐ(ಎಂ.ಎಲ್.), ಸಿಪಿಐ(ಎಂ.ಎಲ್-ಲಿಬರೇಷನ್) ಮುಂತಾದ ಒಟ್ಟು ಹದಿನೇಳು ಎಡಪಕ್ಷಗಳು ಕೋಲ್ಕತ್ತದ ಸಿಪಿಐ(ಎಂ) ಕಛೇರಿಯಲ್ಲಿ ಸಭೆ ಸೇರಿ ಈ ಬಗ್ಗೆ ತೀರ್ಮಾನ ತೆಗೆದುಕೊಂಡವು. ಈ ಸಭೆಯಲ್ಲಿ ತೆಗೆದುಕೊಂಡಿರುವ ತೀರ್ಮಾನವನ್ನು ತದನಂತರ ಪಶ್ಚಿಮ ಬಂಗಾಳ ಎಡರಂಗದ ಅಧ್ಯಕ್ಷರಾದ ಬಿಮನ್ ಬಸು ಪತ್ರಿಕಾ ಗೋಷ್ಠಿಯಲ್ಲಿ ಪ್ರಕಟಿಸಿದರು. ಕೋಮುವಾದದ ವಿರುದ್ಧ ಮುಖಾಮುಖಿ ಸೆಣೆಸಿರುವ ಮತ್ತು ಕೋಮುಸೌಹಾರ್ದತೆ ಕಾಪಾಡಿರುವ ಚರಿತ್ರೆ ಇರುವ ಎಡಪಕ್ಷಗಳು ಒಟ್ಟಾಗಿ ಎದುರಿಸಬೇಕಾಗಿರುವ ಸನ್ನಿವೇಶವನ್ನು ಅವರು ವಿವರಿಸಿದರು.

ಬಹುಸಂಖ್ಯಾತ ಕೋಮುವಾದಿಗಳ ಅಟ್ಟಹಾಸ ಹೆಚ್ಚುತ್ತಿರುವ ಕಾರಣದ ಮೇಲೆ ಅಲ್ಪಸಂಖ್ಯಾತ ಕೋಮುವಾದಿಗಳೂ ತಮ್ಮ ಕೋಮುವಾದಿ ಚಟುವಟಿಕೆ ನಡೆಸುತ್ತಿವೆ. ಅಧಿಕಾರದಲ್ಲಿರುವ ಬಿಜೆಪಿ ಕೋಮುವಾದಿ ರಾಜ-ಕಾರಣ ಮಾಡುತ್ತಿದೆ. ಆರ್‌ಎಸ್‌ಎಸ್ ಈ ಪಕ್ಷದ ಬೆನ್ನೆಲುಬಾಗಿದ್ದು ಅದು ಅಲ್ಪಸಂಖ್ಯಾತರನ್ನು ಅಭದ್ರತೆಗೆ ಈಡುಮಾಡುವಂತಹ ಚಟುವಟಿಕೆ ನಡೆಸುತ್ತಿದೆ. ಒಂದು ಅಲ್ಪಸಂಖ್ಯಾತ ಸಮುದಾಯವನ್ನು ಭಯೋತ್ಪಾದಕ-ರೆಂದು ಬಿಂಬಿಸುತ್ತಿದೆ. ಇಡೀ ಸಮುದಾಯವನ್ನು ಭಯೋತ್ಪಾದಕ-ರೆಂದು ಗುರುತಿಸುವುದನ್ನು ಮತ್ತು ಎಲ್ಲ ರೀತಿಯ ಭಯೋತ್ಪಾದನೆಯನ್ನು ಎಡಪಕ್ಷಗಳು ಮುಲಾಜಿಲ್ಲದೆ ವಿರೋಧಿಸುತ್ತವೆ.

ತೀವ್ರವಾದಿ ಬಲಪಂಥೀಯ ಶಕ್ತಿಗಳು ಭಾಷೆ ಮತ್ತು ಧರ್ಮದ ಆಧಾರದ ಮೇಲೆ ಜನರನ್ನು ವಿಭಜಿಸಲು ಪ್ರಯತ್ನ ಪಡುತ್ತಿವೆ. ತೃಣಮೂಲ ಪಕ್ಷವೂ ಕೋಮು ಧೃವೀಕರಣದಲ್ಲಿ ತೊಡಗಿದೆ. ಇದು ಅನಿರೀಕ್ಷಿತವೇನಲ್ಲ. ಏಕೆಂದರೆ, ಆರ್ಥಿಕ ನೀತಿಗಳ ದುಷ್ಪರಿಣಾಮಗಳ ವಿರುದ್ಧ ಜನರು ತಿರುಗಿ ಬೀಳದಂತೆ ತಡೆಯಲು ಜನರ ಐಕ್ಯತೆ ಮುರಿಯುವುದೊಂದೇ ಅವರಿಗಿರುವ ದಾರಿ. ಇದೊಂದು ಬಲು ಅಪಾಯಕಾರಿ ಪ್ರವೃತ್ತಿ. ಆದ್ದ-ರಿಂದ ಎಡಪಕ್ಷಗಳು ಒಟ್ಟಾಗಿ ಕೋಮುವಾದದ ವಿರುದ್ಧ ಹೋರಾಟ ನಡೆಸುವುದು ಅನಿವಾರ್ಯ ಮತ್ತು ಐತಿಹಾಸಿಕ ಅವಶ್ಯಕತೆ ಕೂಡ ಎಂದು ಅವರು ವಿವರಿಸಿದರು. ●

# ಶ್ರಮೇವ ಜಯತೆ ಕಾರ್ಯಕ್ರಮ: ಶ್ರಮಿಕರ ಹಕ್ಕುಗಳನ್ನು ಕಸಿದು ಹೂಡಿಕೆದಾರರಿಗೆ ಉಡುಗೊರೆ




ಪ್ರಧಾನ ಮಂತ್ರಿಗಳು ಬಹಳಷ್ಟು ಸದ್ದು ಗದ್ದಲಗಳೊಂದಿಗೆ ಆರಂಭಿಸಿರುವ 'ಶ್ರಮೇವ ಜಯತೆ ಕಾರ್ಯಕ್ರಮ'ದಲ್ಲಿ ಶ್ರಮಿಕರಿಗೆ ಏನೂ ಕೊಟ್ಟಿಲ್ಲ, ಬದಲಿಗೆ ಅವರಿಂದ ಕಿತ್ತುಕೊಂಡಿರುವುದೇ ಹೆಚ್ಚು. ತೋರಿಕೆಗೊಂದು 'ನೌಕರರ ಭವಿಷ್ಯನಿಧಿ ಚಂದಾದಾರರಿಗೆ ಸಾರ್ವತ್ರಿಕ ಖಾತೆ ಸಂಖ್ಯೆ' ಎಂಬುದನ್ನು ಜಾರಿ ಮಾಡಲಾಗಿದೆ. ವಾಸ್ತವವಾಗಿ ಇದೂ ಈ ಹಿಂದೆಯೇ ಬಹಳಷ್ಟು ದೀರ್ಘ ಪ್ರಕ್ರಿಯೆಯ ನಂತರ ರೂಪಿಸಿರುವ ಕ್ರಮ, ಅದನ್ನು ಈಗ ತನ್ನದೇ ಹೊಸ ಸೃಷ್ಟಿ ಎಂಬಂತೆ ಪೋಸು ಕೊಡುತ್ತ ಜಾರಿ ಮಾಡಲಾಗುತ್ತಿದೆ.

ಸಿಐಟಿಯು ಅಧ್ಯಕ್ಷ ಎ.ಕೆ.ಪದ್ಮನಾಭನ್ ಹೇಳಿರುವಂತೆ ಕೇಂದ್ರ ಸರಕಾರ ಜನಗಳನ್ನು ಮರುಳು ಮಾಡುವ ಕಲೆಯನ್ನು ಕರಗತ ಮಾಡಿಕೊಂಡಿದೆ. ನುಡಿದಂತೆ ನಡೆಯಿಲ್ಲ, ಬದಲಿಗೆ ವಿರುದ್ಧ ದಿಕ್ಕಿನಲ್ಲಿರುತ್ತದೆ. ಸರಕಾರದ ಈ ಕಾರ್ಯಕ್ರಮದ ವರ್ಣರಂಜಿತ ಫೋಟೋಗಳು ಇದನ್ನು ಮತ್ತೊಮ್ಮೆ ದೃಢಪಡಿಸಿವೆ. ಇದೊಂದು ದೇಶದ ದುಡಿಯುವ ಜನಗಳಿಗಾಗಿ ತಂದಿರುವ ಮಹತ್ವದ ಕಾರ್ಯಕ್ರಮ. ಇದರಲ್ಲಿ ಮಾಡಿರುವ ಪ್ರಕಟನೆಗಳು ಕಾರ್ಮಿಕರಿಗೆ ನೀಡಿರುವ ಉಡುಗೊರೆಗಳು ಎಂದು ಸರಕಾರದ ವಕ್ತಾರರು ಬಡಾಯಿ ಕೊಚ್ಚಿಕೊಳ್ಳುತ್ತಿರುವಾಗಲೇ ಕಾರ್ಪೊರೇಟ್ ಮಾಧ್ಯಮಗಳು ಇದನ್ನು ಹಾಡಿ ಹೊಗಳುತ್ತಿವೆ. ಅದು ಶ್ರಮಿಕರಿಗೆ ಏನಾದರೂ ಕೊಟ್ಟಿದೆಯೆಂದಲ್ಲ, ಮಾಲಕರಿಗೆ 'ಇನ್ಸ್‌ಪೆಕ್ಟರ್ ರಾಜ್ಯಭಾರ'ದಿಂದ ಮುಕ್ತಿ ಕೊಟ್ಟಿದೆಯೆಂದು!

ವಾಸ್ತವವಾಗಿ ಇದು ಪಿಎಫ್, ಇಎಸ್ಐ, ಗಣಿ ಸುರಕ್ಷಿತತೆ, ಕಾರ್ಮಿಕ ಕಲ್ಯಾಣ ಮುಂತಾದ ಕಾರ್ಮಿಕರ ರಕ್ಷಣೆಗಾಗಿ ರೂಪಿಸಿದ ಸಂಸ್ಥೆಗಳ, ಸ್ವತಃ ಮುಖ್ಯ ಕಾರ್ಮಿಕ ಆಯುಕ್ತರ ಕಚೇರಿಯ ಚಟುವಟಿಕೆಗಳನ್ನು ನಿಷೇಧಿಸುವ ಕ್ರಮವೆಂದೇ ಹೇಳಬೇಕಾಗುತ್ತದೆ ಎನ್ನುತ್ತಾರೆ ಸಿಐಟಿಯು ಅಧ್ಯಕ್ಷರು. ಈ 16 ಕಾರ್ಮಿಕ ಕಾನೂನುಗಳಿಗೆ ಸಂಬಂಧಪಟ್ಟಂತೆ ಮಾಲಕರುಗಳು ಅಂತರ್ಜಾಲದ ಮೂಲಕ ವರದಿ ಸಲ್ಲಿಸಿ, ತಾವು ಈ ಕಾನೂನುಗಳನ್ನು ಪಾಲಿಸುತ್ತಿರುವುದಾಗಿ ತಾವೇ ಪ್ರಮಾಣ ಪತ್ರ ಕೊಟ್ಟುಕೊಳ್ಳಲು ಈಗ ಅವಕಾಶ ನೀಡಲಾಗಿದೆ. ಈಗ ಈ ಕಾನೂನುಗಳ ಪರಿಪಾಲನೆಯ ತನಿಖೆಯ ವ್ಯವಸ್ಥೆ ಇರುವಾಗಲೇ ಬಹುಪಾಲು ಕಾರ್ಮಿಕರಿಗೆ ಈ ಕಾನೂನುಗಳ ರಕ್ಷಣೆ ಲಭ್ಯವಾಗಿಲ್ಲ. ಇನ್ನು ಮಾಲಕರಿಗೆ ಇಂತಹ ಅವಕಾಶಗಳನ್ನು ಕೊಟ್ಟ ಮೇಲೆ ಪರಿಸ್ಥಿತಿ ಇನ್ನಷ್ಟು ಹದಗೆಡಬಹುದಷ್ಟೇ ಎನ್ನುತ್ತಾರೆ ಅವರು. ಬಹುಶಃ ಇದರ ಬಗ್ಗೆ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ ಎಂದು ಈ 'ಒಳ್ಳೆಯ ದಿನಗಳ' ಸರಕಾರದ ಯೋಚನೆಯಿರಬೇಕು.

ವೃತ್ತಿ ತರಬೇತಿ ಮತ್ತು ಅಪ್ರೆಂಟಿಸ್ ಯೋಜನೆಯೂ ಹೊಸದೇನಲ್ಲ. ಅದು ಆಗಲೇ ಆರಂಭವಾಗಿದೆ, ಜಾರಿಯಾಗಿಲ್ಲವಷ್ಟೇ. ಇದೇ ರೀತಿ 'ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನಾ' ಕೂಡ. ಅದನ್ನು ಪುನರ್ರೂಪಿಸಲಾಗುತ್ತದೆ ಎನ್ನಲಾಗಿದೆ, ಹೇಗೆ ಎಂದು ಗೊತ್ತಿಲ್ಲ.

**ಕಾರ್ಮಿಕರಿಗಾಗಿ ಎನ್ನುವ ಕ್ರಮಕ್ಕೆ ಮಾಲಕರಿಂದ ಅಭಿನಂದನೆಗಳು!**

ಒಟ್ಟಿನಲ್ಲಿ ಈ ಇಡೀ ಕಸರತ್ತು ಕೇವಲ ಮೋಸವಷ್ಟೇ ಎಂಬುದು ಸ್ಪಷ್ಟ ಎನ್ನುತ್ತಾರೆ ಸಿಐಟಿಯು ಮತ್ತು ಇತರ ಕೇಂದ್ರ ಕಾರ್ಮಿಕ ಸಂಘಟನೆಗಳ ಮುಖಂಡರು. ಮುಖ್ಯ ಗುರಿ ಹೂಡಿಕೆದಾರರನ್ನು, ದೇಶೀ ಮತ್ತು ಬಹುರಾಷ್ಟ್ರೀಯ ಹೂಡಿಕೆದಾರರನ್ನು ಸಂತುಷ್ಟಗೊಳಿಸುವ ಕಾರ್ಯಕ್ರಮ ಇದು ಎನ್ನುತ್ತಾರೆ ಎ.ಕೆ.ಪದ್ಮನಾಭನ್. ಇದು ಹೂಡಿಕೆದಾರರಿಗೆ 'ಕೆಂಪು ಹಾಸಿನ ಸ್ವಾಗತ' ದ ಮತ್ತು 'ಭಾರತದಲ್ಲಿ ಮಾಡಲು' ನೀಡಿರುವ ಅವರ ಆಹ್ವಾನದ ಮುಂದುವರಿಕೆಯಷ್ಟೇ. 'ಶ್ರಮಿಕರ ಜಯ'ದ ಅಥವ ಅವರ ಸಾಮಾಜಿಕ ಸುಭದ್ರತೆಯ ಪ್ರಶ್ನೆಯೇ ಇಲ್ಲಿ ಇಲ್ಲ.

'ಶ್ರಮಿಕ'ರಿಗೆ ಎಂದಿರುವ ಈ ಕಾರ್ಯಕ್ರಮದಿಂದ ಕಾರ್ಪೊರೇಟ್ ಮಾಧ್ಯಮಗಳು ಮತ್ತು ಮಾಲಕರ ಸಂಘಗಳು ಅಭಿನಂದನೆ ಸಲ್ಲಿಸುತ್ತಿದ್ದರೆ, ಸ್ವತಃ ಶ್ರಮಿಕರ ಸಂಘಟನೆಗಳು, ಅದರಲ್ಲೂ ಸಂಘಪರಿವಾರಕ್ಕೆ ಸೇರಿದ ಸಂಘಟನೆ ಕೂಡ ಗಂಭೀರ ಆತಂಕ ಮತ್ತು ಸಂದೇಹಗಳನ್ನು ವ್ಯಕ್ತಪಡಿಸಿವೆ ಎಂಬುದು ವಿರೋಧಾಭಾಸವಾಗಿ ಕಂಡರೂ, ಇದರಲ್ಲಿ ಆಶ್ಚರ್ಯವೇನಿಲ್ಲ, ಏಕೆಂದರೆ 'ಶ್ರಮೇವ ಜಯತೇ' ಎಂಬುದು ತದ್ವಿರುದ್ಧ ಆಶಯಗಳ ಕಂತೆಯೇ ಆಗಿದೆ. ಪ್ಯಾಕೇಜಿಂಗ್‌ನ ಕಸರತ್ತು.

**ಪ್ರಧಾನ ಮಂತ್ರಿಗಳು ಇದನ್ನು ಉದ್ಘಾಟಿಸುತ್ತ ಎಂದಿನ ಮಾತಿನ ಅಬ್ಬರದಲ್ಲಿ 'ಶ್ರಮೇವ ಜಯತೇ' ಎಂಬುದು 'ಸತ್ಯಮೇವ ಜಯತೆ' ಎಂಬ ನಮ್ಮ ಪ್ರಜಾಪ್ರಭುತ್ವದ ಘೋಷವಾಕ್ಯದಷ್ಟೇ ಮಹತ್ವದ್ದು ಎಂದರು, ಕಾರ್ಮಿಕರು ಎಂದರೆ 'ಶ್ರಮಯೋಗಿಗಳು' ,'ರಾಷ್ಟ್ರಯೋಗಿಗಳು' , 'ರಾಷ್ಟ್ರ ನಿರ್ಮಾತೃ'ಗಳು ಎಂದೆಲ್ಲ ಹಾಡಿ ಹೊಗಳಿದರು. ಆದರೆ ದೇಶದ ಸಮಸ್ತ ಕಾರ್ಮಿಕ ಆಂದೋಲನ ಮತ್ತೆ-ಮತ್ತೆ ಎತ್ತುತ್ತ ಬಂದಿರುವ ಯಾವುದೇ ಪ್ರಶ್ನೆಯ ಬಗ್ಗೆ ಚಕಾರವೆತ್ತಲಿಲ್ಲ.** ಆದ್ದರಿಂದ ಇವೆಲ್ಲ ಕಾರ್ಮಿಕರನ್ನು ಮತ್ತು ಜನತೆಯನ್ನು ಮರುಳು ಮಾಡುವ, ಅವರಿಗೆ ಮೋಸಮಾಡುವ ಬಣ್ಣದ ಮಾತುಗಳು ಎಂದು ಕಾರ್ಮಿಕ ಮುಖಂಡರು ಹೇಳಿದ್ದಾರೆ.

**ತ್ರಿಪಕ್ಷೀಯ ವಿಧಾನಕ್ಕೆ ತಿಲಾಂಜಲಿಯೇಕೆ?**

ಈ ಕಾರ್ಯಕ್ರಮ ನಿಜವಾಗಿ ಬಂದಿರುವುದು ಬಿಜೆಪಿಯ ರಾಜಸ್ತಾನ ಮತ್ತು ಮಧ್ಯಪ್ರದೇಶದ ರಾಜ್ಯ ಸರಕಾರಗಳು ಕಾರ್ಮಿಕ-ವಿರೋಧಿಯಾಗಿರುವ ಕಾನೂನು ತಿದ್ದುಪಡಿಗಳನ್ನು ತಂದು ಕಾರ್ಮಿಕರ ಹಕ್ಕುಗಳ ಮೇಲೆ ದಾಳಿಗಳನ್ನು ಆರಂಭಿಸಿ ಕಾರ್ಮಿಕ ಸಂಘಟನೆಗಳ ಪ್ರತಿಭಟನೆಗಳಿಗೆ ಗುರಿಯಾಗಿರುವ ಹಿನ್ನೆಲೆಯಲ್ಲಿ ಮತ್ತು 'ಮೇಕ್ ಇನ್ ಇಂಡಿಯಾ'ದ ಘೋಷಣೆಯೊಂದಿಗೆ 'ಕಾರ್ಮಿಕ ಸುಧಾರಣೆ'ಗಳ ಮಾತುಗಳನ್ನು ತಳಕು ಹಾಕಿರುವ ಹಿನ್ನೆಲೆಯಲ್ಲಿ.

ಇಂತಹ ಕಾರ್ಮಿಕರ ಬದುಕಿನ ಮೇಲೆ ನೇರವಾಗಿ ಪರಿಣಾಮ ಬೀರುವ ಕ್ರಮಗಳನ್ನು ಪ್ರಕಟಿಸುವ ಮೊದಲು ಸಂಬಂಧಪಟ್ಟವರೊಂದಿಗೆ ಸಮಾಲೋಚಿಸಬೇಕೆಂಬುದು ನಮ್ಮ ಪ್ರಜಾಪ್ರಭುತ್ವ ವಿಧಿಸಿರುವ ಪದ್ಧತಿ. ಆದರೆ ಈ 'ಒಳ್ಳೆಯ ದಿನಗಳ' ಸರಕಾರ ಅಂತಹ ತ್ರಿಪಕ್ಷೀಯ ಸಮಾಲೋಚನೆಯ ವಿಧಾನಕ್ಕೇ ತಿಲಾಂಜಲಿ ನೀಡಿ ಏಕಪಕ್ಷೀಯವಾಗಿ ನಡೆದುಕೊಳ್ಳುತ್ತಿದೆ ಎನ್ನುತ್ತಾರೆ ಸಿಐಟಿಯು ಅಧ್ಯಕ್ಷ ಕಾಂ. ಪದ್ಮನಾಭನ್ ಅವರು.

ಇಂಡಿಯನ್ ಲೇಬರ್ ಕಾನ್ಫರೆನ್ಸ್(ಐಎಲ್‌ಸಿ) ಎಂಬ ಒಂದು ತ್ರಿಪಕ್ಷೀಯ ವ್ಯವಸ್ಥೆ ದೇಶದಲ್ಲಿ ಕಾರ್ಮಿಕ ರಂಗದಲ್ಲಿ ಇದೆ. ಅದು ಸರಕಾರ, ಕಾರ್ಮಿಕರು ಮತ್ತು ಮಾಲಕರ ತ್ರಿಪಕ್ಷೀಯ ಸಮಾಲೋಚನೆಗಳ ನಂತರ ನಿರ್ಣಯಗಳನ್ನು ಶಿಫಾರಸು ಮಾಡುತ್ತದೆ. ಇಂತಹ ಕೆಲವು ಒಮ್ಮತದ ನಿರ್ಣಯಗಳು ಸರಕಾರದ ಮುಂದಿವೆ. ಸರಕಾರೀ ಕೆಲಸಕ್ಕೆ ಚುರುಕು ಮುಟ್ಟಿಸುವವರು ಎಂದು ಹೆಸರು ಗಳಿಸಿಕೊಂಡ ನಮ್ಮ ಹೊಸ ಪ್ರಧಾನ ಮಂತ್ರಿಗಳು ಈ ಒಮ್ಮತದ ತ್ರಿಪಕ್ಷೀಯ ನಿರ್ಣಯಗಳ ಬಗ್ಗೆ ಏಕೆ ಏನೂ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ ಎಂದು ಕಾರ್ಮಿಕ ಮುಖಂಡರು ಪ್ರಶ್ನಿಸಿದ್ದಾರೆ. ಕೆಲವು ತ್ರಿಪಕ್ಷೀಯ ಸಮಿತಿಗಳನ್ನು ಯಾವುದೇ ಕಾರಣ ಕೊಡದೆ ವಿಸರ್ಜಿಸಿರುವುದು ಏಕೆ ಎಂದೂ ಅವರು ಕೇಳುತ್ತಿದ್ದಾರೆ.

**ತಿದ್ದುಪಡಿಗಳ ಭರಾಟೆಯಲ್ಲೂ ಕಾಂಟ್ರಾಕ್ಟ್ ಲೇಬರ್ ಕಾಯ್ದೆ ತಿದ್ದುಪಡಿಯೇಕೆ ಧೂಳು ತಿನ್ನುತ್ತಿದೆ?**

ಸರಕಾರ ನಿಜಕ್ಕೂ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡಿ ಕಾರ್ಮಿಕರಿಗೆ ನೆರವಾಗಬೇಕು ಎಂದು ಬಯಸುವುದಾದರೆ ಪ್ರಧಾನ ಮಂತ್ರಿಗಳ ಕಚೇರಿಯಲ್ಲಿ ಕಳೆದ ನಾಲ್ಕುವರ್ಷಗಳಿಂದ ಒಂದು ಕಡತ ಧೂಳು ತಿನ್ನುತ್ತ ಬಿದ್ದಿದೆ. ಅದರ ಧೂಳು ತೆಗೆಯುವ ಕೆಲಸವನ್ನಾದರೂ ಮಾಡಬೇಕಿತ್ತು ಎನ್ನುತ್ತಾರೆ ಸಿಐಟಿಯು ಅಧ್ಯಕ್ಷರು. ಇದು ಕಾಂಟ್ರಾಕ್ಟ್ ಲೇಬರ್(ನಿಯಂತ್ರಣ ಮತ್ತು ನಿರ್ಮೂಲನೆ) ಕಾನೂನಿಗೆ ತಿದ್ದುಪಡಿಯನ್ನು ಸೂಚಿಸಿರುವ ಕಡತ. ಭಾರತ ಸರಕಾರದ ಕಾರ್ಮಿಕ ಇಲಾಖೆಯೇ ಐಎಲ್‌ಸಿ ತ್ರಿಪಕ್ಷೀಯ ಸಮಾಲೋಚನೆಗಳ ಮೂಲಕ ಕೈಗೊಂಡಿರುವ ತೀರ್ಮಾನಗಳ ಆಧಾರದಲ್ಲಿ ಸೂಚಿಸಿರುವ ತಿದ್ದುಪಡಿಗಳು ಇವು. 'ಸಮಾನ ಕೆಲಸಕ್ಕೆ ಸಮಾನ ಸಂಬಳ' ಎನ್ನುವ ನ್ಯಾಯಸಮ್ಮತ ನಿಲುವಿನ ಆಧಾರದಲ್ಲಿ ರೂಪಿಸಿರುವ ಈ ತಿದ್ದುಪಡಿಗೆ ಯಾರ ಆಕ್ಷೇಪವೂ ಇರಲು ಸಾಧ್ಯವಿಲ್ಲ. ಈ ಬಾರಿ ಕಾಂಗ್ರೆಸ್ ಸರಕಾರದ ವಿರುದ್ಧ ಜನತೆ ಇತ್ತೀಚೆಗೆ ತೀರ್ಪು ನೀಡಿರುವ ಹರ್ಯಾಣದ ಮಾನೇಸರದಲ್ಲಿರುವ ಮಾರುತಿ ಸುಝುಕಿ ಕಂಪನಿಯಲ್ಲಿನ ಘಟನೆಗಳ ಹಿನ್ನೆಲೆಯಲ್ಲಿ ಕಾರ್ಪೊರೇಟ್ ಮಾಧ್ಯಮಗಳು ಕೂಡ ಇಂತಹ ಶೋಷಣೆಯ ವಿರುದ್ಧ ಸಂಪಾದಕೀಯಗಳನ್ನು ಬರೆದಿವೆ ಎನ್ನುವ ಸಂಗತಿಯತ್ತ ಕಾಂ. ಪದ್ಮನಾಭನ್ ಗಮನ ಸೆಳೆಯುತಾರೆ.

ಇಂತಹ ಕಾಂಟ್ರಾಕ್ಟೀಕರಣದ ಮೂಲಕ ಶೋಷಣೆ ನಡೆಸುವಲ್ಲಿ ಸಾರ್ವಜನಿಕ ವಲಯದ ಕಂಪನಿಗಳು ಮತ್ತು ಖಾಸಗಿ ವಲಯದ ಕಂಪನಿಗಳು ಸ್ಪರ್ಧೆಗಿಳಿದಿರುವಂತೆ ಕಾಣುತ್ತದೆ. ಇಂತಹ ನಗ್ನ ಶೋಷಣೆ ನಡೆಯುತ್ತಿರುವಾಗ ಸರಕಾರ ಮತ್ತು ಅವರ ಭಟ್ಟಂಗಿಗಳು ಕಾರ್ಮಿಕ ಕಾನೂನುಗಳು ಹೂಡಿಕೆಗಳಿಗೆ ಅಡ್ಡಿ ಎಂದು ಅರಚಿಕೊಳ್ಳುವುದು ನ್ಯಾಯ ಎಂಬುದು ಕಾರ್ಮಿಕ ಮುಖಂಡರು ಕೇಳುವ ಪ್ರಶ್ನೆ.

'ಶ್ರಮೇವ ಜಯತೆ' ಎನ್ನುವ ಸರಕಾರ ಇಂತಹ ವಿಷಯಗಳಲ್ಲಿ ಇನ್ನೂ ಉಗ್ರ ನಿಲುವು ತಳೆಯುತ್ತಿದೆ. ದೇಶದ ಬಹುಪಾಲು ಕಾರ್ಮಿಕರನ್ನು, ನೌಕರರನ್ನು ಕಾರ್ಮಿಕ ಕಾನೂನುಗಳ ವ್ಯಾಪ್ತಿಯಿಂದ ಹೊರಹಾಕುವ ತಿದ್ದುಪಡಿಗಳನ್ನಷ್ಟೇ ತರುತ್ತಿದೆ. ಈಗಿರುವ ಮಾಲಕರ ಮತ್ತು ಮುಂದೆ ಹೂಡಿಕೆ ಮಾಡಬಹುದಾದವರ ಎಲ್ಲ ಬೇಡಿಕೆಗಳನ್ನು ಈಡೇರಿಸಲು ಈ ಸರಕಾರ ಕಟಿಬದ್ಧವಾಗಿದೆ ಎಂಬುದು ಸ್ವಯಂವೇದ್ಯ ಎನ್ನುತ್ತಾರೆ ಕಾಂ. ಎ.ಕೆ.ಪದ್ಮನಾಭನ್.

ಪ್ರಜಾಪ್ರಭುತ್ವ ಎಂದು ಹೇಳಿಕೊಳ್ಳುವ ನಮ್ಮ ದೇಶದಲ್ಲಿ ಸಂಘಟನೆಯ ಮತ್ತು ಸಾಮೂಹಿಕ ಚೌಕಾಸಿಯ ಹಕ್ಕೂ ಇಲ್ಲದಿರುವಾಗ 'ಶ್ರಮೇವ ಜಯತೆ' ಎಂಬಂತಹ ಕಾರ್ಯಕ್ರಮಗಳು ಮಂಕುಬೂದಿ ಎರಚುವ ಪ್ರಯತ್ನಗಳೆಂದು ಇನ್ನೇನು ಹೇಳಲು ಸಾಧ್ಯ? ಕಾರ್ಮಿಕ ಸಂಘಕ್ಕೆ ಗುಪ್ತಮತದಾನದ ಮೂಲಕ ಮಾನ್ಯತೆ ನೀಡುವ ಒಂದು ಕಾನೂನು ಇಲ್ಲದಿರುವಾಗ ಹಲವಾರು ಓಬೀರಾಯನ ಕಾಲದ ಕಾನೂನುಗಳನ್ನು ರದ್ದು ಮಾಡುವ ಕೂಗಿಗೆ ಏನರ್ಥವಿದೆ?

ಇವೆಲ್ಲ ಪ್ರಶ್ನೆಗಳನ್ನು ಎತ್ತಬೇಕಾಗಿದೆ, ಅವಕ್ಕೆ ಉತ್ತರಗಳನ್ನು ಕಂಡುಕೊಳ್ಳಬೇಕಾಗಿದೆ ಎಂದು ಸಿಐಟಿಯು ಅಧ್ಯಕ್ಷ ಎ.ಕೆ.ಪದ್ಮನಾಭನ್ ಈ ಹಿನ್ನೆಲೆಯಲ್ಲಿ ಆಗ್ರಹಿಸುತ್ತಾರೆ.

ಈ ಕಾರ್ಯಕ್ರಮ ಒಟ್ಟಾಗಿ ಬಣ್ಣದ ಬಡಾಯಿ, ಕಾರ್ಮಿಕರ ಹಕ್ಕುಗಳ ಮೇಲಿನ ದಾಳಿ ಎಂದು ದೇಶದ ಒಟ್ಟು ಕಾರ್ಮಿಕ ಆಂದೋಲನ ಪ್ರತಿಭಟಿಸಿದೆ. ಈಗಾಗಲೇ ಕೇಂದ್ರ ಕಾರ್ಮಿಕ ಸಂಘಟನೆಗಳು ಇಂತಹ ಕ್ರಮಗಳ ವಿರುದ್ಧ ಡಿಸೆಂಬರ್ 5ರಂದು 'ರಾಷ್ಟ್ರೀಯ ಪ್ರತಿಭಟನಾ ದಿನ'ವನ್ನು ಆಚರಿಸಿ ತಮ್ಮ ಬಲವಾದ ಪ್ರತಿಭಟನೆಯನ್ನು ದಾಖಲಿಸಲು ಒಕ್ಕೊರಲಿನಿಂದ ನಿರ್ಧರಿಸಿವೆ.

## ಕಾಂಗ್ರೆಸಿನ ಹಾದಿಯಲ್ಲೇ ಮತ್ತಷ್ಟು ಕ್ರಮಗಳು

'ಕಾಂಗ್ರೆಸ್-ಮುಕ್ತ ಭಾರತ' ಎಂಬುದು ಮೋದಿ-ಅಮಿತ್‌ಷಾ ಘೋಷಣೆ. ಎಂದರೆ ಕಾಂಗ್ರೆಸ್ 'ಸರಿಯಾಗಿ' ಜಾರಿ ಮಾಡಲಾಗದ ಅದರ ಧೋರಣೆಗಳನ್ನು 'ಸಮರ್ಥ'ವಾಗಿ ಜಾರಿ ಮಾಡಿ ನಮ್ಮ ಆಳರಸರಿಗೆ ಕಾಂಗ್ರೆಸಿನ ಅಗತ್ಯವೇ ಇಲ್ಲದಂತೆ ಮಾಡುವುದೇ ಇದರ ನಿಜವಾದ ಅರ್ಥ ಎಂಬುದು ಈಗ ಜನಜನಿತವಾಗಿರುವ ಸಂಗತಿ. ಅದು ದಿನೇ-ದಿನೇ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ. ಕಾರ್ಪೊರೇಟ್ ಕುಳಗಳು ಕಾಂಗ್ರೆಸ್‌ಗೆ ಕೈಕೊಟ್ಟು ಮೋದಿಯವರ ಬಿಜೆಪಿಯ ಬೆನ್ನಿಗೆ ನಿಂತದ್ದು ಅದಕ್ಕೇ ತಾನೇ?

ಚುನಾವಣಾ ಪ್ರಚಾರದ ವೇಳೆಯಲ್ಲಿ ಕಪ್ಪು ಹಣವನ್ನು ವಿದೇಶಗಳಿಂದ ತರುವುದಾಗಿ ಅಬ್ಬರಿಸಿದ ಮೋದಿಯವರ ಸರಕಾರ ಕಳೆದ ವಾರ ನ್ಯಾಯಾಲಯದ ಎದುರು ಅದಕ್ಕೆ ಬಹಳಷ್ಟು ಸಮಯ ತಗಲುತ್ತದೆ ಎಂದು ಅಸಹಾಯಕತೆಯನ್ನು ವ್ಯಕ್ತಪಡಿಸಿ ಸಾರ್ವತ್ರಿಕ ತಮಾಷೆಗೆ ಗುರಿಯಾಗಿದೆ.

ಡೀಸೆಲ್ ಬೆಲೆಗಳನ್ನು ನಿಯಂತ್ರಣ-ಮುಕ್ತಗೊಳಿಸುವ ಯುಪಿಎ ಕೆಲಸವನ್ನು 'ಸಮರ್ಥ'ವಾಗಿ ಪೂರೈಸಿದೆ. ಅಂತರ್ರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಕಚ್ಚಾತೈಲ ಬೆಲೆಗಳು ಇಳಿದರೂ ಪ್ರತಿತಿಂಗಳು 50 ಪೈಸೆಯಂತೆ ಏರಿಸುತ್ತಿದ್ದ ಡೀಸೆಲ್ ಬೆಲೆಗಳನ್ನು ಇಳಿಸಲು ನಿರಾಕರಿಸುತ್ತ ಕೊನೆಗೆ ಅಂತರ್ರಾಷ್ಟ್ರೀಯ ಬೆಲೆಗಳು ಬಹಳ ಇಳಿದಾಗ ಜನರಿಗೆ ಬೆಲೆಗಳನ್ನು ನಿಯಂತ್ರಣ -ಮುಕ್ತಗೊಳಿಸುವ ಕ್ರಮದ ಅಪಾಯ ಅರಿವಿಗೆ ಬಾರದಂತೆ ಅದನ್ನು ಪೂರೈಸಿ ಬಿಡಲು ಸಕಾಲ ಎಂದು ಭಾವಿಸಿ ಆ ಕೆಲಸ ಮಾಡಿದೆ.

ಅನಿಲ ಬೆಲೆ ಏರಿಕೆಯ ಯುಪಿಎ ನಿರ್ಧಾರವನ್ನು ಅದೇ ಮಟ್ಟದಲ್ಲಿ ಜಾರಿಗೆ ತರದಿದ್ದರೂ, ಅಂದರೆ 4.2 ಡಾಲರಿನಿಂದ 8.4ಡಾಲರಿಗೆ ಏರಿಸದಿದ್ದರೂ 5.61 ಡಾಲರಿಗೆ ಏರಿಸಿದೆ, ಜತೆಗೆ ಪ್ರತಿ ಆರು ತಿಂಗಳಿಗೊಮ್ಮೆ ಅದನ್ನು 'ಪರಾಮರ್ಶಿಸುವ' ಅಂದರೆ ಏರಿಸುವ ಭರವಸೆಯನ್ನೂ ಕೊಟ್ಟಿದೆ!

ಯುಪಿಎ ಸರಕಾರ ಬಹಳಷ್ಟು ಪ್ರತಿಭಟನೆಗಳ ನಂತರ ತಡೆಹಿಡಿದ ಸಬ್ಸಿಡಿಯ 'ನೇರ ವರ್ಗಾವಣೆ'ಯನ್ನು ಮತ್ತೆ ಜಾರಿಗೆ ತರಲು ನಿರ್ಧರಿಸಲಾಗಿದೆ. ಈ ಎಲ್ಲದರಲ್ಲೂ ದೇಶದಲ್ಲಿ ಪೆಟ್ರೋಲ್, ಡೀಸೆಲ್, ಅನಿಲ ಮುಂತಾದವುಗಳ ಬೆಲೆಗಳನ್ನು ನಿರ್ಧರಿಸಲು ಕಚ್ಚಾತೈಲದ ದೇಶೀ ಸಂಸ್ಕರಣೆಯ ಖರ್ಚನ್ನು ಪರಿಗಣಿಸುವ ಬದಲು ಅಂತರ್ರಾಷ್ಟ್ರೀಯ ಖರ್ಚುಗಳನ್ನೇ ಪರಿಗಣಿಸುವ ತರ್ಕಹೀನ ಮತ್ತು ಜನ-ವಿರೋಧಿ ಕ್ರಮವನ್ನು ಮುಂದುವರೆಸುತ್ತಿದೆ. •




ಅಂದು ಬದಲಾವಣೆಗೆ ಮತ!-"ಒಂದೊಂದೂ ಪೈಸೆ ವಾಪಾಸ್ ತರುತ್ತೇನೆ ಬಿಜೆಪಿಗೆ ಮತ ನೀಡಿ!"

ಇಂದು- ಸ್ವಲ್ಪ ತಡೆಯಿರಿ, ಮೈಲಾರ್ಡ್! ಒಂದೊಂದು ಪೈಸೆ ಲೆಕ್ಕ ಹಾಕಲು ಸಮಯ ತಗಲುತ್ತದೆ!"

ಜಗದಗಲ

ಶರತ್‌ಚಂದ್ರ

# ಹಾಂಗ್ ಕಾಂಗ್‌ನಲ್ಲಿ ವಿದ್ಯಾರ್ಥಿ ಚಳುವಳಿ

ಹಾಂಗ್ ಕಾಂಗ್‌ನ ವಿದ್ಯಾರ್ಥಿಗಳ ಚಳುವಳಿ, ನಗರದ ಕೇಂದ್ರಭಾಗಗಳನ್ನು ಮತ್ತು ಸರಕಾರಿ ಕಟ್ಟಡಗಳನ್ನು 'ವಶ ಪಡಿಸಿಕೊಳ್ಳಲು' ನಡೆಸಿದ ಪ್ರಯತ್ನ, ಮತ್ತು ಇದರಿಂದ ಆದ ಪೋಲಿಸ್-ಪ್ರತಿಭಟನಾಕಾರರ ನಡುವೆ ಹಿಂಸಾತ್ಮಕ ಘರ್ಷಣೆ ಕಳೆದ ಕೆಲವು ವಾರಗಳಲ್ಲಿ ಸುದ್ದಿ ಮಾಡಿತು. 2017ರಲ್ಲಿ ಹಾಂಗ್ ಕಾಂಗ್‌ನ ಚುನಾವಣೆಗಳ ಸ್ವರೂಪದ ಬಗ್ಗೆ ವಿದ್ಯಾರ್ಥಿಗಳ ಬೇಡಿಕೆ ಚಳುವಳಿಯ ಪ್ರಮುಖ ವಿಷಯವಾಗಿತ್ತು. ಈ ಬೇಡಿಕೆಯಿಂದ ಆರಂಭವಾಗಿ ಚಳುವಳಿಕಾರರ ಬೇಡಿಕೆ ಹಾಂಗ್ ಕಾಂಗಿನ ಮುಖ್ಯ ಆಡಳಿತಗಾರನ ರಾಜಿನಾಮೆವರೆಗೆ ಹೋಯಿತು. ಹಲವು ದಿನಗಳ ಘರ್ಷಣೆ ನಂತರ ಈಗ ವಿದ್ಯಾರ್ಥಿಗಳು ಮತ್ತು ಸರಕಾರದ ಪ್ರತಿನಿಧಿಗಳ ನಡುವೆ ಮಾತುಕತೆ ನಡೆಯುತ್ತಿದೆ.

**ಚೀನಿ ಸರಕಾರ ಒಪ್ಪಂದ ಉಲ್ಲಂಘಿಸಿದೆಯೆ?**

ವಿದ್ಯಾರ್ಥಿಗಳು ಮತ್ತು ಪಾಶ್ಚಿಮಾತ್ಯ ಮಾಧ್ಯಮಗಳು 2017ರಲ್ಲಿ ಹಾಂಗ್ ಕಾಂಗ್‌ನ ಚುನಾವಣೆಗಳ ಸ್ವರೂಪದ ಬಗ್ಗೆ ಚೀನಿ ಪಾರ್ಲಿಮೆಂಟ್ ಮಂಜೂರು ಮಾಡಿದ ಇತ್ತೀಚಿನ ಕಾನೂನಿಂದಾಗಿ ಈ ಚಳುವಳಿಯ ಕಿಡಿ ಹೊತ್ತಿತು. ಚೀನಿ ಸರಕಾರ ಹಾಂಗ್ ಕಾಂಗಿನ ಜನತೆಗೆ ನೀಡಿದ ಭರವಸೆಗಳನ್ನು ಮುರಿದು ವಿಶ್ವಾಸಘಾತ ಮಾಡಿದೆ ಎಂದೂ ಆಪಾದಿಸಿದ್ದಾರೆ. ನಿಜ ಸ್ಥಿತಿ ಏನು? ವಿವಾದಿತ ವಿಷಯ ಏನು?

ಮೊದಲ ಅಫೀಮು ಯುದ್ಧ(1836-42)ದ ನಂತರ ಚೀನಾದಿಂದ ಹಾಂಗ್ ಕಾಂಗನ್ನು ಕಸಿದುಕೊಂಡಿದ್ದು 155 ವರ್ಷಗಳ ಕಾಲ ಅದು ಬ್ರಿಟಿಶ್ ವಸಾಹತು ಆಗಿತ್ತು. ಅಂತಹ ಅಸಮಾನ ಒಪ್ಪಂದವನ್ನು ಯುದ್ಧದಲ್ಲಿ ಗೆದ್ದ ಬ್ರಿಟನ್ ಚೀನಾದ ಮೇಲೆ ಹೇರಿತ್ತು. ಒಪ್ಪಂದದ ಪ್ರಕಾರ 1997ರಲ್ಲಿ ಚೀನಾಕ್ಕೆ ವಾಪಸಾಗಬೇಕಾಗಿದ್ದ ಹಾಂಗ್ ಕಾಂಗ್ ಬಗ್ಗೆ ಚೀನಾ ಮತ್ತು ಬ್ರಿಟನ್ ನಡುವೆ 1980ರ ದಶಕದಲ್ಲೇ ಮಾತುಕತೆ ನಡೆದು ಒಂದು ಒಪ್ಪಂದವಾಯಿತು ಈ ಒಪ್ಪಂದ 'ಒಂದು ದೇಶ, ಎರಡು ವ್ಯವಸ್ಥೆಗಳು' ಎಂಬ ಸೃಜನಶೀಲ ಚೀನಿ ಕಮ್ಯುನಿಸ್ಟ್ ಪಕ್ಷದ ರಾಜಕೀಯ ಪ್ರಸ್ತಾವದ ಮೇಲೆ ಆಧಾರಿತವಾಗಿತ್ತು.

50 ವರ್ಷಗಳ ಕಾಲ ಅಲ್ಲಿನ ವ್ಯವಸ್ಥೆಯನ್ನು (ಅಂದರೆ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ, ಕಾನೂನುಗಳು, ಜೀವನ ವಿಧಾನ) ಮಾನ್ಯ ಮಾಡುತ್ತದೆ ಮತ್ತು ಬಲಾತ್ಕಾರವಾಗಿ ಬದಲಾಯಿಸುವುದಿಲ್ಲ ಎಂಬ ಭರವಸೆಯನ್ನು, ಚೀನಾ ಸರಕಾರ ಈ ಒಪ್ಪಂದದಲ್ಲಿ ಚೀನಾಕ್ಕೆ ವಾಪಸಾಗಲಿದ್ದ ಹಾಂಗ್ ಕಾಂಗ್ ಜನತೆಗೆ, ಕೊಟ್ಟಿತ್ತು. ಇದನ್ನೇ ಆ ಮೇಲೆ ಚೀನಾ ಪಾರ್ಲಿಮೆಂಟ್ ಹಾಂಗ್ ಕಾಂಗ್‌ನ 'ಮೂಲ ಕಾನೂನು' (ಹೆಚ್ಚು ಕಡಿಮೆ ಸಂವಿಧಾನದಂತೆ) ಆಗಿ ಅಂಗೀಕರಿಸಿತು. 2047ರ ವರೆಗೆ ಸಾರ್ವತ್ರಿಕ ಮತದಾನದ ಮೇಲೆ ಆಧಾರಿತ ಪ್ರಜಾಪ್ರಭುತ್ವ ವ್ಯವಸ್ಥೆ ಸ್ಥಾಪಿಸುವ ಬಗ್ಗೆ ಯಾವುದೇ ಭರವಸೆ ಇರಲಿಲ್ಲ. ಆದ್ದರಿಂದ ವಿಶ್ವಾಸಘಾತದ ಆಪಾದನೆಯಲ್ಲಿ ಯಾವುದೇ ಹುರುಳಿಲ್ಲ.

**ಬ್ರಿಟಿಶ್ ಹಾಂಗ್ ಕಾಂಗ್‌ನಲ್ಲಿ ಎಷ್ಟು ಪ್ರಜಾಪ್ರಭುತ್ವ ಇತ್ತು?**

ಹಾಂಗ್ ಕಾಂಗ್‌ನಲ್ಲಿ ಪ್ರಜಾಪ್ರಭುತ್ವದ ಬಗ್ಗೆ ಕಾಳಜಿ ವ್ಯಕ್ತ ಪಡಿಸುವ ಮತ್ತು ಕಣ್ಣೀರು ಹಾಕುವ ಪಾಶ್ಚಿಮಾತ್ಯ ಪ್ರಜಾಪ್ರಭುತ್ವವಾದಿಗಳು, ಮಾಧ್ಯಮಗಳು, ಸರಕಾರಗಳು ಒಂದು ಪ್ರಶ್ನೆ ಯಾವತ್ತೂ ಕೇಳಿಲ್ಲ. 155 ವರ್ಷಗಳ ಕಾಲ ಬ್ರಿಟಿಶ್ ವಸಾಹತುವಾಗಿದ್ದ ಹಾಂಗ್ ಕಾಂಗ್‌ನಲ್ಲಿ ಎಷ್ಟು ಪ್ರಜಾಪ್ರಭುತ್ವ ಇತ್ತು? ಎಂಬುದು ಆ ಪ್ರಶ್ನೆ. ಯಾಕೆಂದರೆ ಈ ಅವಧಿಯಲ್ಲಿ ಆಳಿದ 28 ಗವರ್ನರುಗಳನ್ನು ಬ್ರಿಟಿಶ್ ಸರಕಾರ ನೇಮಿಸುತ್ತಿತ್ತು. ಮಾತ್ರವಲ್ಲ, ಅವರೆಲ್ಲ ಹಾಂಗ್ ಕಾಂಗ್‌ನ ವಾಸನೆ ಸಹ ಗೊತ್ತಿರದ ಬ್ರಿಟಿಶರೇ ಆಗಿದ್ದರು. ಹಾಂಗ್ ಕಾಂಗ್‌ನ ಜನತೆಗೆ ಅದರಲ್ಲಿ ಯಾವುದೇ ಪಾತ್ರವಿರಲಿಲ್ಲ. ಅವರಿಗೆ ಯಾವುದೇ ರಾಜಕೀಯ ಅಧಿಕಾರಗಳೂ, ಸ್ವಾತಂತ್ರ್ಯಗಳೂ ಇರಲಿಲ್ಲ. ಯಾವುದೇ ರಾಜಕೀಯ ಚಳುವಳಿ ಅಥವಾ ಹಕ್ಕು ಸಾಧಿಸುವ ಪ್ರಯತ್ನವನ್ನು ಬ್ರಿಟಿಶ್ ಸರಕಾರ ದಮನಿಸುತ್ತಿತ್ತು.



ಚೀನಾ ಆಡಳಿತ ಆರಂಭವಾದ ಮೇಲೆಯೇ ಹಾಂಗ್ ಕಾಂಗ್‌ನಲ್ಲಿ ಸ್ವಯಮಾಡಳಿತದ ವ್ಯವಸ್ಥೆ ಜಾರಿಯಲ್ಲಿ ಬಂದಿದ್ದು. ಹಾಂಗ್ ಕಾಂಗ್‌ನ 'ಮೂಲ ಕಾನೂನು' ಪ್ರಕಾರ ಜನತೆಗೆ ಮೊದಲ ಬಾರಿಗೆ ರಾಜಕೀಯ ಅಧಿಕಾರಗಳೂ, ಸ್ವಾತಂತ್ರ್ಯಗಳನ್ನು ಕೊಡಲಾಯಿತು. ಸ್ವಾಯತ್ತತೆ ಇದ್ದ ದ್ವೀಪದ ಸರಕಾರಕ್ಕೆ ರಕ್ಷಣೆ ಮತ್ತು ವಿದೇಶ ನೀತಿ ಬಿಟ್ಟರೆ ಎಲ್ಲಾ ಅಧಿಕಾರಗಳೂ ಇವೆ. ಸಾರ್ವತ್ರಿಕ ಮತದಾನದ ಆಧಾರದ ಮೇಲೆ ಚುನಾಯಿಸಿದ ವಿಧಾನ ಸಭೆ ಎಲ್ಲಾ ಕಾನೂನುಗಳನ್ನು ಮಾಡುತ್ತದೆ. ಮುಖ್ಯ ಆಡಳಿತಗಾರನನ್ನು ಮಾತ್ರ ದ್ವೀಪದ ಎಲ್ಲಾ ಜನವಿಭಾಗಗಳು ಇರುವ (ಸುಮಾರು 400 ಸದಸ್ಯರ) ಸಮಿತಿ ಆರಿಸುತ್ತದೆ. ಈ ವ್ಯವಸ್ಥೆ ಹಾಂಗ್ ಕಾಂಗ್‌ನ ವಿಶಿಷ್ಟ ಚರಿತ್ರೆ ಮತ್ತು ಚೀನಾದ ಆರ್ಥಿಕ-ರಾಜಕೀಯ ಹಿತಾಸಕ್ತಿಗಳನ್ನು ಗಮನದಲ್ಲಿ ಇಟ್ಟುಕೊಂಡು ರೂಪಿಸಿದ ವ್ಯವಸ್ಥೆ. ಮುಖ್ಯ ಆಡಳಿತಗಾರ 'ಚೀನಾ ಮತ್ತು ಹಾಂಗ್ ಕಾಂಗ್ ಎರಡನ್ನೂ ಸಮಾನವಾಗಿ ಪ್ರೀತಿಸುವ' ವ್ಯಕ್ತಿ ಆಗಿರಬೇಕು ಎಂಬ ಉದ್ದೇಶದಿಂದ ರೂಪಿಸಿದ ವ್ಯವಸ್ಥೆ ಎಂದು ಚೀನಾ ಸರಕಾರ ಹೇಳುತ್ತದೆ.

ಚೀನಾದ ಪಾರ್ಲಿಮೆಂಟು ಮುಖ್ಯ ಆಡಳಿತಗಾರನನ್ನು ಆರಿಸುವ ವ್ಯವಸ್ಥೆಯನ್ನು ಇನ್ನಷ್ಟು ಪ್ರಜಾಸತ್ತೀಕರಿಸುವ ಬದಲಾವಣೆಗಳನ್ನು ಈ ವರ್ಷ ಪ್ರಸ್ತಾವಿಸಿತ್ತು. ಇದರ ಪ್ರಕಾರ ಮುಖ್ಯ ಆಡಳಿತಗಾರನ ಚುನಾವಣೆ ಸಾರ್ವತ್ರಿಕ ಮತದಾನದ ಆಧಾರದ ಮೇಲೆ ಆಗುತ್ತದೆ. ಆದರೆ ಈ ಹುದ್ದೆಗೆ ಅಭ್ಯರ್ಥಿಗಳಲ್ಲಿ ಮೂವರನ್ನು ಮೇಲೆ ಹೇಳಿದ 1200 ಸದಸ್ಯರ ಸಮಿತಿ ಆರಿಸುತ್ತದೆ. ಇದೇ ಅತ್ಯಂತ ವಿವಾದಿತ ವಿಷಯವಾಗಿರುವುದು. ಯಾವುದೇ ಷರತ್ತು ಇಲ್ಲದೆ ಯಾರು ಬೇಕಾದರೂ ಮುಖ್ಯ ಆಡಳಿತಗಾರನ ಸ್ಥಾನಕ್ಕೆ ಸ್ಪರ್ಧಿಸುವಂತಿರಬೇಕು ಎಂಬುದು ಚಳುವಳಿಕಾರರ ಒತ್ತಾಯ.

**ಚಳುವಳಿ, ಅತೃಪ್ತಿಗೆ ಕಾರಣಗಳು**

ಇದರರ್ಥ ವಿದ್ಯಾರ್ಥಿ ಚಳುವಳಿ ತಪ್ಪು ಅಥವಾ ಅರ್ಥಹೀನವೆಂದಲ್ಲ. ಹೆಚ್ಚೆಚ್ಚು ಪಜಾಪ್ರಭುತ್ವಕ್ಕಾಗಿ ಚಳುವಳಿ 1997ರ ನಂತರ ಬ್ರಿಟಿಶ್ ವಸಾಹತುಶಾಹಿಯಿಂದ ವಿಮೋಚನೆಗೊಂಡ ಹಾಂಗ್ ಕಾಂಗ್‌ನಲ್ಲಿ, ರಾಜಕೀಯ ಸ್ವಾತಂತ್ರ್ಯ/ಹಕ್ಕುಗಳು ಮತ್ತು ಪ್ರಜಾಪ್ರಭುತ್ವ ಬೇರೂರುತ್ತಿರುವುದರ ಸಂಕೇತ. ಆದರೆ ವಿದ್ಯಾರ್ಥಿ ಚಳುವಳಿಯ ಗಾತ್ರ, ಜನ-ಬೆಂಬಲ, ಅದರ ಮೇಲೆ ಸರಕಾರದ ದಮನ, ಪ್ರಭಾವಗಳ ಬಗ್ಗೆ ಪಾಶ್ಚಿಮಾತ್ಯ ಮಾಧ್ಯಮಗಳ ವರದಿಗಳು ಅತಿಶಯೋಕ್ತಿಯವು ಎಂದು ಹಲವು ರಾಜಕೀಯ ವೀಕ್ಷಕರೂ ಸಹ ಅಭಿಪ್ರಾಯ ಪಟ್ಟಿದ್ದಾರೆ.

ವಿದ್ಯಾರ್ಥಿ ಚಳುವಳಿ ಪೂರ್ಣವಾಗಿ ಸ್ವಯಂ-ಸ್ಫೂರ್ತವೂ ಅಲ್ಲ ಎನ್ನಲಾಗಿದೆ. ಅಮೇರಿಕ ಸರಕಾರಕ್ಕೆ 'ಇಷ್ಟವಾಗದ' ಸರಕಾರ ಬದಲಾವಣೆಗೆ ಮೀಸಲಾದ (ಏಶ್ಯಾ ಮತ್ತು ಪೂರ್ವ ಯುರೋಪುಗಳಲ್ಲಿ ಹಲವು 'ಬಣ್ಣದ ಕ್ರಾಂತಿ' ನಡೆಸಿದ ಕುಖ್ಯಾತಿಯ) 'ಪ್ರಜಾಪ್ರಭುತ್ವಕ್ಕಾಗಿ ರಾಷ್ಟ್ರೀಯ ಸಹಾಯನಿಧಿ'ಯಿಂದ (ನ್ಯಾಶನಲ್ ಎಂಡೋವ್‌ಮೆಂಟ್ ಡೆಮೊಕ್ರಸಿ) 2012ರಲ್ಲಿ ಹಾಂಗ್ ಕಾಂಗ್‌ನಲ್ಲಿ 5 ಲಕ್ಷ ಡಾಲರುಗಳ ನಿಧಿ ಹರಿಸಲಾಗಿದೆ. ನಂತರದ ವರ್ಷಗಳಲ್ಲಿ ಇನ್ನಷ್ಟು ಹೆಚ್ಚಿನ ಹಣ ಹರಿದಿದೆ. ಎಲ್ಲರಿಗೂ ಗೊತ್ತಿರುವಂತೆ ಇದರ ಉದ್ದೇಶ ಹಾಂಗ್ ಕಾಂಗ್‌ನ ಪ್ರಜಾಪ್ರಭುತ್ವ ಗಟ್ಟಿಗೊಳಿಸುವುದು ಅಲ್ಲ. ಹಾಂಗ್ ಕಾಂಗ್ ಮತ್ತು ಆ ಮೂಲಕ ಚೀನದ ಸರಕಾರವನ್ನು ಬುಡಮೇಲು ಮಾಡುವುದು.

ಇದರರ್ಥ ಈ ಚಳುವಳಿ ಪೂರ್ಣ ಬೋಗಸ್ ಎಂದೂ ಅಲ್ಲ. ಹಾಂಗ್ ಕಾಂಗ್‌ನ ವಿದ್ಯಾರ್ಥಿ, ಜನಗಳಲ್ಲಿ ವಿವಿಧ ಕಾರಣಗಳಿಗಾಗಿ ಸರಕಾರದ ವಿರುದ್ಧ ಅತೃಪ್ತಿ ಇದೆ. ಎಲ್ಲಾ ಬಂಡವಾಳಶಾಹಿ ವ್ಯವಸ್ಥೆಗಳಲ್ಲಿ ಇರುವ ಅಸಮಾನತೆ, ನಿರುದ್ಯೋಗ ಹಾಂಗ್ ಕಾಂಗ್‌ನಲ್ಲೂ ಅತೃಪ್ತಿ ಹರಡಿಸಿದೆ. ಕಳೆದ ಸುಮಾರು ಎರಡು ದಶಕಗಳ ಚೀನಾದ ಆಂತರಿಕ ಬೆಳವಣಿಗೆಗಳು ಹಾಂಗ್ ಕಾಂಗ್‌ನ ಯುವಜನರಲ್ಲಿ ಆತಂಕ ಅಭದ್ರತೆ ಮೂಡಿಸಿವೆ.

1980ರ ದಶಕದಲ್ಲಿ ಚೀನಾಕ್ಕೆ ಬಂಡವಾಳ, ತಂತ್ರಜ್ಞಾನ ಒದಗಿಸಲು ಹಾಂಗ್ ಕಾಂಗ್‌ನ ಅಗತ್ಯ ಇತ್ತು. ಅಂತರ್ರಾಷ್ಟ್ರೀಯ ಬಂಡವಾಳಕ್ಕೂ ಚೀನಾದ ಮಾರುಕಟ್ಟೆಗೆ ಪ್ರವೇಶ ದ್ವಾರವಾಗಿ ಹಾಂಗ್ ಕಾಂಗ್‌ನ ಅಗತ್ಯ ಇತ್ತು. ಆದ್ದರಿಂದ 1997ರ ಮೊದಲಿನ ಮತ್ತು ಆ ಮೇಲಿನ ದಶಕದಲ್ಲಿ ಅತ್ಯಂತ ಹೆಚ್ಚು ಬೆಳವಣಿಗೆ, ಸಮೃದ್ಧಿ ಕಂಡಿದೆ. ಆದರೆ ಕಳೆದ ಹಲವು ವರ್ಷಗಳಲ್ಲಿ ಹಾಂಗ್ ಕಾಂಗ್‌ನ ಪ್ರಾಮುಖ್ಯತೆ ಮತ್ತು ಅದರ ಜತೆ ಬೆಳವಣಿಗೆ ಸ್ಥಗಿತತೆ ಕಂಡಿದೆ. ಈಗ ಹಾಂಗ್ ಕಾಂಗ್ ಚೀನಾದ ಶಾಂಘಾಯ್ ಮುಂತಾದ ಹಲವು ನಗರಗಳು ಪ್ರದೇಶಗಳಿಗಿಂತ ಹಲವು ರೀತಿಯಲ್ಲಿ (ಬಂಡವಾಳ ಹೂಡಿಕೆ, ರಫ್ತು, ವ್ಯಾಪಾರ ವಹಿವಾಟು, ಉತ್ಪನ್ನ, ಪ್ರವಾಸಿಗರ ಸಂಖ್ಯೆ) ಹಿಂದೆ ಬಿದ್ದಿದೆ. ಚೀನಾದಿಂದ ಬಂದ ಜನ ವೈಯಕ್ತಿಕ ಗಳಿಕೆ ಸಮೃದ್ಧಿಯಲ್ಲೂ ಹಾಂಗ್ ಕಾಂಗರನ್ನು ಹಿಂದೆ ಹಾಕುತ್ತಿದ್ದಾರೆ. ಇದರಿಂದ ಹಾಂಗ್ ಕಾಂಗ್‌ನ ಯುವಜನರಲ್ಲಿ ಆತಂಕ ಅಭದ್ರತೆ ಅತೃಪ್ತಿ ಮೂಡಿವೆ. ಇದು ಈ ಚಳುವಳಿಗೆ ಬೆಂಬಲವಾಗಿ ಮೂಡಿ ಬಂದಿದೆ.

ಚೀನಾ ಸರಕಾರ ಮತ್ತು ವಿದ್ಯಾರ್ಥಿಗಳ ಮಾತುಕತೆಗಳು ಹಾಂಗ್ ಕಾಂಗ್‌ನ ಪ್ರಜಾಪ್ರಭುತ್ವ ಗಟ್ಟಿಗೊಳಿಸುವ ಹಾದಿಯಲ್ಲಿ ಹೋಗುವುದು. ಚೀನಾ ಸರಕಾರ ಯುವಜನರ ಅತೃಪ್ತಿಯ ಕಾರಣಗಳನ್ನು ಪರಿಹರಿಸುವುದರತ್ತ ಗಮನ ಹರಿಸುವುದು. ಹಾಂಗ್ ಕಾಂಗ್‌ನ ವಿದ್ಯಾರ್ಥಿಗಳು ತಮ್ಮನ್ನು ಅಮೇರಿಕ ಸರಕಾರದ ದಾಳಗಳಾಗಿ ಬಳಸಿಕೊಳ್ಳಲು ಬಿಡುವುದಿಲ್ಲ. ಎಂದು ಈ ಹಿನ್ನೆಲೆಯಲ್ಲಿ ಆಶಿಸಬೇಕಾಗಿದೆ.

## ನಾ ಕಂಡ ಚೈನಾ.......

ಪುಟ 16 ರಿಂದ

ಉತ್ಪಾದನಾ ಸಂಬಂಧಗಳನ್ನು ಕೆಳಮಟ್ಟಗಳಲ್ಲಿರುವ ಉತ್ಪಾದನಾ ಶಕ್ತಿಗಳೊಂದಿಗೆ ಉಳಿಸಿಕೊಳ್ಳಲಾಗದು. ಕೆಳಮಟ್ಟದ ಉತ್ಪಾದನಾ ಶಕ್ತಿಗಳು ದೀರ್ಘಕಾಲ ಮುಂದುವರಿದರೆ ಅದು ಸಮಾಜವಾದದಡಿ ಪ್ರತಿ ವಿಸ್ತಾರಗೊಳ್ಳುವ ಜನರ ಭೌತಿಕ ಮತ್ತು ಸಾಂಸ್ಕೃತಿಕ ಅವಶ್ಯಕತೆಗಳ ಮತ್ತು ಹಿಂದುಳಿದ ಉತ್ಪಾದನಾ ಶಕ್ತಿಗಳ ಮಧ್ಯೆ ಗಂಭೀರ ವೈರುಧ್ಯವನ್ನುಂಟು ಮಾಡುತ್ತದೆ. ಈ ವೈರುಧ್ಯ ನಿವಾರಣೆಯಾಗದೆ ಉಳಿದರೆ ಅದು ಚೀನಾದಲ್ಲಿ ಸಮಾಜವಾದಕ್ಕೆ ಅಪಾಯವನ್ನುಂಟು ಮಾಡುತ್ತದೆ.' ಎನ್ನುವ ತೀರ್ಮಾನಕ್ಕೆ ಅಲ್ಲಿಯ ಸಿಪಿಸಿ ಬಂದಿದೆ.

ಸಿಪಿಸಿಯ ಸಾಮಾನ್ಯ ಕಾರ್ಯಕ್ರಮದಲ್ಲಿ ತನ್ನ ಕರ್ತವ್ಯವನ್ನು ಈ ರೀತಿ ಗುರ್ತಿಸಿದೆ. "ಚೈನಾ ಸಮಾಜವಾದದ ಪ್ರಾಥಮಿಕ ಹಂತದಲ್ಲಿದೆ ಮತ್ತು ಈ ಸ್ಥಿತಿ ಧೀರ್ಘಕಾಲ ಮುಂದುವರಿಯಲಿದೆ. ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಹಿಂದುಳಿದಿರುವ ಚೈನಾದ ಸಮಾಜವಾದಿ ಆಧುನೀಕರಣದಲ್ಲಿ ಈ ಐತಿಹಾಸಿಕ ಘಟ್ಟವನ್ನು ತಪ್ಪಿಸಲಿಕ್ಕಾಗದು. ಇದು ಒಂದು ನೂರು ವರ್ಷಕ್ಕಿಂತ ಹೆಚ್ಚು ಕಾಲ ಮುಂದುವರಿಯುತ್ತದೆ. ಸಮಾಜವಾದಿ ನಿರ್ಮಾಣದಲ್ಲಿ ನಮ್ಮ ವಿಶಿಷ್ಠ ಪರಿಸ್ಥಿತಿಗಳಿಂದ ಹೊರಟು ಚೈನಾದ ಲಕ್ಷಣಗಳನ್ನು ಹೊಂದಿದ ಸಮಾಜವಾದದತ್ತ ಸಾಗಬೇಕು". ಎನ್ನುತ್ತದೆ ದಾಖಲೆ.

**'ಸಮಾಜವಾದಿ ಮಾರುಕಟ್ಟೆ ಆರ್ಥಿಕತೆ'**

ಸದ್ಯದ ಸ್ಥಿತಿಯಲ್ಲಿ ಚೈನಾವು 'ಬಂಡವಾಳಶಾಹಿ ಮಾರುಕಟ್ಟೆ ಆರ್ಥಿಕತೆ'ಗೆ ಬದಲಿಯಾಗಿ 'ಸಮಾಜವಾದಿ ಮಾರುಕಟ್ಟೆ ಆರ್ಥಿಕತೆ'ಯನ್ನು ಪ್ರತಿಪಾದಿಸುತ್ತಿದೆ. ಅಂದರೆ ಎಲ್ಲಿಯವರೆಗೆ ಉತ್ಪಾದನೆ ಇರುತ್ತದೆಯೇ ಅಲ್ಲಿಯವರೆಗೆ ಮಾರುಕಟ್ಟೆ ಅವಶ್ಯ ಎನ್ನುವ ವಿಚಾರ ಸ್ಪಷ್ಟವಾಗಿದೆ ಎನ್ನುವ ದಾಖಲೆ ಸದ್ಯಕ್ಕೆ ಚೀನಾದಲ್ಲಿ ಬೆಳೆಸಲು ಪ್ರಯತ್ನಿಸುತ್ತಿರುವುದು "ಒಟ್ಟು ಸಾಮಾಜಿಕ ಬಂಡವಾಳದಲ್ಲಿ 'ಸಾರ್ವಜನಿಕ ಬಂಡವಾಳ'ವು ಪ್ರಾಧಾನ್ಯತೆ ಹೊಂದಿರುವಂತಹ, ಪ್ರಭುತ್ವದ ಆರ್ಥಿಕತೆಯು ಆರ್ಥಿಕ ಜೀವನಾಡಿಯನ್ನು ನಿಯಂತ್ರಿಸುವಂತಹ ಮತ್ತು ದೇಶದ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರವಹಿಸುವಂತಹ' ಪರಿಸ್ಥಿತಿಯನ್ನು ಎಂದೂ ಹೇಳಿದೆ.

ಅವರು ಖಾಸಗಿ ಬಂಡವಾಳದ ಬೆಳವಣಿಗೆ, ಮಾರುಕಟ್ಟೆ ಆರ್ಥಿಕತೆಯಿಂದ ಉಂಟಾಗುವ ಆರ್ಥಿಕ ಧ್ರುವೀಕರಣ ಮತ್ತು ಹೆಚ್ಚುತ್ತಿರುವ ಅಸಮಾನತೆಗಳನ್ನು ತಡೆದು-ದುಡಿಯುವ ಜನಸಾಮಾನ್ಯರ ಏಳಿಗೆಯನ್ನು ಈ ರೀತಿಯ ಬಲಾಢ್ಯ ಸಾರ್ವಜನಿಕ ವಲಯದ ಮೂಲಕ ಸಾಧಿಸಲು ಬಯಸಿದ್ದಾರೆ. ಔದ್ಯೋಗಿಕ ಮತ್ತು ಸೇವಾ ಕ್ಷೇತ್ರಗಳಲ್ಲಿ ಖಾಸಗಿ ಸಂಸ್ಥೆಗಳು ಬೆಳೆಯುತ್ತಿದ್ದರೂ ಸಹ ಆಯಕಟ್ಟಿನ ಕ್ಷೇತ್ರಗಳನ್ನು ಪ್ರಭುತ್ವದ ಒಡೆತನದಲ್ಲಿರುವ ಸಂಸ್ಥೆಗಳೇ ನಿಯಂತ್ರಿಸುತ್ತವೆ ಎಂಬುದು ಗಮನಾರ್ಹ. ಪ್ರಭುತ್ವದ ಒಡೆತನದಲ್ಲಿರುವ 50 ಅಗ್ರ ಸಂಸ್ಥೆಗಳನ್ನು ಒಗ್ಗೂಡಿಸಲಾಗಿದೆ. ಗಣಿಗಾರಿಕೆ, ಉಕ್ಕು, ತೈಲ, ದೂರಸಂಪರ್ಕ, ಬ್ಯಾಂಕಿಂಗ್, ಇಂಧನ, ರೈಲು, ಬಂದರು ಮುಂತಾದವುಗಳು ಆರ್ಥಿಕತೆಯಲ್ಲಿ ಉನ್ನತ ಸ್ಥಾನವನ್ನು ಹೊಂದಿವೆ. ಎರಡನೇ ಹಂತದ ಸುಧಾರಣೆಯ ಭಾಗವಾಗಿ ಗ್ರಾಮೀಣ-ನಗರ ಪ್ರದೇಶಗಳ ನಡುವಿನ ಅಂತರವನ್ನು ಕಡಿಮೆ ಮಾಡುವುದರಲ್ಲಿ ಗಮನ ಕೇಂದ್ರಿಕರಿಸಲಾಗಿದೆ.

2006ರಲ್ಲಿ ಚೀನಾ ಸರಕಾರ ಕೃಷಿ ತೆರಿಗೆಯನ್ನು ಸಂಪೂರ್ಣವಾಗಿ ರದ್ದು ಮಾಡಿದೆ. ಧಾನ್ಯಗಳ ಬೆಳೆಗಳಿಗೆ ಸಹಾಯಧನವನ್ನು ಹೆಚ್ಚಿಸಿದೆ. ಗ್ರಾಮೀಣ ಆರೋಗ್ಯ ಮುಂತಾದವುಗಳಿಗೆ ಹೆಚ್ಚಿನ ಹಣ ಒದಗಿಸಲಾಗುತ್ತಿದೆ. 9ನೇ ತರಗತಿಯ ತನಕ ಉಚಿತ ವಿದ್ಯಾಭ್ಯಾಸವಿದೆ. ಪ್ರತಿವರ್ಷ 60 ರಿಂದ 70 ಲಕ್ಷ ಕಾಲೇಜು ವಿದ್ಯಾರ್ಥಿಗಳು ಉನ್ನತ ವ್ಯಾಸಂಗ ಪಡೆದು ವಿಶ್ವವಿದ್ಯಾನಿಲಯಗಳಿಂದ ಹೊರಬರುತ್ತಿದ್ದಾರೆ.

ಚೀನಾದಲ್ಲಿ 23 ರಾಜ್ಯಗಳಿವೆ. 15 ಸ್ವತಂತ್ರವಾದ ಧರ್ಮಗಳಿವೆ. 4 ಪುರಸಭೆಗಳು ಮತ್ತು 2 ವಿಶೇಷ ಆಡಳಿತಾತ್ಮಕ ವಲಯಗಳಿವೆ. 136 ಕೋಟಿ ಜನರ ದೇಶದಲ್ಲಿ 56 ಜನಾಂಗೀಯ ಗುಂಪುಗಳಿವೆ. ಹಾನ್ ಎಂಬ ಜನಾಂಗ 90% ಇದೆ. ಚೈನಾ ಧಾರ್ಮಿಕ ಸ್ವಾತಂತ್ರ್ಯವನ್ನು ಒಪ್ಪಿಕೊಂಡಿದೆ. ಬುದ್ಧಿಸಂ, ಬಾಯಿಸಂ, ಇಸ್ಲಾಮ್, ಕ್ಯಾತೋಲಿಸಂ ಮತ್ತು ಪ್ರಾಟೆಸ್ಟೆಂಟ್ ಕ್ರಿಶ್ಚಿಯನ್ ಮುಂತಾದ ಧರ್ಮಗಳಿವೆ.



**'ಅಲ್ಪಸಂಖ್ಯಾತರು ಕುಟುಂಬದಲ್ಲಿ ಕಿರಿಯ ಸದಸ್ಯ'ರಿದ್ದರಂತೆ**

ಬಹುಸಂಖ್ಯಾತರಿಗೆ ಒಂದು ಕುಟುಂಬಕ್ಕೆ ಒಂದೇ ಮಗು. ಆದರೆ ಅಲ್ಪಸಂಖ್ಯಾತರಿಗೆ 2 ಮಕ್ಕಳಿಗೆ ಅವಕಾಶ ಇದೆ. ಅಲ್ಪಸಂಖ್ಯಾತರಿಗೆ ಇಂತಹ ರಕ್ಷಣೆ ಇರುವುದು ಬಿಟ್ಟರೆ ಜಾತಿ, ಧರ್ಮದ ಆಧಾರದ ತಾರತಮ್ಯಗಳು ನಮಗೆ ಕಾಣಲಿಲ್ಲ. ಆ ರೀತಿ ಗುರ್ತಿಸಲು ಆಗುತ್ತಿರಲಿಲ್ಲ. ಸೆಪ್ಟೆಂಬರ್ 24 ರಂದು ಒಂದು ಮುಸ್ಲಿಂ ಕುಟುಂಬ ಸೈಕಲ್‌ಗಾಡಿಯಲ್ಲಿ ವ್ಯಾಪಾರ ಮಾಡುವುದನ್ನು ನೋಡಿ ಅವರನ್ನು ಮಾತನಾಡಿಸಲು ನಾವು ಇರುವೆಯ ರೀತಿಯಲ್ಲಿ ನುಗ್ಗಿ ಮುತ್ತಿಕೊಂಡೆವು. ಅವರು ಬಹು ಸಂತೋಷದಿಂದ ನಮ್ಮಗಳ ಬಳಿ ಮಾತನಾಡಿದರು. ತಮಗೆ 2 ಮಕ್ಕಳಿವೆ ಎಂದರು. 2 ಮಕ್ಕಳೂ ಅವರೊಟ್ಟಿಗೆ ಇದ್ದರು. ನಾವು ನಿಮಗೆ ನಿಮ್ಮ ಧರ್ಮದ ಆಚರಣೆಗೆ ಸಮಸ್ಯೆಯಿದೆಯೇ ಎಂದು ಕೇಳಿದಾಗ "ನಮ್ಮನ್ನು ಬೇರೆ ಧರ್ಮದವರೆಂದು ಕಾಣುವುದೇ ಇಲ್ಲ" ಎಂದರು.

ಇದೇ ಪ್ರಶ್ನೆಯ ಕುರಿತು ಸೆಪ್ಟೆಂಬರ್ 23 ರಂದು ಸಂಜೆ ಭೇಟಿ ಮಾಡಿದ ಐ.ಡಿ.ಸಿ.ಪಿ.ಸಿ.(ಅಂತರ ರಾಷ್ಟ್ರೀಯ ವಿಭಾಗ)ಯ ರಾಜ್ಯ ಸಚಿವರಾದ ಹೆಚ್.ಇ.ಲಿಜುನ್‌ರವರು ಹೇಳಿದರು 'ಸಮಾನತೆ ಮತ್ತು ಸಾಮಾನ್ಯರ ಏಳಿಗೆ ನಮ್ಮ ಗುರಿ' ಮತ್ತು ಒಂದು ಕುಟುಂಬದಲ್ಲಿ ಹಿರಿಯಣ್ಣನ ಕಾಳಜಿ ತಮ್ಮಂದಿರ ಬಗ್ಗೆ ಹೇಗೆ ಇರುತ್ತದೋ ಹಾಗೆಯೇ ನಮ್ಮ ದೇಶದಲ್ಲಿ ನಮ್ಮ ಪಾತ್ರವಿದೆ" ಎಂದು ವಿವರಿಸಿದರು.

ಮಹಿಳೆಯರ ಕುರಿತು: ನಮ್ಮ ನಿಯೋಗದಲ್ಲಿ ಒಟ್ಟು 12 ಜನರಲ್ಲಿ 5 ಜನ ಮಹಿಳಾ ಸಂಗಾತಿಗಳು. ನಾವು ಪ್ರತಿ ಸಭೆಯಲ್ಲಿಯೂ ಮಹಿಳೆಯರ ಸಮಸ್ಯೆಗಳ ಬಗ್ಗೆ, ಅವರ ಪಾತ್ರದ ಬಗ್ಗೆ ಕೇಳುತ್ತಿದ್ದೆವು. ಅವರು ನಮ್ಮ ಕೆಲವು ಪ್ರಶ್ನೆಗಳನ್ನು ಆಶ್ಚರ್ಯದಿಂದ ಕೇಳುತ್ತಿದ್ದರು. ನಮ್ಮ ಪ್ರಶ್ನೆ ಒಂದು ಕುಟುಂಬಕ್ಕೆ ಒಂದೇ ಮಗು ಎಂಬ ನಿಯಮದ ಪರಿಣಾಮಗಳ ಕುರಿತು ಇರುತ್ತಿತ್ತು. ಮಹಿಳೆಗೆ ಮಗುವಿನ ಆಯ್ಕೆಯ ಸ್ವಾತಂತ್ರ್ಯ ಇರುವುದಿಲ್ಲವಾದದ್ದರಿಂದ ಅವಳು ಕುಟುಂಬದ ಒತ್ತಡಕ್ಕೆ ಒಳಗಾಗುವುದಿಲ್ಲವೇ? ಹೆಣ್ಣು ಮಗು ಬೇಡ ಎಂದು ಕುಟುಂಬದಲ್ಲಿ ಒತ್ತಾಯ ಬಂದರೆ ಹೇಗೆ?.. ಇತ್ಯಾದಿ. ಇದಕ್ಕೆ ಅವರು ಉತ್ತರಿಸಿದ್ದು ಹೀಗೆ. ನಮ್ಮಲ್ಲಿ ಹೆಣ್ಣು-ಗಂಡು ಎಂಬ ಬೇಧ-ಭಾವನೆಗಳು ಹೆಚ್ಚು ಇಲ್ಲ. ಜೊತೆಗೆ ಈ ನಿಯಮವನ್ನು ತರಲು ಜನರ ಒಪ್ಪಿಗೆ ಪಡೆದಿರುವುದರಿಂದ ಹೆಚ್ಚಿನ ಸಮಸ್ಯೆ ಇಲ್ಲ. ದುಡಿಮೆಯಲ್ಲಿ, ದೇಶ ನಿರ್ಮಾಣದಲ್ಲಿ ಗಂಡು-ಹೆಣ್ಣಿನ ಸಮಾನ ಕಾಣಿಕೆಗಳು ಇವೆ. ಇಲ್ಲಿ ಮದುವೆಯ ಕನಿಷ್ಟ ವಯಸ್ಸು ಹೆಣ್ಣಿಗೆ 20, ಗಂಡಿಗೆ 22 ವರ್ಷ. ಮದುವೆಯಾಗುತ್ತಿರುವ ಸರಾಸರಿ ವಯಸ್ಸು ಗಂಡಿಗೆ ಸು. 26 ವರ್ಷ ಹೆಣ್ಣಿಗೆ ಸು. 24 ವರ್ಷ ಇದೆ. ಸಮಾನತೆಯನ್ನು ಸಾಧಿಸಲು ಅಲ್ಲಿ ಮಹಿಳಾ ಒಕ್ಕೂಟದ ಕಾಣಿಕೆ ದೊಡ್ಡ ಪ್ರಮಾಣದಲ್ಲಿದೆ.

**ಗ್ರೇಟ್‌ವಾಲ್ ಆಫ್ ಚೈನಾ**

ಚೀನಾದ ಗೋಡೆ 3,400 ಕಿ.ಮೀ. ಉದ್ದದ ಪ್ರಪಂಚದ ಅತಿ ಉದ್ದದ ಗೋಡೆ ಎಂದು ಪ್ರಸಿದ್ಧಿಯಾಗಿದೆ. ಕಲ್ಲು, ಇಟ್ಟಿಗೆ, ಮರ ಮತ್ತು ಇತ-ರೆ ವಸ್ತುಗಳಿಂದ ಕೋಟೆಯನ್ನು ನಿರ್ಮಿಸಲಾಗಿದೆ. ಇತರೆ ರಾಜರು ಮತ್ತು ಹೊರಗಿನ ದಾಳಿಗಳಿಂದ ರಕ್ಷಿಸಿಕೊಳ್ಳಲು ಪೂರ್ವದಿಂದ ಪಶ್ಚಿಮದ ಕಡೆಗೆ ಇತಿಹಾಸ ಪ್ರಸಿದ್ಧವಾದ ಗೋಡೆಯ ನಿರ್ಮಾಣ ಆಗಿದೆ. ಕ್ರಿಸ್ತಪೂರ್ವ 220 ರಿಂದ 206 ರ ನಡುವಿನ ಅವಧಿಯಲ್ಲಿ ಮೊದಲು ಕಟ್ಟಲಾದ ಗೋಡೆ ನಂತರ ನಾನಾ ಘಟ್ಟಗಳಲ್ಲಿ ವಿಸ್ತರಣೆಗೊಂಡಿದೆ. ಪುನರ್ ನಿರ್ಮಾಣಗೊಂಡಿದೆ. ಈ ಗೋಡೆ ಚೈನಾದ ಮುಖ್ಯವಾದ ಪ್ರೇಕ್ಷಣೀಯ ಸ್ಥಳಗಳಲ್ಲಿ ಒಂದು.

**ನಿಯೋಗದ ಸದಸ್ಯರು**

ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರಾದ ಜನಾರ್ಧನ ಪತಿಯವರು ನಿಯೋಗದ ನೇತೃತ್ವ ವಹಿಸಿದ್ದರು. ನಿಯೋಗದಲ್ಲಿದ್ದ ಇತರ ಸದಸ್ಯರು, ತಮಿಳುನಾಡಿನ ಕನಕರಾಜು, ಓರಿಸ್ಸಾದ ಸುರೇಶಚಂದ್ರ, ರಾಜಸ್ಥಾನದಿಂದ ಸುಮಿತ್ರಾ, ಆಂಧ್ರ ಪ್ರದೇಶದಿಂದ ನರಸಿಂಹರೆಡ್ಡಿ, ಪ.ಬಂಗಾಳದಿಂದ ದೇಬಲಿನಾ, ಕೇರಳದಿಂದ ಸತಿದೇವಿ, ತ್ರಿಪುರಾದಿಂದ ಸಮರ್ ಆದ್ಯ, ದೆಹಲಿಯಿಂದ ರಾಜೀವ್ ಕುಮಾರ್, ಮಧ್ಯಪ್ರದೇಶದಿಂದ ಸಂಧ್ಯಶೈಲಿ ಮತ್ತು ಕೇಂದ್ರ ಸಮಿತಿ ಕಛೇರಿಯಿಂದ ಸುಮಾ. ●



## ದಲಿತ ವಿಧವೆಯರಿಗೆ ಧಾರ್ಮಿಕ ಹಕ್ಕು....

ಪುಟ 7 ರಿಂದ

**'ಪೂಜಾರಿಗಳ ರಾಜಿ'**

ಜನಾರ್ಧನ ಪೂಜಾರಿಯವರು ಇತ್ತೀಚಿನ ವರ್ಷಗಳಲ್ಲಿ ಹಿಂದುತ್ವ ಪರಿವಾರದ ಚಿಂತನೆಗಳೊಂದಿಗೆ ರಾಜಿ ಮಾಡಿಕೊಳ್ಳುತ್ತಿದ್ದಾರೆ. ದೇವಾಲಯದ ನವೀಕರಣದ ಉತ್ಸವದಲ್ಲಿ ವೈದಿಕ ಧರ್ಮಗುರು ಶೃಂಗೇರಿ ಶಂಕರಾಚಾರ್ಯರ ಮಾರ್ಗದರ್ಶನ ಪಡೆದು, ನಾರಾಯಣ ಗುರುಗಳ ಹಾಗೂ ಗೋಕರ್ಣನಾಥ ದೇವಾಲಯ ಪರಂಪರೆಗೆ ವಿರೋಧವಾಗಿ ನಡೆದುಕೊಂಡರು. ಹಿಂದುತ್ವ ಸಾಂಸ್ಕೃತಿಕ ಪೋಷಕರಾಗಿರುವ ಧರ್ಮಸ್ಥಳದ ವೀರೇಂದ್ರ ಹೆಗಡೆಯವರೊಂದಿಗೆ ಬಹಳ ಕಾಲ ಸಾಮೀಪ್ಯ ಬಯಸದ ಜನಾರ್ಧನ ಪೂಜಾರಿಯವರು, ಇತ್ತೀಚೆಗೆ ಧರ್ಮಸ್ಥಳದ ಕರ್ಮಕಾಂಡಗಳು ಬಯಲಿಗೆ ಬಂದ ಸಂದರ್ಭದಲ್ಲಿಯೇ ಹೆಗಡೆಯವರಲ್ಲಿ ಆಪ್ತತೆ ಬೆಳೆಸಿರುವುದು ಅವರ ಕ್ರಾಂತಿಕಾರಿಕ ಸಾಧನೆಗಳ ಅನುಮಾನವನ್ನು ಹುಟ್ಟಿಸುವಂತಾಗಿದೆ. ಹೇಯವಾದ ಜಾತಿತಾರತಮ್ಯ ಕಂಡು ಬರುವ ಪಂಕ್ತಿಭೇದ ಮತ್ತು ಮಡೆಸ್ನಾನದಂತಹ ನಡವಳಿಕೆಗಳು ಕರಾವಳಿ ಜಿಲ್ಲೆಗಳಲ್ಲಿ ಪ್ರತಿಭಟನೆಗೆ ಒಳಗಾಗುತ್ತಿದ್ದರೂ ಜನಾರ್ಧನ ಪೂಜಾರಿಯವರು ಆ ಬಗ್ಗೆ ಒಂದು ಮಾತೂ ಆಡುವುದಿಲ್ಲ ಹಾಗೂ ತಮ್ಮ ನಿಲುವುಗಳನ್ನು ವ್ಯಕ್ತಪಡಿಸುವುದಿಲ್ಲ. ದಲಿತರು, ಬಡವರು, ಮಹಿಳೆಯರ ಮೂಲಭೂತವಾದ ಸಬಲೀಕರಣದ ಬಗ್ಗೆ, ಇಷ್ಟು ಕಾಲ ರಾಜಕೀಯ ಅನುಭವದ ಬಳಿಕವೂ ಯಾವೊಂದೂ ಕಾರ್ಯಕ್ರಮವನ್ನೂ ಅವರಾಗಲೀ ಅವರು ತುಂಬಾ ನಿಷ್ಠವಾಗಿರುವರ ಕಾಂಗ್ರೆಸ್ ಪಕ್ಷದಲ್ಲೂ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಧಾರ್ಮಿಕ, ಸಾಮಾಜಿಕ ರಂಗದಲ್ಲೂ ಬಲವಾದ ಪರಿವರ್ತನೆಗೆ ನಾರಾಯಣ ಗುರುಗಳ ಹಾಗೆ ಖಚಿತವಾದ ತಾತ್ವಿಕ ಪ್ರಣಾಳಿಕೆ ಹಾಗೂ ಅದನ್ನಾಧಾರಿತ ಕಾರ್ಯಕ್ರಮಗಳ ಆವಶ್ಯಕತೆಯಿದೆ ಎಂಬುದನ್ನು ಇದು ಸೂಚಿಸುತ್ತದೆ.

ಜನಾರ್ಧನ ಪೂಜಾರಿಯವರ ಸಾಮಾಜಿಕ ಬದಲಾವಣೆಯ ಕಾರ್ಯಕ್ರಮಗಳು ಧಾರ್ಮಿಕ ಸಂಪ್ರದಾಯಗಳಲ್ಲಿ ಗಾಢ ನಂಬುಗೆ ಇರುವ ಜನರಲ್ಲಿ ಬದಲಾವಣೆ ಬರಲು ಅವಶ್ಯಕವಾದುವು. ಆದರೆ ಅದರಾಚೆಗಿನ ಜನರ ಅದರಲ್ಲೂ ಯುವಜನರಿಗೆ ಅವರ ಕಾರ್ಯಕ್ರಮವೇನು?

ಗಂಡನನ್ನು ಕಳೆದುಕೊಂಡ ಮಹಿಳೆಯರು ಸದಾ ಅದೇ 'ವಿಧವಾ ಪ್ರಜ್ಞೆ'ಯಲ್ಲಿ ನರಳುತ್ತಿರುವುದು. ಇಲ್ಲ 'ವಿಧವೆ ಎನಿಸಿಕೊಂಡೂ ಧಾರ್ಮಿಕ ಹಕ್ಕುಗಳನ್ನು ಪಡೆದು' ಅದರ ವೈಭವೀಕರಣದಲ್ಲಿ ಮುಳುಗುವುದು. ಗಂಡ ಇಲ್ಲದ ಮಹಿಳೆಯರಿಗೆ ಈ ಎರಡನ್ನೂ ಬಿಟ್ಟು ಎಲ್ಲ ಸಾಮಾನ್ಯ ಮಹಿಳೆಯರಂತೆ ಸಹಜವಾಗಿ ಬದುಕುವ, ತಮ್ಮದೇ ಬದುಕನ್ನು ರೂಪಿಸಿಕೊಳ್ಳುವುದಕ್ಕೆ ಒತ್ತಾಸೆ ನೀಡುವ ಒದಗಿಸುವಂತಹ ನಿಟ್ಟಿನಲ್ಲಿ ಏನು ಆಗಬೇಕಿದೆ ಎಂದೂ ಜನಾರ್ಧನ ಪೂಜಾರಿಯವರೂ ಮತ್ತು ಎಲ್ಲರೂ ಯೋಚಿಸಬೇಕಿದೆಯಲ್ಲವೇ? ●

JANASHAKTHI KANNADA VARA PATRIKE NOV 2, 2014 Price : Rs. 10/-
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO
RNI No. KARKAN /2006/17926 Posted on every Satuarday
Licensed to Post without prepayment License No. WPP-283

ಭಾಗ – 2

# ನಾ ಕಂಡ ಚೈನಾ

ಎಸ್. ವರಲಕ್ಷ್ಮಿ


ಹೌಂಗ್ಲಾಂಗ್ ಗ್ರಾಮದ ಶಾಲೆಯಲ್ಲಿ ಆಟವಾಡುತ್ತಿರುವ ಮಕ್ಕಳ

**ಚೈನಾದ ಬೆಳವಣಿಗೆ :**

ಚೈನಾದ ದೇಶದ ಜನಸಂಖ್ಯೆ 136 ಕೋಟಿ. ಚೀನಾ ಕಮ್ಯೂನಿಸ್ಟ್ ಪಕ್ಷಕ್ಕೆ 93 ವರ್ಷಗಳ ದೀರ್ಘ ಇತಿಹಾಸ ಮತ್ತು ಅನುಭವವಿದೆ. 1921ರಲ್ಲಿ ಚೈನಾ ಕಮ್ಯೂನಿಸ್ಟ್ ಪಕ್ಷ–ಸಿಪಿಸಿ ಯಲ್ಲಿ 50 ಜನ ಮಾತ್ರ ಪಕ್ಷದ ಸದಸ್ಯರು ಇದ್ದರು. 2014ರಲ್ಲಿ 8 ಕೋಟಿ 60 ಲಕ್ಷ ಜನ ಸದಸ್ಯರಿದ್ದಾರೆ. ಚೀನಾದ ಒಟ್ಟು ಜನಸಂಖ್ಯೆಯ 6% ರಷ್ಟು. ಜರ್ಮನಿ ದೇಶದ ಜನಸಂಖ್ಯೆಯಷ್ಟು. ಅಥವಾ ಫ್ರಾನ್ಸ್, ಟರ್ಕಿಗಳ ಜನಸಂಖ್ಯೆಗಿಂತಲೂ ಹೆಚ್ಚು 'ಸಿಪಿಸಿ'ಯ ಸದಸ್ಯತ್ವವಿದೆ. 93 ವರ್ಷಗಳಲ್ಲಿ 3 ಹಂತಗಳ ಸಾಧನೆಗಳನ್ನು ಗುರುತಿಸಬಹುದು.
1. ಇಡೀ ಚೀನಾದೇಶದ ಸ್ವಾತಂತ್ರ್ಯ–ಪ್ರಜಾಪ್ರಭುತ್ವಕ್ಕಾಗಿನ ಹೋರಾಟ. (ಚೀನಾ 1949ರಲ್ಲಿ ಸ್ವಾತಂತ್ರ್ಯ ಗಳಿಸಿತು.) 2. ಜನತಾ ಪ್ರಜಾಪ್ರಭುತ್ವ ಕ್ರಾಂತಿ 3. ಸಮಾಜವಾದಿ ಸಮಾಜ ನಿರ್ಮಾಣ (ಈಗಿನ ಪ್ರಾಥಮಿಕ ಹಂತ)–ಇವು ಬಹುದೊಡ್ಡ ಸಾಧನೆ.

ಚೈನಾದ ಒಟ್ಟು ರಾಷ್ಟ್ರೀಯ ಉತ್ಪನ್ನ(ಜಿ.ಡಿ.ಪಿ.) 1978ರಲ್ಲಿ 362 ಬಿಲಿಯನ್ ಅಮೆರಿಕನ್ ಡಾಲರ್ ಆಗಿ–ತ್ತು. 2013 ರಲ್ಲಿ ಅದು 8,230 ಬಿಲಿಯನ್ ಅಮೆರಿಕನ್ ಡಾಲರ್‌ಗೆ ಏರಿದೆ. (2013 ರಲ್ಲಿ ಭಾರತದ ಜಿಡಿಪಿ 1,859 ಬಿಲಿಯನ್ ಡಾಲರ್ ಇತ್ತು.) ಚೈನಾ ದೇಶದ ಆರ್ಥಿಕ ಅಭಿವೃದ್ಧಿ ದರ 8.3 % ರಷ್ಟಿದೆ. ಪ್ರಪಂಚದಲ್ಲಿ ಆರ್ಥಿಕ ಶಕ್ತಿಯಾಗಿ ಇಂದು ಚೈನಾ 2ನೇ ಸ್ಥಾನಕ್ಕೇರಿದೆ. ದೊಡ್ಡ ಜನಸಂಖ್ಯೆ ಇರುವ ಚೈನಾ ದೇಶವು ತಲಾದಾಯದಲ್ಲಿ ಇನ್ನೂ ಸಾಕಷ್ಟು ಪ್ರಗತಿ ಸಾಧಿಸಬೇಕಾಗಿದೆ. ಆದರೆ ಒಟ್ಟು ಆರ್ಥಿಕತೆಯ ಗಾತ್ರದ ದೃಷ್ಟಿಯಲ್ಲಿ ಇನ್ನು ಕೆಲವೇ ವರ್ಷಗಳಲ್ಲಿ ಚೈನಾವು ಈಗ ಜಗತ್ತಿನ ನಂ. 1 ಆರ್ಥಿಕತೆ–ಯಾದ ಅಮೆರಿಕದ ಆರ್ಥಿಕತೆಯನ್ನು ಮೀರಿ ಮೊದಲ ಸ್ಥಾನಕ್ಕೆ ಏರಲಿದೆ ಎಂದು ಐಎಂಎಫ್ ಸೇರಿದಂತೆ ಹಲವು ಜಾಗತಿಕ ಆರ್ಥಿಕ ಸಂಸ್ಥೆಗಳು


ಹೌಂಗ್ಲಾಂಗ್ ಗ್ರಾಮೀಣ ಶಾಲೆಯಲ್ಲಿ ಮಕ್ಕಳು

ಮತ್ತು ಆರ್ಥಿಕ ತಜ್ಞರು ಅಂದಾಜು ಮಾಡಿದ್ದಾರೆ. ಚೈನಾದ ಆಮದು–ರಫ್ತುಗಳ ಮೌಲ್ಯ 389 ಬಿಲಿಯನ್ ಡಾಲರ್ (2013 ರಲ್ಲಿ ರಫ್ತು–207.74 ಬಿಲಿಯನ್ ಡಾಲರ್– ಆಮದು 182.10 ಬಿಲಿಯನ್ ಡಾಲರ್.) ತಲುಪಿದೆ.

**ಹೇಗೆ ಸಾಧ್ಯವಾಯಿತು**

ಚೀನಾ ದೇಶದ ಆರ್ಥಿಕತೆ ಜಗತ್ತಿನಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ–ಯಾಗಿದೆ. ಜನರ ಜೀವನ ಮಟ್ಟವು ನಿರಂತರವಾಗಿ ಸುಧಾರಿಸುತ್ತ ಉತ್ತಮಗೊಳ್ಳುತ್ತಾ ನಡೆದಿದೆ. ಇದನ್ನು ಕೇವಲ ಅಂಕಿ ಸಂಖ್ಯೆಗಳ ಆಧಾರದಲ್ಲಿ ಹೇಳುವುದಲ್ಲ. ನಮ್ಮ ನಿಯೋಗದ ಸದಸ್ಯರು ಚೈನಾದ ಜನಜೀವನವನ್ನು ನೋಡಿದಾಗ ಈ ಅಂಶವು ಮನದಟ್ಟಾಯಿತು.

ಚೈನಾ ಸಾಧಿಸುತ್ತಿರುವ ಈ ಅಗಾದ–ಪ್ರಗತಿ ಸಾಧ್ಯವಾಗುತ್ತಿರುವುದು ಹೇಗೆ? ಎಂಬುದು ಪ್ರಶ್ನೆ. ಎಷ್ಟೋ ಜನರು ಚೈನಾದಲ್ಲಿ ಸಮಾಜವಾದವೇ ಉಳಿದಿಲ್ಲ. ಅಲ್ಲಿ ಮಾರುಕಟ್ಟೆ ಆರ್ಥಿಕತೆ ಬಂದು ಬಿಟ್ಟಿದೆ ಎನ್ನುತ್ತಾರೆ. ಹಾಗಾದರೆ ಚೈನಾದಲ್ಲಿ ಇಂದು ಸಾಧಿಸಲು ಪ್ರಯತ್ನಿಸಲಾಗುತ್ತಿರುವುದೇನು.? ಅದನ್ನು ಅರ್ಥ ಮಾಡಿಕೊಳ್ಳುವುದು ಹೇಗೆ? ಎಂಬ ಪ್ರಶ್ನೆ ಇಲ್ಲಿ ಏಳುತ್ತದೆ. 'ಸಮಾಜವಾದದ ಅಡಿಯಲ್ಲಿ ಉತ್ಪಾದನಾ ಶಕ್ತಿಗಳ ಮಟ್ಟ ಮತ್ತು ಉತ್ಪಾದನಾ ಸಂಬಂಧಗಳ ನಡುವೆ ಸಾಮರಸ್ಯ ಸಾಧಿಸುವ ಪ್ರಯತ್ನ ನಡೆಸಲಾಗುತ್ತಿದೆ. ಮುಂದುವರೆದ ಸಮಾಜವಾದಿ


ಪುಟ 15 ಕ್ಕೆ

# ರಾಕೆಟ್‌ಗಳಲ್ಲಿ ಬಳಸುವ ಕ್ರಯೋಜೆನಿಕ್ಸ್ ತಂತ್ರಜ್ಞಾನ

ಮಂಗಳಯಾನದ ಯಶಸ್ಸಿನ ಜೊತೆ ಜೊತೆಗೇ ಹಲವು ತಾಂತ್ರಿಕ ಪದಗಳನ್ನು ದಿನಪತ್ರಿಕೆಗಳು ಬಳಸುತ್ತಿರುವುದನ್ನು ಕಾಣುತ್ತಿದ್ದೇವೆ. ಕ್ರಯೋಜೆನಿಕ್ಸ್ ಎಂಬ ಪದ ಸಾಮಾನ್ಯ ಜನತೆ ಮತ್ತು ಮಾಧ್ಯಮದವರಲ್ಲಿ ಹೆಚ್ಚೆಚ್ಚು ಆಸಕ್ತಿ ಉಂಟು ಮಾಡುತ್ತಿರುವ ಪದಗಳಲ್ಲೊಂದು. ಇಂತಹ ಅತ್ಯಮೂಲ್ಯ ತಂತ್ರಜ್ಞಾನದ ಪರಿಣತಿಯನ್ನು ಹೊಂದುವಲ್ಲಿ ನಮ್ಮ ವಿಜ್ಞಾನಿಗಳು ಯಶಸ್ವಿಯಾಗಿರುವುದಕ್ಕೆ ದಿನಪತ್ರಿಕೆಗಳು ಅಭಿನಂದನೆಗಳನ್ನು ಹೇಳುತ್ತಿವೆ. ಅಮೇರಿಕಾ ದೇಶ ನಮಗೆ ಈ ತಂತ್ರಜ್ಞಾನ ನೀಡಲು ಹಿಂದೆ ನಿರಾಕರಿಸಿತ್ತು. ರಷ್ಯಾ ತಂತ್ರಜ್ಞಾನ ನೀಡಲು ತಯಾರಾದಾಗ ಅಮೆರಿಕ ಒತ್ತಡ ಹಾಕಿ ಭಾರತಕ್ಕೆ ತಂತ್ರಜ್ಞಾನ ಸಿಗದಂತೆ ಮಾಡಿತು. ಈ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುತ್ತಿದ್ದ ಕೆಲವು ವಿಜ್ಞಾನಿಗಳ ಮೇಲೆ ಸುಳ್ಳು ಆರೋಪ ಮಾಡಿದ್ದರಿಂದಾಗಿ ನಮ್ಮ ಬಾಹ್ಯಾಕಾಶ ಕಾರ್ಯಕ್ರಮ ಬಹುತೇಕ ಸಂಕಷ್ಟಕ್ಕೆ ಬಿದ್ದಿತ್ತು. ಏನಿದು ಅಂತಹ ಮಾಂತ್ರಿಕ ಇಂಜಿನ್ ತಂತ್ರಜ್ಞಾನ? ಅದೇ–ಕೆ ಅಷ್ಟೊಂದು ಪ್ರಾಮುಖ್ಯತೆ ಹೊಂದಿದೆ? ಎಂಬುದನ್ನು ತಿಳಿಯೋಣ.

ಎಲ್ಲ ಸಾಮಾನ್ಯ ರಾಕೆಟ್ ಇಂಜಿನ್‌ಗಳಿಗೆ ಉರುವಲು ಮತ್ತು ಅದನ್ನು ಉರಿಸಲು ಆಮ್ಲಜನಕದಂತಹ ಉರಿಸುವ ವಸ್ತು ಬೇಕು. ಉರುವಲು ಅಥವಾ ಇಂಧನದ ಪಾತ್ರವನ್ನು ಅರ್ಥಮಾಡಿಕೊಳ್ಳುವುದು ಸುಲಭ. ಇಂಧನವು ಉರಿದು ಅದರ ಶಕ್ತಿಯಿಂದ ರಾಕೆಟ್ ಮೇಲೇರುತ್ತದೆ. ಇಂಧನವನ್ನು ದಹಿಸಲು (ಈ ಕ್ರಿಯೆಯನ್ನು ತಾಂತ್ರಿಕವಾಗಿ ದಹನ ಕ್ರಿಯೆ ಎನ್ನುತ್ತಾರೆ) ಆಮ್ಲಜನಕ ಅವಶ್ಯ. ರಾ–ಕೆಟ್ ಮೇಲೇರಿ ಅಂತರಿಕ್ಷದೆಡೆಗೆ ಪಯಣ ನಡೆಸುತ್ತಿದ್ದಂತೆ ಆಮ್ಲಜನಕ ಬಹುತೇಕ ಇಲ್ಲದಿರುವಂತಹ ಸನ್ನಿವೇಶದಲ್ಲಿ ರಾಕೆಟ್ ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ಅದು ಇಂಧನದ ಜೊತೆಗೆ ತನ್ನದೇ ಸ್ವಂತ ಆಮ್ಲಜನಕವನ್ನು ಸಹ ಕೊಂಡೊಯ್ಯಬೇಕು. ದಹನ ಛೇಂಬರಿನಲ್ಲಿ ಉರುವಲು ಮತ್ತು ಉರಿಸುವ ವಸ್ತು ದಹಿಸಿ ಬಿಸಿಯಾದ ಅನಿಲಗಳು ಹೊರಗೆ ಬರುತ್ತವೆ. ಇಂತಹ ಬಿಸಿ ಅನಿಲಗಳು ರಾಕೆಟನ್ನು ಮೇಲಕ್ಕೆ ಹೊತ್ತೊಯ್ಯಲು ಸಹಾಯ ಮಾಡುತ್ತವೆ.

ಕ್ರಯೋಜೆನಿಕ್ಸ್ ಎಂಬ ಪದವು ಗ್ರೀಕ್ ಭಾಷೆಯದು. ಅದರರ್ಥ 'ಶೀತಲ ವಾತಾವರಣದ ಉತ್ಪಾದನೆ' ಎಂದು. ಕ್ರಯೋಜೆನಿಕ್ಸ್‌ನ ಇತಿಹಾಸ ಸುಮಾರು 70 ವರ್ಷಗಳಷ್ಟು ಹಿಂದಿನದು. ಎರಡನೇ ವಿಶ್ವ ಮಹಾಯುದ್ಧದ ಸಂದರ್ಭದಲ್ಲಿ, ಶಸ್ತ್ರಾಸ್ತ್ರಗಳಾಗಿ ಬಳಸಲು ರಾಕೆಟ್‌ಗಳನ್ನು ಅಭಿವೃದ್ಧಿಪಡಿಸಲಾಯಿತು. ಸೋವಿಯತ್ ರಷ್ಯಾ, ಅಮೇರಿಕಾ ಮತ್ತು ಜರ್ಮನಿಯ ಇಂಜಿನಿಯರುಗಳು ರಾಕೆಟ್‌ಗಳನ್ನು ಉಡಾಯಿಸಲು ಹಲವು ತಂತ್ರಜ್ಞಾನಗಳನ್ನು ಪ್ರಯೋಗಕ್ಕೆ ಒಳಪಡಿಸಿದರು. ರಾ–ಕೆಟ್ ಹೊತ್ತೊಯ್ಯಲು ಅಗಾಧ ಶಕ್ತಿ ನೀಡಬೇಕಾದರೆ, ಹೆಚ್ಚಿನ ಪ್ರಮಾಣದಲ್ಲಿ ಉರುವಲು ಮತ್ತು ಉರಿಸುವ ವಸ್ತುಗಳನ್ನು ಪೂರೈಕೆ ಮಾಡಬೇಕು. ಇಂತಹ ಸನ್ನಿವೇಶದಲ್ಲಿ ಒಳ್ಳೆಯ ಜೋಡಿಯೆಂದರೆ ಉರಿಸುವ ವಸ್ತು ಆಮ್ಲಜನಕವಾದರೆ, ಉರುವಲಾಗಿ ಜಲಜನಕವನ್ನು ಬಳಸುವುದು. ಆಮ್ಲಜನಕ ಮತ್ತು ಜಲಜನಕ ಇವೆರಡನ್ನೂ ಅನಿಲ ರೂಪದಲ್ಲಿ ಸಂಗ್ರಹಿಸಿಡಲು ಅತಿ ದೊಡ್ಡ ಸಂಗ್ರಹಾಗಾರಗಳು ಬೇಕಾಗುತ್ತವೆ. ಆದ್ದರಿಂದ ಅವುಗಳನ್ನು ದ್ರವ ರೂಪದಲ್ಲಿ ಸಂಗ್ರಹಿಸಿಡುವುದು ಉತ್ತಮ ವಿಧಾನ. ಹೀಗಾಗಿ ಈ ಅನಿಲಗಳನ್ನು ಅತಿ ಕಡಿಮೆ ಶಾಖದಲ್ಲಿ ತಂಪುಗೊಳಿಸುವುದು ಅವಶ್ಯವಾಗುತ್ತದೆ. ಅತಿ ಕಡಿಮೆ ಶಾಖವೆಂದರೆ ಮೈನಸ್ 150 ಡಿಗ್ರಿ ಸೆಲ್ಸಿಯಸ್. ಇದು ಕ್ರಯೋಜೆನಿಕ್ಸ್ ತಂತ್ರಜ್ಞಾನದ ಉಗಮ.




ಈ ಉಷ್ಣಾಂಶವು ಅದೆಷ್ಟು ತೀವ್ರತರದ ತಂಪೆಂಬುದನ್ನು ಅರ್ಥ ಮಾಡಿಕೊಳ್ಳಲು ಡಿಸೆಂಬರ್ ತಿಂಗಳಲ್ಲಿ ನಮ್ಮ ರಾಜ್ಯದಲ್ಲಿ ದಾಖಲಾಗುವ ಚಳಿ ಅತಿ ಕಡಿಮೆಯೆಂದರೆ 8 ರಿಂದ 10 ಡಿಗ್ರಿ ಸೆಲ್ಸಿಯಸ್. ನಮ್ಮ ರೆಫ್ರಿಜರೇಟರ್‌ಗಳು ಕೇವಲ ಮೈನಸ್ 20 ಡಿಗ್ರಿ ಉಷ್ಣಾಂಶದಷ್ಟು ತಂಪುಗೊಳಿಸಬಲ್ಲುವಷ್ಟೇ. ಜಮ್ಮು ಕಾಶ್ಮೀರದ ಸಿಯಾಚೆನ್ ಮಂಜುಗಡ್ಡೆ ಪ್ರದೇಶಗಳಲ್ಲಿ ಮೈನಸ್ 40 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶವೇ ಶತ್ರುವಾಗಿ ಸೈನಿಕರನ್ನು ಕೊಲ್ಲಬಲ್ಲುದು! ಉರಿಸುವ ವಸ್ತು ಮತ್ತು ಉರುವಲುಗಳನ್ನು ಅಷ್ಟೊಂದು ಕಡಿಮೆ ಉಷ್ಣಾಂಶಕ್ಕೆ ತಂಪುಗೊಳಿಸುವುದು ನಿಜಕ್ಕೂ ಸವಾಲಿನ ಕೆಲಸವೇ ಸರಿ. ಸಾಮಾನ್ಯ ವಸ್ತುಗಳು ಇಷ್ಟು ಕಡಿಮೆ ತಂಪಿನ ಉಷ್ಣಾಂಶ (ಶೀತಾಂಶ?!) ವನ್ನು ತಾಳಲಾರವು. ಇದಕ್ಕಾಗಿ ತಂಪುಗೊಳಿಸುವ ತಂತ್ರಜ್ಞಾನಗಳ ಆವಿಷ್ಕಾರದ ಜೊತೆಗೆ ಅಷ್ಟು ತಂಪಿನ ಅನಿಲಗಳನ್ನು ಹಿಡಿದಿಡುವ ಶಕ್ತಿಯುಳ್ಳ ವಸ್ತುಗಳನ್ನು ಸಹ ಅಭಿವೃದ್ಧಿಪಡಿಸುವುದು ಅವಶ್ಯವಿತ್ತು. ಇಂತಹ ಸಂಕ್ಲಿಷ್ಟಮಯವಾದ ಕ್ರಯೋಜೆನಿಕ್ಸ್ ತಂತ್ರಜ್ಞಾನದ ಮೇಲೆ ಪರಿಣತಿ ಹೊಂದುವುದು ನಿಜಕ್ಕೂ ಸವಾಲೇ. ಆಮ್ಲಜನಕ ಮತ್ತು ಜಲಜನಕವನ್ನೇ ಏಕೆ ಬಳಸಬೇಕು ಎಂದು ನೀವು ಕೇಳಬಹುದು? ಇವುಗಳ ಬದಲು ಬೇರೆ ಜೋಡಿಯನ್ನು ನಾವು ಬಳಸಲಾಗದೇ? ಇದಕ್ಕೆ ಉತ್ತರವೆಂದರೆ, ಇವೆರಡು ಜೋಡಿ ಅನಿಲಗಳು ಅತಿ ಕಡಿಮೆ ಸಮಯದಲ್ಲಿ ಬೃಹತ್ ಪ್ರಮಾಣದ ಶಕ್ತಿಯನ್ನು ಉಂಟು ಮಾಡಬಲ್ಲವಾದ್ದರಿಂದ ವಿಜ್ಞಾನಿಗಳು ಇವುಗಳಿಗೇ ಆದ್ಯತೆ ನೀಡಿದ್ದಾರೆ.

ಜಿಎಸ್‌ಎಲ್‌ವಿ 3 ರಾಕೆಟ್ ಉಡಾಯಿಸಲು ಬಳಸುವ ಭಾರತದ ಸಿಇ~20 ಕ್ರಯೋಜೆನಿಕ್ ಇಂಜಿನ್ ಮಾಡೆಲ್‌ನ ಅವತರಣಿಕೆ



**JANASHAKTHI KANNADA VARA PATRIKE:** Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**